ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 15 ಮಂಗಳವಾರ 2022

ಸಂಪುಟ: 43 | ಸಂಚಿಕೆ: 208 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾಂಗ್ರೆಸ್‌ನಿಂದ ಕಣಕ್ಕಿಳಿಯಲು ನಿರಾಸಕ್ತಿ!

● ಪಕ್ಷದಿಂದ ಸ್ಪರ್ಧಿಸುವವರಿಗೆ ಅರ್ಜಿ ಸಲ್ಲಿಸಲು ಒಂದೇ ದಿನ ಬಾಕಿ; ಇಲ್ಲಿವರೆಗೆ ಕೇವಲ 315 ಮಂದಿ ಸಲ್ಲಿಕೆ ● ಅವಧಿ ವಿಸ್ತರಿಸಲು ಪಕ್ಷ ನಿರ್ಧಾರ

ಬೆಂಗಳೂರು, ನ. 14 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ ಎಂಬ ನಿರೀಕ್ಷೆಯಲ್ಲಿರುವ ಕಾಂಗ್ರೆಸ್‌ಗೆ ಅಭ್ಯರ್ಥಿಗಳಾಗಲು ಕಾರ್ಯಕರ್ತರೇ ಆಸಕ್ತಿ ತೋರುತ್ತಿಲ್ಲ.

ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವ ಆಕಾಂಕ್ಷಿಗಳು ಕಚೇರಿಯಿಂದ ಅರ್ಜಿ ಪಡೆದು, ಎರಡು ಲಕ್ಷ ರೂ. ಕಟ್ಟಡ ನಿಧಿಗೆ ನೀಡಿ, ಅರ್ಜಿ ಸಲ್ಲಿಸುವಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದ್ದರು. ಅಷ್ಟೇ ಅಲ್ಲ ನವೆಂಬರ್ 5ರಿಂದ 15 ರೊಳಗೆ ಅರ್ಜಿ ಪಡೆದು, ಅರ್ಜಿಯನ್ನು ದಾಖಲೆಗಳ ಸಮೇತ ಕಚೇರಿಗೆ ತಲುಪಿಸುವಂತೆಯೂ ಗಡುವು ನೀಡಿದ್ದರು. ಅಧ್ಯಕ್ಷರು ನೀಡಿದ ಗಡುವಿನಲ್ಲಿ ನಿರೀಕ್ಷಿತ ಪ್ರಮಾಣದ ಅರ್ಜಿಗಳು ಮತ್ತು ಸಮರ್ಥ ಅಭ್ಯರ್ಥಿಗಳು ಅರ್ಜಿ ಸಲ್ಲಿಸದ ಕಾರಣ ನಿಗದಿತ ಗಡುವನ್ನು ಮತ್ತೆ ವಿಸ್ತರಿಸಲು ಪಕ್ಷ ತೀರ್ಮಾನಿಸಿದೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಂದ 2000 ಮಂದಿ ಅರ್ಜಿ ಪಡೆದು, 1500 ಮಂದಿ ದಾಖಲೆ ಸಮೇತ ಟಿಕೆಟ್ ಕೇಳಬಹುದೆಂಬ ನಿರೀಕ್ಷೆ ಇತ್ತು. ಆದರೆ ಕಡೇ ದಿನಕ್ಕೆ ಮುನ್ನ ದಿನವಾದ ಇಂದು ಕೇವಲ 800 ಅರ್ಜಿಗಳು ವಿಲೇವಾರಿಯಾಗಿ ಸಂಜೆಯವರೆಗೂ 315 ಆಕಾಂಕ್ಷಿಗಳು ಅರ್ಜಿ ಹಿಂತಿರುಗಿಸಿದ್ದಾರೆ. ಆಕಾಂಕ್ಷಿಗಳಲ್ಲೂ ಸಮರ್ಥರಿಲ್ಲದ ▶ 8ನೇ ಪುಟಕ್ಕೆ

ಹಲವು ಕಡೆ ಆಹ್ವಾನವೇನೋ ಬಂದಿದೆ: ಆದರೆ ನನ್ನ ಸ್ಪರ್ಧೆ ನಿರ್ಧರಿಸುವುದು 'ಹೈಕಮಾಂಡ್'

- ● ವಿಪಕ್ಷ ನಾಯಕ ಸಿದ್ದರಾಮಯ್ಯ ಸ್ಪಷ್ಟನೆ
- ● ಕೋಲಾರದಲ್ಲಿ 'ಸ್ಪರ್ಧೆ' ಪರಿಸ್ಥಿತಿ ಉತ್ತಮವಾಗಿದೆ
- ● ಬೆಂಗಾಡಲ್ಲಿ ಈಗ ಅಂತರ್ಜಲ ಸುಧಾರಿಸಿದೆ
- ● ಕುಮಾರಸ್ವಾಮಿ 'ಪುನರ್ಜನ್ಮ' ಹೇಳಿಕೆ ಬಾಲಿಶವಾದುದು



ಮೈಸೂರು, ನ.14(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಆಹ್ವಾನ ನೀಡುತ್ತಿದ್ದಾರೆ. ಆದರೆ, ನಾನು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬುದನ್ನು ನಿರ್ಧರಿಸುವುದಕ್ಕೆ ಹೈಕಮಾಂಡ್‌ಗೆ ಬಿಟ್ಟಿದ್ದೇನೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.


ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೋಲಾರದಲ್ಲಿ ಸ್ಪರ್ಧೆ ಮಾಡುವಂತೆ ಅಲ್ಲಿನ ಜನರು ಹಾಗೂ ಮುಖಂಡರು ಒತ್ತಾಯಿಸುತ್ತಿದ್ದಾರೆ. ಶನಿವಾರ ಕೋಲಾರಕ್ಕೆ ತೆರಳಿದ್ದಾಗ ಅತ್ಯುತ್ತಮವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಕೊಟ್ಟ ಯೋಜನೆಗಳಿಂದ ಕೋಲಾರದಲ್ಲಿ ಪರಿಸ್ಥಿತಿ ಉತ್ತಮವಾಗಿದೆ. ಅದರಲ್ಲೂ ರೈತರು ಸಂತೋಷಗೊಂಡಿದ್ದಾರೆ. ಕೃಷಿ ಚಟುವಟಿಕೆ ಸುಧಾರಣೆ ಕಂಡಿದೆ. ನಿನ್ನೆ ಪ್ರವಾಸದ ವೇಳೆ ಸಾಕಷ್ಟು ಮಂದಿ ರೈತರು, ಮುಖಂಡರು ಆ ವಿಚಾರವನ್ನು ಪ್ರಸ್ತಾಪಿಸಿದರು ಎಂದರು.

ಈ ಹಿಂದೆ ಕೋಲಾರದಲ್ಲಿ 1200 ಅಡಿ ಕೊಳವೆ ಬಾವಿ ತೋಡಿದರೂ ನೀರು ಬರುತ್ತಿರಲಿಲ್ಲ. ಅಂತರ್ಜಲದ ಪ್ರಮಾಣ ಪಾತಾಳಕ್ಕೆ ಕುಸಿದಿತ್ತು. ರೈತರು ಕಂಗೆಟ್ಟಿದ್ದರು. ಕೃಷಿ ಚಟುವಟಿಕೆಗೆ ಕೊಳವೆ ಬಾವಿಗಳಲ್ಲಿ ನೀರು ಬರದೇ ಸಂಕಷ್ಟಕ್ಕೆ ಒಳಗಾಗಿದ್ದರು. ಇದನ್ನು ಮನಗಂಡು ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಕೆಸಿ. ವ್ಯಾಲಿ, ▶ 8ನೇ ಪುಟಕ್ಕೆ

ಮತ್ತೆ ಮೊಳಗಿದ 'ಮುಂದಿನ ಸಿಎಂ' ಘೋಷಣೆ

ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿಪಕ್ಷ ನಾಯಕ ಸಿದ್ದರಾಮಯ್ಯ ಸೋಮವಾರ ಮೈಸೂರಿಗೆ ಆಗಮಿಸುತ್ತಿದ್ದಂತೆ ರಿಂಗ್ ರಸ್ತೆ ಬಳಿ ಅವರ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಘೋಷಣೆ ಕೂಗಿ ಸ್ವಾಗತಿಸಿದರು. ಪಟಾಕಿ ಸಿಡಿಸಿ, ಹಾರ ತುರಾಯಿ ಹಾಕಿ ಬರಮಾಡಿಕೊಂಡರು.

ಕೆಬಿಜಿಯವರ ಛೂಮಂತ್ರ... ಛೂಮಂತ್ರ...



ಗೋವೆಯಲ್ಲಿ ಆಚರಿಸಿದ ದೀಪಾವಳಿ–1

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ ■ ಪುಟ–4

ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ವರ್ಗಾವಣೆ

ಬಿ.ರಮೇಶ್ ನೂತನ ಪೊಲೀಸ್ ಆಯುಕ್ತ



ಬಿ.ರಮೇಶ್



ಡಾ.ಚಂದ್ರಗುಪ್ತ

ಮೈಸೂರು, ನ. 14 (ಆರ್‌ಕೆ)– ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರನ್ನು ಮಂಗಳೂರಿನ ಪಶ್ಚಿಮ ವಲಯ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಡಿಐಜಿ) ಆಗಿ ವರ್ಗಾವಣೆ ಮಾಡಲಾಗಿದೆ. ಮೈಸೂರು ನಗರದ ನೂತನ ಪೊಲೀಸ್ ಆಯುಕ್ತರಾಗಿ ಬೆಂಗಳೂರಿನ ಸಿಐಡಿ ಎಸ್ಪಿಯಾಗಿರುವ 2009ನೇ ತಂಡದ ಐಪಿಎಸ್ ಅಧಿಕಾರಿ ಬಿ.ರಮೇಶ್ ಅವರನ್ನು ▶ 8ನೇ ಪುಟಕ್ಕೆ

ನಂದಿನಿ ಹಾಲಿನ ದರ ಹೆಚ್ಚಳಕ್ಕೆ ಸಿಎಂ ತಡೆ






ಬೆಂಗಳೂರು, ನ.14– ನಂದಿನಿ ಬ್ರ್ಯಾಂಡ್‌ನ ಎಲ್ಲ ಮಾದರಿಯ ಹಾಲು ಮತ್ತು ಮೊಸರಿನ ದರವನ್ನು ಮಂಗಳವಾರದಿಂದಲೇ ಪ್ರತಿ ಲೀಟರ್‌ಗೆ ರೂ. 3ರಷ್ಟು ಹೆಚ್ಚಳ ಮಾಡಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ಕೈಗೊಂಡಿದ್ದ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆಯಂತೆ ತಡೆ ಹಿಡಿಯಲಾಗಿದೆ.

ಹಾಲಿನ ದರ ಹೆಚ್ಚಿಸುವ ಪ್ರಸ್ತಾವಕ್ಕೆ ಕೆಎಂಎಫ್ ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಮಂಗಳವಾರ ದಿಂದಲೇ ಪರಿಷ್ಕೃತ ದರ ಜಾರಿಗೆ ಬರಲಿದೆ ಎಂದು ಮಂಡಳಿ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸೋಮವಾರ ಪ್ರಕಟಿಸಿದ್ದರು. ಹೆಚ್ಚಳದ ಪೂರ್ಣ ಮೊತ್ತವನ್ನು ರೈತರಿಗೆ ವರ್ಗಾಯಿಸುವ ಘೋಷಣೆಯನ್ನೂ ಮಾಡಿದ್ದರು. ಕಲಬುರಗಿ ಜಿಲ್ಲಾ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ, ಹಾಲಿನ ದರ ಏರಿಕೆ ಕುರಿತು ಇದೇ 20 ರಂದು ಕೆಎಂಎಫ್ ಅಧ್ಯಕ್ಷರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸೋಮವಾರ ಸಂಜೆ ಮಾಧ್ಯಮಗಳಿಗೆ ಹೇಳಿಕೆ ನೀಡಿದರು. ಆ ಬಳಿಕ ಮಂಡಳಿ ಅಧ್ಯಕ್ಷರ ಜತೆಗೂ ದೂರವಾಣಿ ಮೂಲಕ ಚರ್ಚೆ ನಡೆಸಿದರು. ಮುಖ್ಯಮಂತ್ರಿ ಯವರ ಮಧ್ಯ ಪ್ರವೇಶದ ನಂತರ ದರ ಹೆಚ್ಚಳದ ತೀರ್ಮಾನವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿ ನೆರೆಮನೆಯವರಿಗೆ 24 ಗಂಟೆಯ ನೋಟಿಸ್

ಇಂದು ಇಲ್ಲವೇ ನಾಳೆ ಅಕ್ರಮ ನಿರ್ಮಾಣ ತೆರವಿಗೆ ಪಾಲಿಕೆ ಸಿದ್ಧತೆ



ಮೈಸೂರು, ನ.14 (ಆರ್‌ಕೆಬಿ)– ಹತ್ಯೆಗೀಡಾದ ಗುಪ್ತಚರ ಇಲಾಖೆ (ಇಂಟೆಲಿಜೆನ್ಸ್ ಬ್ಯೂರೋ–ಐಬಿ) ನಿವೃತ್ತ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಪಕ್ಕದ ಮನೆಯ (ಮಾದಪ್ಪ)ವರಿಗೆ ಅಕ್ರಮವಾಗಿ ನಿರ್ಮಿಸಿರುವ ಭಾಗವನ್ನು ತೆರವುಗೊಳಿಸಲು ಮೈಸೂರು ಮಹಾನಗರಪಾಲಿಕೆಯು ಇಂದು ಮತ್ತೊಮ್ಮೆ 24 ಗಂಟೆಗಳ ಅಧಿಕೃತ ನೋಟಿಸ್ ನೀಡಿದೆ. ಕುಲಕರ್ಣಿ ಅವರು ನ.4ರಂದು ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ಎಂದಿನಂತೆ ಸಂಜೆ ವಾಯುವಿಹಾರ ದಲ್ಲಿದ್ದಾಗ ಮಾದಪ್ಪ ಅವರ ಕಿರಿಯ ಮಗ ಕಾರು ಡಿಕ್ಕಿ ಹೊಡೆಸಿ ಹತ್ಯೆಗೈದಿದ್ದ. ಅಕ್ರಮ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸೋಮ ವಾರ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಗರಪಾಲಿಕೆಯ ವಲಯ–3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಕುಲಕರ್ಣಿ ಅವರ ಪಕ್ಕದ ಮನೆಯ ಅಕ್ರಮ ಭಾಗದ ತೆರವಿಗೆ ನ.12ರವರೆಗೆ ಗಡುವು ನೀಡಲಾಗಿತ್ತು. ಆದರೆ ಸರಣಿ ರಜೆಗಳಿಂದಾಗಿ ಪಾಲಿಕೆ ಕ್ರಮದಲ್ಲಿ ▶ 8ನೇ ಪುಟಕ್ಕೆ

ಅನಧಿಕೃತವಾಗಿ ವಾಸವಿರುವವರ ಹೊರ ಹಾಕಿ ಅರ್ಹರಿಗೆ ಆಶ್ರಯ ನೀಡಿ

ದಿಶಾ ಸಭೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ತಾಕೀತು





ಮೈಸೂರು, ನ. 14 (ಆರ್‌ಕೆ)– ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ ಮನೆಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಹೊರ ಹಾಕಿ ಅರ್ಹ ಬಡ ಕುಟುಂಬದವರಿಗೆ ಆಶ್ರಯ ನೀಡಿ ಎಂದು ಸಂಸದ ಪ್ರತಾಪ್ ಸಿಂಹ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಂಡಳಿಯಿಂದ ನಿರ್ಮಿಸಿರುವ ಬಹುತೇಕ ಮನೆಗಳಲ್ಲಿ ಅನರ್ಹ ಹಾಗೂ ಆಯ್ಕೆ ಯಾಗದ ವ್ಯಕ್ತಿಗಳು ಅನಧಿಕೃತವಾಗಿ ಹಲವು ವರ್ಷಗಳಿಂದ ವಾಸಿಸುತ್ತಿದ್ದರೂ ಅವರನ್ನು ಖಾಲಿ ಮಾಡಿಸದಿರುವು ದರಿಂದ ನಿಜವಾದ ಬಡವರು, ನಿರಾಶ್ರಿತರು ಗುಡಿಸಲಿ ನಲ್ಲಿ ವಾಸಿಸುವಂತಾಗಿದೆ ಎಂದರು. ಸ್ಥಳಕ್ಕೆ ಭೇಟಿ ನೀಡಿ ದಾಖಲಾತಿ ಪರಿಶೀಲಿಸಿ ಅನರ್ಹರೆಂದು ಕಂಡು ಬಂದಲ್ಲಿ ಪೊಲೀಸ್ ಭದ್ರತೆ ಪಡೆದು ತೆರವುಗೊಳಿಸಿ, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳಿಗೂ ಸರಿಯಾದ ಮಾಹಿತಿ ನೀಡಿ ಅವರ ಸಹಕಾರವನ್ನೂ ಪಡೆದು ಕಾರ್ಯಾಚರಣೆ ಮಾಡಿ ಅಲ್ಲಿಗೆ ನಿಜವಾದ ಅರ್ಹ ಫಲಾನುಭವಿ ಕುಟುಂಬ ದವರು ವಾಸಿಸಲು ಅವಕಾಶ ಕಲ್ಪಿಸಿ ಎಂದು ಸಂಸದರು ಸೂಚನೆ ನೀಡಿದರು. ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸುವ ಮನೆಗಳ ಜೊತೆಗೆ ರಸ್ತೆ, ಚರಂಡಿ, ಎಸ್‌ಟಿಪಿ, ಕುಡಿಯುವ ನೀರು, ನೈರ್ಮಲ್ಯ, ವಿದ್ಯುತ್ ಸಂಪರ್ಕದಂತಹ ಮೂಲ ಸೌಕರ್ಯ ಕಲ್ಪಿಸಬೇಕು ಹಾಗೂ ನಿರ್ವಹಣೆ ಮಾಡುವುದೂ ಸಹ ನಿಮ್ಮ ಜವಾಬ್ದಾರಿಯಾಗಿದ್ದು, ಆಗಿಂದಾಗ್ಗೆ ಆ ಬಡಾವಣೆಗಳಿಗೆ ಭೇಟಿ ನೀಡಿ ಸಮಸ್ಯೆಗಳಿದ್ದರೆ ಪರಿಹರಿಸಬೇಕು ಎಂದು ಅವರು ತಿಳಿಸಿದರು.

14000 ಮನೆಗಳಿಗೆ ಬೇಡಿಕೆ: ಮೈಸೂರು ನಗರ ಸೇರಿ ಜಿಲ್ಲೆಯಾದ್ಯಂತ 14000 ಮನೆಗಳಿಗೆ ಬೇಡಿಕೆ ಇದೆ ಎಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ. 6300 ಮನೆಗಳಿಗೆ ಮಂಜೂರಾತಿ ಸಿಕ್ಕಿದೆ. ▶ 7ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮಪಡಿಸಲು

ಜನಪ್ರತಿನಿಧಿಗಳು, ಅಧಿಕಾರಿಗಳು ಒಂದೊಂದು ಶಾಲೆ ದತ್ತು ಪಡೆಯಲಿ

'ನಮ್ಮ ಶಾಲೆ-ನಮ್ಮ ಹೊಣೆ' ಸಂಕಲ್ಪದೊಂದಿಗೆ ಯೋಜನೆ ಜಾರಿಗೆ ಮುಂದಾದ ಶಿಕ್ಷಣ ಇಲಾಖೆ

ಮೈಸೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸಲು ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಇಲಾಖಾ ಅಧಿಕಾರಿಗಳು ತಲಾ ಒಂದೊಂದು ಶಾಲೆಯನ್ನು ದತ್ತು ಪಡೆದು, ಮಕ್ಕಳ ಶಿಕ್ಷಣದ ಗುಣಮಟ್ಟ ಸುಧಾರಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಭಿಪ್ರಾಯಪಟ್ಟರು. ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸದ ಪ್ರತಾಪ್ ಸಿಂಹ, ಮಹಾರಾಜರು ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದ್ದರು. ಅವರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ನೂರು ವರ್ಷಗಳ ಇತಿಹಾಸವಿದೆಯಾದರೂ ನಮ್ಮ ಜಿಲ್ಲೆ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಹಿಂದೆ ಇದೆ ಎಂದರು. ಬೋಧನಾ ಸಾಮರ್ಥ್ಯ ಹೆಚ್ಚಿಸಿ ಕಳೆದ ಬಾರಿ ಇದ್ದ 12ನೇ ಸ್ಥಾನವನ್ನು ಈ ಬಾರಿ ಎಲ್ಲರೂ ಕೂಡಿ 10ಕ್ಕಿಂತ ಕಡಿಮೆ ಸ್ಥಾನಗಳಿಗೆ ತರುವ ನಿಟ್ಟಿನಲ್ಲಿ ಪ್ರಯತ್ನಿಸಬೇಕೆಂದು ಸಂಸದರು ಪ್ರಸ್ತಾಪಿಸಿದ್ದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೆಲ್ಲರೂ ಒಂದೊಂದು ಶಾಲೆಯನ್ನು ದತ್ತು ತೆಗೆದುಕೊಂಡು 'ನಮ್ಮ ಶಾಲೆ–ನಮ್ಮ ಹೊಣೆ' ▶ 7ನೇ ಪುಟಕ್ಕೆ

ವ್ಯಾಯಾಮ ಮಾಡಿ, ಮಿತವಾಗಿ ಆರೋಗ್ಯಕರ ಆಹಾರ ಸೇವಿಸಿ ಮಧುಮೇಹದಿಂದ ದೂರವಿರಿ...

ವಿಶ್ವ ಮಧುಮೇಹ ದಿನದ ಪ್ರಯುಕ್ತ ಎಪಿಐ ಆಯೋಜಿಸಿದ್ದ ಜಾಥಾದಲ್ಲಿ ಜಾಗೃತಿ ಸಂದೇಶ





ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಎಪಿಐ ಮೈಸೂರು ಘಟಕ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ವಿದ್ಯಾರ್ಥಿಗಳು ಜಾಥಾದಲ್ಲಿ ಹೆಜ್ಜೆ ಹಾಕುತ್ತಿರುವುದನ್ನು ಕಾಣಬಹುದು.

ಮೈಸೂರು,ನ.14(ಪಿಎಂ)– ಮಧುಮೇಹದ ವಿರುದ್ಧದ ಹೋರಾಟದಲ್ಲಿ ಎಲ್ಲರೂ ಒಟ್ಟಾಗಿ ನಿಲ್ಲೋಣ... ಮಿತ, ಆರೋಗ್ಯಕರ ಆಹಾರ ಸೇವಿಸಿ ಮಧುಮೇಹದಿಂದ ದೂರವಿರಿ... ಶಾಂತವಾಗಿದ್ದು ಮಧುಮೇಹ ಸೋಲಿಸಿ... ವ್ಯಾಯಾಮ ಮಾಡಿ ಮಧುಮೇಹ ಹೊರದೂಡಿ...

ಅಸೋಸಿಯೇಷನ್ ಆಫ್ ಫಿಸಿಷಿಯನ್ಸ್ ಆಫ್ ಇಂಡಿಯಾ (ಎಪಿಐ) ಮೈಸೂರು ಘಟಕದ ವತಿಯಿಂದ ವಿಶ್ವ ಮಧುಮೇಹ ದಿನದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಇಂತಹ ಅರಿವಿನ ಸಂದೇಶಗಳ ಫಲಕಗಳನ್ನಿಡಿದು ವೈದ್ಯಕೀಯ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳು ನೂರಾರು ಸಂಖ್ಯೆಯಲ್ಲಿ ಹೆಜ್ಜೆ ಹಾಕುವ ಮೂಲಕ ಜನಜಾಗೃತಿ ಮೂಡಿಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಿರಿಯ ವೈದ್ಯ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಜಾಗೃತಿ ಜಾಥಾಗೆ ಹಸಿರು ನಿಶಾನೆ ತೋರಿದರು. ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಗಾಂಧಿ ಚೌಕ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ ಹಾಗೂ ಇರ್ವಿನ್ ರಸ್ತೆ ಮೂಲಕ ಜೆಕೆ ಮೈದಾನ ತಲುಪಿ ಜಾಥಾ ಅಂತ್ಯಗೊಂಡಿತು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳೂ ಆದ ಎಪಿಐ ಸದಸ್ಯರು ಹಾಗೂ ಮೈಸೂರು ವೈದ್ಯಕೀಯ ಕಾಲೇಜಿನ ನರ್ಸಿಂಗ್ ವಿದ್ಯಾರ್ಥಿಗಳು ಸೇರಿದಂತೆ 400ಕ್ಕೂ ಹೆಚ್ಚು ಮಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು. ಎಪಿಐ ಮೈಸೂರು ಘಟಕದ ಅಧ್ಯಕ್ಷ ಡಾ. ಎಂ.ಎಂ.ಬಸವರಾಜ್, ಕಾರ್ಯದರ್ಶಿ ಡಾ.ವೈ.ಎಸ್.ರವಿಕುಮಾರ್, ಉಪಾಧ್ಯಕ್ಷ ಡಾ.ಹೆಚ್.ಜಿ.ಅಶೋಕ್, ಸದಸ್ಯರಾದ ಡಾ.ಪ್ರಸನ್ನಕುಮಾರ್, ಡಾ.ಲಕ್ಷ್ಮೀಗೌಡ, ಡಾ.ವಾಮದೇವ, ಡಾ.ಭಾನುಕುಮಾರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಎಎಸ್‌ಜಿ ಕಣ್ಣಿನ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಆಸ್ಪತ್ರೆ ಎದುರು ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಚಾಲನೆ ನೀಡಿದರು.

ಇದಲ್ಲದೆ, ಮೈಸೂರಿನ ವಿವಿಧ ವೈದ್ಯಕೀಯ ಕಾಲೇಜು, ಆಸ್ಪತ್ರೆಗಳ ವತಿಯಿಂದ ವಿಶ್ವ ಮಧುಮೇಹ ದಿನ ಆಚರಿಸಲಾಯಿತು. ಸಹೋದ್ಯೋಗಿ ಜೊತೆಗೂಡಿ ಇನ್ಸುಲಿನ್ ಕಂಡುಹಿಡಿದ ಡಾ.ಫ್ರೆಡೆರಿಕ್ ಗ್ರಾಂಟ್ ಬ್ಯಾಂಟಿಂಗ್ ಅವರ ಜನ್ಮದಿನವಾದ 'ನ.14' ಅನ್ನು ಪ್ರತಿವರ್ಷ ವಿಶ್ವ ಮಧುಮೇಹ ದಿನವಾಗಿ ಆಚರಿಸಲಾಗುತ್ತದೆ.

ಡಯಾ ವಾಕ್ ರ್‍ಯಾಲಿ: ಎಎಸ್‌ಜಿ ಕಣ್ಣಿನ ಆಸ್ಪತ್ರೆ ವತಿಯಿಂದ 'ಡಯಾ ವಾಕ್ ರ್‍ಯಾಲಿ' ಶೀರ್ಷಿಕೆಯಡಿ ಜಾಗೃತಿ ಜಾಥಾ ನಡೆಯಿತು. ಚಾಮರಾಜ ಮೊಹಲ್ಲಾದಲ್ಲಿರುವ ಆಸ್ಪತ್ರೆ ಎದುರಿನಲ್ಲಿ ಜಾಥಾಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಚಾಲನೆ ನೀಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಮೈಸೂರು ವಿವಿ ಎನ್‌ಎಸ್‌ಎಸ್ ಸಂಚಾಲಕ ಡಾ.ಸುರೇಶ್, ಒಲವು ಫೌಂಡೇಷನ್‌ನ ರಾಬರ್ಟ್, ಜೆಪಿ ನಗರ ರೋಟರಿ ಕ್ಲಬ್‌ನ ಅಧ್ಯಕ್ಷ ನಂಜುಂಡಸ್ವಾಮಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಆನಂದ ಮೂರ್ತಿ, ಹುಚ್ಚಪ್ಪ, ಗುರುಮೂರ್ತಿ, ಉಮಾಕಾಂತ್ ಸೇರಿದಂತೆ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ಹಾಜರಿದ್ದರು. ಮೈಸೂರು ವಿವಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು. ಕುವೆಂಪುನಗರದ ಭಾನವಿ ಆಸ್ಪತ್ರೆ ವತಿಯಿಂದಲೂ ಜಾಗೃತಿ ಜಾಥಾ ನಡೆಯಿತು. ಆಸ್ಪತ್ರೆ ಆವರಣದಿಂದ ಇಲ್ಲಿನ ಸುತ್ತಮುತ್ತಲ ರಸ್ತೆಗಳಲ್ಲಿ ಜಾಥಾ ನಡೆಯಿತು.

ಮೈಸೂರು ಜಿಲ್ಲೆಯಲ್ಲಿ 30 ವರ್ಷ ಮೇಲ್ಪಟ್ಟವರಲ್ಲಿ ಶೇ.15ರಿಂದ 20ರಷ್ಟು ಮಂದಿಗೆ ಮಧುಮೇಹ; ಡಿಹೆಚ್‌ಓ ಮಾಹಿತಿ

ಮೈಸೂರು,ನ.14(ಪಿಎಂ)– ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ 30 ವರ್ಷ ವಯೋಮಾನ ಮೇಲ್ಪಟ್ಟವರಲ್ಲಿ (ತಪಾಸಣೆಗೆ ಒಳಗಾದವರಲ್ಲಿ) ಅಂದಾಜು ಶೇ.15ರಿಂದ 20ರಷ್ಟು ಮಂದಿಯಲ್ಲಿ ಮಧುಮೇಹ ಕಂಡು ಬಂದಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಆರೋಗ್ಯ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ 15 ಲಕ್ಷ ಮಂದಿಯನ್ನು ಮಧುಮೇಹ ತಪಾಸಣೆಗೆ ಒಳಪಡಿಸುವ ಗುರಿ ಹೊಂದಲಾಗಿದೆ. ಈಗಾಗಲೇ 8ರಿಂದ 9 ಲಕ್ಷ ಮಂದಿಯನ್ನು ತಪಾಸಣೆ ಮಾಡಲಾಗಿದೆ. ಈ ಪೈಕಿ 30 ವರ್ಷ ವಯೋಮಾನ ಮೇಲ್ಪಟ್ಟವರಲ್ಲಿ (100 ವರ್ಷ ವಯೋಮಾನದವರೆಗೆ) ಶೇ.15ರಿಂದ 20ರಷ್ಟು ಮಂದಿಗೆ ಮಧುಮೇಹ ಕಂಡು ಬಂದಿರುವುದನ್ನು ಅಂದಾಜಿಸಲಾಗಿದೆ.


ಮಧುಮೇಹ ಕೇವಲ ಆರೋಗ್ಯ ಸಮಸ್ಯೆಯಾಗಿ ಮಾತ್ರವಲ್ಲ. ಬೇರೆ ಕಾಯಿಲೆ ಅಥವಾ ಸೋಂಕುಗಳಿಗೂ ಸುಲಭ ದಾರಿಯಾಗಿದೆ. ಆದ್ದರಿಂದ ಸಾರ್ವಜನಿಕರು ಮಧುಮೇಹ ನಿಯಂತ್ರಣ ಕ್ರಮಗಳಿಗೆ ಆದ್ಯತೆ ನೀಡುವುದು ಅಗತ್ಯವಾಗಿದೆ. ದೈನಂದಿನ ದೈಹಿಕ ಚಟುವಟಿಕೆಗಳ ಜೊತೆಯಲ್ಲಿ ವಾರಕ್ಕೆ ಕನಿಷ್ಠ 150 ನಿಮಿಷ ನಡಿಗೆ, ಅಗತ್ಯಕ್ಕೆ ಅನುಗುಣವಾಗಿ ಆಹಾರ ಪದ್ಧತಿ ಬದಲಾವಣೆ ಮೂಲಕ ಮಧುಮೇಹ ನಿಯಂತ್ರಣದಲ್ಲಿಡಬಹುದು. ಮಧುಮೇಹಕ್ಕೆ ಆರೋಗ್ಯ ಇಲಾಖೆಯ ಎಲ್ಲಾ ಆಸ್ಪತ್ರೆ, ಕೇಂದ್ರಗಳಲ್ಲಿ ವೈದ್ಯಕೀಯ ಸೇವೆ ಮತ್ತು ಔಷಧ ಉಚಿತವಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ಹಾಗೂ ಮಧುಮೇಹ ನಿಯಂತ್ರಣದಲ್ಲಿ ಆರೋಗ್ಯ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕೆಂದು ಕೋರಿದ್ದಾರೆ.

ನಾಳೆ ವಿ.ಶ್ರೀನಿವಾಸಪ್ರಸಾದ್ ಜಿಲ್ಲಾ ಪ್ರವಾಸ



ಮೈಸೂರು, ನ.14– ಚಾಮರಾಜನಗರ ಲೋಕಸಭಾ ಸದಸ್ಯ ವಿ.ಶ್ರೀನಿವಾಸಪ್ರಸಾದ್ ಅವರು ನ.16ರಂದು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11ಕ್ಕೆ ನಂಜನಗೂಡಿಗೆ ಆಗಮಿಸಿ ಯಾತ್ರಿಭವನದಲ್ಲಿ ಆಂದೋಲನ ದಿನಪತ್ರಿಕೆಯ 50ನೇ ವರ್ಷದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 1 ಗಂಟೆಗೆ ಟಿ.ನರಸೀಪುರಕ್ಕೆ ಭೇಟಿ ನೀಡಿ ಅತಿಥಿಗೃಹವನ್ನು ಉದ್ಘಾಟನೆ ಮಾಡುವರು. ನಂತರ ಅಧಿಕಾರಿಗಳ ಜೊತೆ ಚರ್ಚೆ ನಡೆಸುವರು. ಜೊತೆಗೆ ಸಾರ್ವಜನಿಕರ ಕುಂದುಕೊರತೆಗಳನ್ನು ವಿಚಾರಣೆ ಮಾಡುವರು. ಮಧ್ಯಾಹ್ನ 2.30ಕ್ಕೆ ನಿಲಸೋಗೆ ಗ್ರಾಮದಲ್ಲಿ ವಿದ್ಯುಚ್ಛಕ್ತಿ ಅವಘಡದಿಂದ ನಿಧನರಾದವರ ಮನೆಗೆ ಭೇಟಿ ನೀಡುವರು. ಮಧ್ಯಾಹ್ನ 3.30ಕ್ಕೆ ಬನ್ನೂರಿನ ಆರೋಗ್ಯ ಇಲಾಖೆಗೆ ಸಂಸದರ ಅನುದಾನದಿಂದ ಆಂಬುಲೆನ್ಸ್ ಲೋಕಾರ್ಪಣೆ ಮಾಡುವರು ಎಂದು ಸಂಸದರ ಆಪ್ತ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಬಿರ್ಸಾ ಮುಂಡಾ ಜಯಂತಿ; ಜನ ಜಾತೀಯ ಗೌರವ ದಿವಸ್



ಮೈಸೂರು, ನ.14– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ಹಾಗೂ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ 'ಬಿರ್ಸಾ ಮುಂಡಾ ಜಯಂತಿ' ಹಾಗೂ 'ಜನ ಜಾತೀಯ ಗೌರವ ದಿವಸ್' ಕಾರ್ಯಕ್ರಮದ ಅಂಗವಾಗಿ ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಕಲಾ ತಂಡಗಳ ಮೆರವಣಿಗೆಯ ಉದ್ಘಾಟನಾ ಸಮಾರಂಭವನ್ನು ನ.15ರಂದು ಬೆಳಗ್ಗೆ 9 ಗಂಟೆಗೆ ಅರಮನೆ ಆವರಣದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಕಲಾ ತಂಡಗಳ ಮೆರವಣಿಗೆಯನ್ನು ಸಾರಿಗೆ ಸಚಿವ ಶ್ರೀರಾಮುಲು ಉದ್ಘಾಟಿಸುವರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎಸ್.ಎ.ರಾಮದಾಸ್ ವಹಿಸುವರು.

ಕೆಎಎಸ್, ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು,ನ.14–ಕರ್ನಾಟಕ ಸರ್ಕಾರವು 1 ಲಕ್ಷಕ್ಕೂ ಅಧಿಕ ಉದ್ಯೋಗ ಭರ್ತಿಗೆ ಸಿದ್ಧತೆ ನಡೆಸುತ್ತಿರುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಕೆಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ನೀಡಲು ನಿರ್ಧರಿಸಿದೆ. ಆಸಕ್ತರು ನ.19ರೊಳಗಾಗಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಕಚೇರಿ ದಿನಗಳಂದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ.ಸಂ: 0821–2515944 ಸಂಪರ್ಕಿಸಬಹುದು.



ಚಾಮರಾಜ ಕ್ಷೇತ್ರದ ಮಾಜಿ ಶಾಸಕರಾಗಿದ್ದ ದಿವಂಗತ ಕೆಂಪೀರೇಗೌಡರ 37ನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ಗೋಕುಲಂನ ಕೆಂಪೀರೇಗೌಡರ ಉದ್ಯಾನವನದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಈ ವೇಳೆ ಕುಂಬಾರಕೊಪ್ಪಲಿನ ಚಿಕ್ಕಣ್ಣ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಬಿ.ಕುಮಾರ್, ಸಂತೋಷ್, ಕೇಬಲ್ ಕಿಟ್ಟಿ, ಆಟೋ ಸಿದ್ದರಾಮಣ್ಣ, ಸತೀಶ್ ಮತ್ತಿತರರಿದ್ದರು.

ನ.20ರಂದು ಪ್ರಬಂಧ, ಭಾಷಣ ಸ್ಪರ್ಧೆ

ಮೈಸೂರು, ನ.14– 67ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದಿಂದ ನಾಡಪ್ರಭು ಕೆಂಪೇಗೌಡರನ್ನು ಕುರಿತು ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆ ನ.20ರ ಭಾನುವಾರದಂದು ಭಾರತ್ ಸೇವಾ ದಳ, ಜಿಲ್ಲಾ ಕಚೇರಿ, ಮಾರುತಿ ದೇವಸ್ಥಾನದ ಎದುರು, ಗಂಗೋತ್ರಿ ಬಡಾವಣೆ, ಮೈಸೂರು ಇಲ್ಲಿ ನಡೆಯಲಿದ್ದು, ಪ್ರಬಂಧ ವಿಷಯ: ಯಲಹಂಕ ನಾಡಪ್ರಭು ಕೆಂಪೇಗೌಡರ ಸಾಂಸ್ಕೃತಿಕ ಕೊಡುಗೆಗಳು' ಆಂಗ್ಲ ಪದ ಬಳಸದೆ ಅಚ್ಚ ಕನ್ನಡದಲ್ಲಿ ಬರೆಯಬೇಕಿದೆ. ಸಮಯ 1 ಗಂಟೆ ಅವಧಿ, ಅಂದು ಬೆಳಗ್ಗೆ 11ರಿಂದ. 12. ಮಾತನಾಡುವ ಸ್ಪರ್ಧೆ: ಯಲಹಂಕ ನಾಡಪ್ರಭು ಕೆಂಪೇಗೌಡರ ಸಾಂಸ್ಕೃತಿಕ ಕೊಡುಗೆಗಳು' ಆಂಗ್ಲ ಪದ ಬಳಸದೆ ಅಚ್ಚ ಕನ್ನಡದಲ್ಲಿ ಮಾತನಾಡಬೇಕು. ಸಮಯ 8 ನಿಮಿಷ. ಮಾಹಿತಿಗೆ ಸಂಪರ್ಕಿಸಿ: 9113679633 (ದಿನಕರ್), 9164837775 (ದೇವರಾಜು).

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ನ.14–ಹುಣಸೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಡಿ.31ಕ್ಕೆ ಕೊನೇ ದಿನ. ಆಸಕ್ತರು https://ssp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ: 8050770005 ಸಂಪರ್ಕಿಸಿ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅತ್ತೆ ಗೌರಮ್ಮ ನಿಧನ



ಮೈಸೂರು,ನ.14(ಆರ್‌ಕೆ)–ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರ ಅತ್ತೆ ಎಲ್.ಗೌರಮ್ಮ(83) ಅವರು ಬೆಂಗಳೂರಿನ ಸುಮ್ಮನಹಳ್ಳಿಯಲ್ಲಿ ಇಂದು ಮಧ್ಯಾಹ್ನ ನಿಧನರಾದರು.

ಗೌರಮ್ಮ ಅವರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ನಾಳೆ (ನ.15) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಬೆಂಗಳೂರಿನ ಸುಮ್ಮನಹಳ್ಳಿಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಪ್ರಾರ್ಥಿಸಿದ್ದಾರೆ.

ಹೆಚ್.ಎಸ್.ವಿಶ್ವನಾಥ್



ಮೈಸೂರಿನ ಶಿವರಾಮಪೇಟೆ ನಿವಾಸಿ ಹಾಗೂ ಪೂಜಾ ಏಜೆನ್ಸಿ ಮಾಲೀಕರಾದ ಹೆಚ್.ಎಸ್.ವಿಶ್ವನಾಥ್ (66) ಭಾನುವಾರ ನಿಧನರಾದರು. ಇವರು ರಮ್ಯಾ ಡ್ರೈವ್ ಇನ್ ರೆಸ್ಟೋರೆಂಟ್ ಮಾಲೀಕರಾದ ಜಿ.ಬಿ.ಗೋವಿಂದರಾಜ ಶೆಟ್ಟಿ ಅವರ ಅಳಿಯ. ಮೃತರು ಪತ್ನಿ ಉಷಾ ವಿಶ್ವನಾಥ್, ಪುತ್ರಿ ಪೂಜಾ, ಅಳಿಯ ಆದರ್ಶ, ಮೊಮ್ಮಗ ರಿಷಿಕ್ ಸೇರಿದಂತೆ ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ಗ್ರಾಹಕ ಜಾಗೃತಿ ಕಾರ್ಯಕ್ರಮ

ಮೈಸೂರು,ನ.14(ಆರ್‌ಕೆಬಿ)–ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ನ.16ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾಲೇಜು ಆವರಣದಲ್ಲಿ ಗ್ರಾಹಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕೇಂದ್ರೀಯ ಮಹಿಳಾ ಜಾಗರಣ ಪ್ರಮುಖ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ ಮಹಿಳಾ ಪ್ರಮುಖ್ ಆಶಾ ಸಿಂಹ ಅವರು ಗ್ರಾಹಕರ ಸಮಸ್ಯೆಗಳು ಹಾಗೂ ಹಕ್ಕುಗಳ ಬಗ್ಗೆ ತಿಳಿಸಿಕೊಡಲಿದ್ದಾರೆ. ವಿದ್ಯಾವರ್ಧಕ ಕಾಲೇಜು ನಿರ್ದೇಶಕ ಪ್ರೊ.ಕೆ.ಬಿ. ವಾಸುದೇವ ಅಧ್ಯಕ್ಷತೆ ವಹಿಸುವರು. ಉಪಪೊಲೀಸ್ ಆಯುಕ್ತೆ ಗೀತಾ ಪ್ರಸನ್ನ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಮ್ ಅಯ್ಯಂಗಾರ್ ಭಾಗವಹಿಸುವರು.

ಮಿಲನ್‌ಗೌಡಗೆ ಪಿಹೆಚ್.ಡಿ



ಮೈಸೂರು,ನ.14–ಡಾ.ಬಿ.ಎಸ್.ವಿಶ್ವನಾಥ್ ಅವರ ಮಾರ್ಗದರ್ಶನದಲ್ಲಿ ಎಂ.ಡಿ.ಮಿಲನ್‌ಗೌಡ ಅವರು ಬಯೋಕೆಮಿಸ್ಟ್ರಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶಾಲೆಗಳಿಗೆ ಕೇಸರಿ ಬಣ್ಣ ಬಳಿಯುವುದಕ್ಕೆ ವಿಪಕ್ಷಗಳ ಆಕ್ಷೇಪ: ಸಿಎಂ ಲೇವಡಿ



ಬೆಂಗಳೂರು,ನ.14(ಕೆಎಂಶಿ)–ಎಲ್ಲದರಲ್ಲೂ ರಾಜಕಾರಣ ಮಾಡುವುದು ಬಹಳ ಕೆಳ ಮಟ್ಟದ್ದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲೆಗಳಿಗೆ ಕೇಸರಿ ಬಣ್ಣ ಬಳಿಯುತ್ತಿರುವ ಬಗ್ಗೆ ಕಾಂಗ್ರೆಸ್ ವಿರೋಧದ ಬಗ್ಗೆ ಸುದ್ದಿಗಾರರ ಪ್ರತಿಕ್ರಿಯೆ ನೀಡಿದ ಅವರು ಕೇಸರಿ ಬಣ್ಣ ಭಾರತದ ಧ್ವಜದಲ್ಲಿಯೇ ಇದೆ. "ಕೇಸರಿ ಕಂಡರೆ ಏಕೆ ಸಿಟ್ಟು" ಸ್ವಾಮಿ ವಿವೇಕಾನಂದರ ಹೆಸರಿನಲ್ಲಿಯೇ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುತ್ತಿದ್ದು ಅವರೊಬ್ಬ ಸ್ವಾಮಿ. ಅವರು ತೊಟ್ಟಿದ್ದು ಕೇಸರಿ ಬಣ್ಣದ ಕಾವಿ. ವಿವೇಕ ಎಂದರೆ ಎಲ್ಲರಿಗೂ ಜ್ಞಾನ. ಅದನ್ನು ಕಲಿಯಲಿ ಎಂದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಮುನ್ನಡೆಸಿರುವ ಖ್ಯಾತಿ ಭಾರತದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಮಕ್ಕಳನ್ನು ಅತ್ಯಂತ ಪ್ರೀತಿ ಮತ್ತು ವಾತ್ಸಲ್ಯದಿಂದ ಕಾಣುತ್ತಿದ್ದ ನಮ್ಮ ರಾಷ್ಟ್ರದ ಮೊದಲ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಪಂಡಿತ್ ಜವಾಹರಲಾಲ್ ನೆಹರೂ ಅವರು ಮಹಾತ್ಮ ಗಾಂಧೀಜಿಯವರೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧಿ ಅವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದವರು. ಭಾರತದ ಉದಯಕ್ಕೆ ಬಹಳಷ್ಟು ಪರಿಶ್ರಮ ಪಟ್ಟವರು. ಭಾರತದ ಮೊದಲ ಪ್ರಧಾನಿಯಾಗಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಡಿಪಾಯ ಹಾಕಿದವರು. ಅಂತರರಾಷ್ಟ್ರೀಯ ಮಟ್ಟದಲ್ಲಿ ನಾನ್ ಅಲೈನ್ಮೆಂಟ್ ಮೂವ್‌ಮೆಂಟ್‌ಗೆ ಜನರಲ್ ಕಿಟೋ ಅವರೊಂದಿಗೆ ಸೇರಿ ಅವರು ಮಾಡಿರುವ ಕೆಲಸ ಅದ್ಭುತವಾಗಿದೆ. ಅಲಿಪ್ತ ಚಳವಳಿ ಸಂಘದ ಮೂಲಕ ಭಾರತ ಇಂದಿಗೂ ತನ್ನ ಪ್ರಮುಖ ಪಾತ್ರವನ್ನು ವಹಿಸಿದೆ. ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.



ಸೋಮವಾರ ಹುಟ್ಟುಹಬ್ಬ ಆಚರಿಸಿಕೊಂಡ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ನಾಯಕ ಅಬ್ದುಲ್ ಅಜೀಜ್ (ಅಬ್ದುಲ್ಲಾ), ಮೈಸೂರಿನ ಗಾಂಧಿನಗರ–ಮೊಹಮದ್ ಸೇಠ್ ಬ್ಲಾಕ್‌ನಲ್ಲಿ ಮಹಿಳೆಯರಿಗೆ ಸುಹೆಲ್ ಬೇಗ್ ನೇತೃತ್ವದಲ್ಲಿ 100 ಹೊಲಿಗೆ ಯಂತ್ರಗಳನ್ನು (ಎಡ ಚಿತ್ರ) ವಿತರಿಸಿದರು. ನಂತರ ನಗರಪಾಲಿಕೆ ಸದಸ್ಯ ಮೊಹಮದ್ ರಫೀಕ್ ನೇತೃತ್ವದಲ್ಲಿ ಮೈಸೂರು ಗಾಯಿತ್ರಿಪುರಂ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ಮತ್ತು ಪುಸ್ತಕ (ಮಧ್ಯದ ಚಿತ್ರ) ಹಂಚಿದರು. ಬಳಿಕ ತಮ್ಮ ಅಭಿಮಾನಿಗಳು ಬೆಂಬಲಿಗರೊಂದಿಗೆ ಶ್ರೀರಂಗಪಟ್ಟಣದ ಟಿಪ್ಪು ಸುಲ್ತಾನ್ ದರ್ಗಾಕ್ಕೆ ಭೇಟಿ ನೀಡಿದ ಅಜೀಜ್ ಅಬ್ದುಲ್ಲಾ ವಿಶೇಷ ಪ್ರಾರ್ಥನೆ (ಬಲ ಚಿತ್ರ) ಸಲ್ಲಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.11.2022 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮೀ, ನಕ್ಷತ್ರ : ಪುಷ್ಯ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ :** ಸ್ವರ್ಣಾಮೃತಪ್ರಾಶನ ಕಾರ್ಯಕ್ರಮ, ಸ್ಥಳ: ಮಹಾವಿದ್ಯಾಲಯ, ಬಲ್ಲಾಳ್ ಸರ್ಕಲ್ ಹತ್ತಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 7ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.
- **ರೋಟರಿ ಕ್ಲಬ್ ಮೈಸೂರು ಪಶ್ಚಿಮ :** ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ತೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** 61ನೇ ರಾಷ್ಟ್ರೀಯ ಔಷಧ ಸಪ್ತಾಹ, ರಕ್ತದಾನ ಶಿಬಿರ, ಸ್ಥಳ: ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ
- **ಕರುನಾಡ ರಕ್ಷಣಾ ವೇದಿಕೆ :** ಪೊಲೀಸ್ ಸಂಚಾರ ನಿಯಮದ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ, ಉಪಸ್ಥಿತರು : ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಮದನ್‌ಕುಮಾರ್, ಶ್ರೀಮತಿ ಪೂಜ, ಬೆಳಗ್ಗೆ 10ಕ್ಕೆ.
- **ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆ, ಮೈಸೂರು ವಿಶ್ವವಿದ್ಯಾನಿಲಯ:** ಬುಡಕಟ್ಟು ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಪ್ರೊ.ಪಿ.ಈಶ್ವರ್ ಭಟ್, ಮುಖ್ಯ ಅತಿಥಿಗಳು: ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ಎಸ್.ರಾಜೇಶ್‌ಗೌಡ, ಮೈಸೂರು ವಿವಿ ಕುಲಸಚಿವ ಪ್ರೊ. ಆರ್.ಶಿವಪ್ಪ, ಅಧ್ಯಕ್ಷತೆ : ಮೈಸೂರು ವಿವಿ ಕಾನೂನು ವಿಭಾಗದ ಅಧ್ಯಕ್ಷ ಪ್ರೊ.ಟಿ.ಆರ್. ಮಾರುತಿ, ಉಪಸ್ಥಿತರು : ಪ್ರೊ. ರಮೇಶ್, ಸ್ಥಳ: ಲಲಿತಾ ಕಲಾ ಮಂದಿರ, ಮೈಸೂರು ವಿವಿ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ
- **ಮಹಾಜನ ಪ್ರಥಮ ದರ್ಜೆ ಕಾಲೇಜು, ಇತಿಹಾಸ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ :** ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕೆಗಳ ಪಾತ್ರ ಕುರಿತು ಕಾರ್ಯಾಗಾರ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಉಪಸ್ಥಿತರು : ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಡಾ. ಎಸ್.ಆರ್. ರಮೇಶ್, ಸ್ಥಳ: ಎವಿಸಿ–2 ಸಭಾಂಗಣ, ಬೆಳಗ್ಗೆ 10.30ಕ್ಕೆ
- **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್:** ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ, ಸ್ಥಳ: 510, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.
- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ 6ರಿಂದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಅಗ್ನಿ ಕೊಂಡೋತ್ಸವ, ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.
- **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆ):** ವಾರ್ಷಿಕ ವಿಶೇಷ ಶಿಬಿರ, ರುಡ್‌ಸೆಟ್ ಸಂಸ್ಥೆ ನಿರ್ದೇಶಕ ಆನಂದ ನಾಯಕ್ ಅವರಿಂದ ಸ್ವಯಂ ಉದ್ಯೋಗದ ಮಹತ್ವ ಮತ್ತು ಅವಕಾಶಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಉಪನ್ಯಾಸಕ ಸಂಘದ ಅಧ್ಯಕ್ಷ ಎಂ.ಎಂ. ಮಹದೇವ್, ಮುಖ್ಯ ಅತಿಥಿಗಳು : ಡಾ. ಸೋಮಶೇಖರ್, ಬಿ. ಉಮೇಶ್, ಎಂ.ಬಿ. ಮಹದೇವಪ್ಪ, ಸ್ಥಳ: ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದದ ಹತ್ತಿರ, ಸಂಜೆ 4.30ರಿಂದ.
- **ವಿಭ ಪ್ರಕಾಶನ, ಮೈಸೂರು:** ಡಾ.ಹರೀಶ್‌ಕುಮಾರ್ ಅವರ 'ಸಿದ್ದರಾಮಯ್ಯ–75' ಸಮಾಜವಾದಿ ಜನನಾಯಕನ ಜೀವನ–ಸಿದ್ಧಾಂತ–ಸಾಧನೆ ಕೃತಿ ಬಿಡುಗಡೆ ಸಮಾರಂಭ, ಉಪಸ್ಥಿತರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ದಿಕ್ಸೂಚಿ ಭಾಷಣ: ಹಿರಿಯ ಸಮಾಜವಾದಿ ಪ.ಮಲ್ಲೇಶ್, ಕೃತಿ ಬಿಡುಗಡೆ: ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್, ಅಧ್ಯಕ್ಷತೆ: ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕೃತಿ ಕುರಿತು ಮಾತನಾಡುವವರು: ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು, ಉಪಸ್ಥಿತರು : ಕೃತಿ ಲೇಖಕ ಡಾ.ಹರೀಶ್‌ಕುಮಾರ್, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 4.30ಕ್ಕೆ.
- **ಶ್ರೀ ಸಾಣೇಹಳ್ಳಿ ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ:** ಬಸವಾದಿ ಶರಣರ ದರ್ಶನ ಶೀರ್ಷಿಕೆಯಡಿ ಕದಂಬ ರಂಗ ವೇದಿಕೆಯಿಂದ ನೀಲಾಂಬಿಕೆ ನಾಟಕ ಪ್ರದರ್ಶನ, ನಿರ್ದೇಶನ: ರಾಜಶೇಖರ ಕದಂಬ, ಸಂಗೀತ: ದಿಗ್ವಿಜಯ, ಸಂಗೀತ: ರಮೇಶ್ ಬಾಬು ಗುಬ್ಬಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ.
- **ಶ್ರೀ ಉತ್ತರಾದಿ ಮಠ :** ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ಯ ಜೋಷಿ ಅವರಿಂದ ಭಗವದ್ಗೀತೆ ಅಧ್ಯಾಯ–1 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಶ್ರೀ ಸುತ್ತೂರು ಕ್ಷೇತ್ರ

- **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಟಿ.ಎನ್. ಅಶ್ವಿನಿ, ಎಂ.ಎ. ಶೋಭಾ ವ್ಯಾಖ್ಯಾನ– ಡಾ.ಜ್ಯೋತಿಶಂಕರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 8.30 "ಉಲಿ ಉಯ್ಯಾಲೆ" ಸರಣಿಯ 3ನೇ ಕಾರ್ಯಕ್ರಮ "ಕನಡದ ಹಳಮೆ", ಲೇಖನ– ಡಾ.ಶಶಿಕಲಾ, 9.00 ಕನ್ನಡ ಕಜ್ಜಾಯ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್. ರಮಾನಂದ್, ನಿರ್ಮಾಣ– ಗೀತಾ ರಮಾನಂದ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ನರಸಿಂಹ ನಾಯಕ್, ಡಾ. ಆರ್.ಎನ್. ಶ್ರೀಲತಾ, 12.45 ಬೆಳ್ಳಿತೆರೆಯ ಕನ್ನಡ ಬೆಳುದು ಬಂದದ್ದು ಹೇಗೆ? ಎ.ವಿ.ಸೂರ್ಯನಾರಾಯಣ ಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು–ಮಧುರಾ ದೀಕ್ಷಿತ್, ಎಂ.ಕೆ. ಜಯಶ್ರೀ, 4.00 ಕಥಾ ಕಾಲಕ್ಷೇಪ "ಭಕ್ತ ಕನಕದಾಸ", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ– ಪುಣ್ಯಕೋಟಿ ದತ್ತು ಯೋಜನೆ– ಡಾ. ನಂದಿನಿ ಎಂ.ಎಸ್.ಅವರೊಡನೆ ಸಂದರ್ಶನ, 9.30 ಸತೀಶ್ ಹೆಚ್.ಸಿ. ನಾದಸ್ವರ ವಾದನ 10.00 ಗಮಕ ವ್ಯಾಖ್ಯಾನ, ವಾಚನ– ಹೆಚ್.ಯಜ್ಞೇಶ್, ವ್ಯಾಖ್ಯಾನ– ಸರ್ಪಂಗಳ ಈಶ್ವರಭಟ್, 10.30 ಸವಿನೆನಪು

‘ಪಾಲಿಕೆ ಅದಾಲತ್’ಗೆ ಪ್ರಚಾರದ ಕೊರತೆ

ಬೆರಳೆಣಿಕೆಯಷ್ಟು ಮಂದಿ ಅಹವಾಲು ಸಲ್ಲಿಕೆ; ಅಧಿಕಾರಿ ವರ್ಗದ ಬೇಜವಾಬ್ದಾರಿಗೆ ಹಿಡಿದ ಕನ್ನಡಿ





ಬೆರಳೆಣಿಕೆಯಷ್ಟು ಮಂದಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸುವ ಮೂಲಕ ‘ಪಾಲಿಕೆ ಅದಾಲತ್’ಗೆ ಉಪಮೇಯರ್ ಡಿ.ರೂಪಾ ಚಾಲನೆ ನೀಡಿದರು. ಬಲಚಿತ್ರದಲ್ಲಿ ಸಾರ್ವಜನಿಕರಿಗಾಗಿ ವ್ಯವಸ್ಥೆಗೊಳಿಸಿದ್ದ ಕುರ್ಚಿಗಳು ಖಾಲಿ ಖಾಲಿ.

ಮೈಸೂರು, ನ.14 (ಆರ್‌ಕೆಬಿ)– ಮೈಸೂರು ನಗರ ಪಾಲಿಕೆ ಇಂದಿನಿಂದ ನ.19 ರವರೆಗೆ ಆಯೋಜಿಸಿರುವ ಆರು ದಿನಗಳ ‘ಪಾಲಿಕೆ ಅದಾಲತ್’ಗೆ ಮೊದಲ ದಿನವೇ ಜನರಿಲ್ಲದೇ ಬಿಕೋ ಎನ್ನುತ್ತಿತ್ತು. ಪ್ರಚಾರದ ಕೊರತೆಯಿಂದಾಗಿ ಸಾರ್ವಜನಿಕರಿಂದ ಪ್ರತಿಕ್ರಿಯೆ ದೊರೆಯಲಿಲ್ಲ.

ಈಗಾಗಲೇ ನಗರಪಾಲಿಕೆಯ ವಲಯ ಕಚೇರಿಗಳಿಗೆ ಅರ್ಜಿ ಸಲ್ಲಿಸಿಯೂ ಕೆಲಸಗಳು ಆಗದಿರುವ ಸಾರ್ವಜನಿಕರಿಗಾಗಿ ಪಾಲಿಕೆ ಆವರಣದಲ್ಲಿ ಆರು ದಿನಗಳ ‘ಪಾಲಿಕೆ ಅದಾಲತ್’ ಏರ್ಪಡಿಸಿತ್ತು. ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲು ಜರ್ಮನ್ ಮಾದರಿ ಟೆಂಟ್‌ಗಳೊಂದಿಗೆ ಐದು ಕೌಂಟರ್‌ಗಳನ್ನು ಸ್ಥಾಪಿಸಲಾಗಿತ್ತು. ಸಾರ್ವಜನಿಕರಿಗೆ ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕಲಾಗಿತ್ತು. ಆದರೆ ಕೇವಲ 19 ಮಂದಿ ಮಾತ್ರ ಅರ್ಜಿ ಸಲ್ಲಿಸಿದ್ದರು.

ಕಾರ್ಯಕ್ರಮದ ವರದಿ ಮಾಡಲು ಸ್ಥಳಕ್ಕೆ ತೆರಳಿದ ಪತ್ರಕರ್ತರು, ಪತ್ರಿಕಾ ಛಾಯಾಗ್ರಾಹಕರಿಗೆ ಅಲ್ಲಿ ಸಾರ್ವಜನಿಕರು ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಿದ್ದು ಕಂಡು ಬಂದಿತು. ಅಧಿಕಾರಿಗಳ ದಂಡು ಅಲ್ಲಿದ್ದರೂ ಅದಾಲತ್‌ನ ಉದ್ಘಾಟನೆ ಕಾರ್ಯಕ್ರಮ ಎಂಬುದು ಇದ್ದಂತೆ ಕಾಣಲಿಲ್ಲ. ಪತ್ರಕರ್ತರನ್ನು ಕಂಡ ಅಧಿಕಾರಿಗಳು ಯಾರಿಂದಲಾದರೂ ಉದ್ಘಾಟನೆ ಮಾಡಿಸಲು ಮುಂದಾದರು. ಆದರೆ ತಮ್ಮ ತಾಯಿ ನಿಧನದ ಕಾರಣ ಮೇಯರ್ ಶಿವಕುಮಾರ್ ಬರಲಿಲ್ಲ. ಪಾಲಿಕೆ ಆಯುಕ್ತರು ವೀಡಿಯೋ ಕಾನ್ಫರೆನ್ಸ್‌ನಲ್ಲಿ ಬಿಜಿಯಾಗಿದ್ದರು. ಹೀಗಾಗಿ ಉದ್ಘಾಟನೆಗೆ ಉಪ ಮೇಯರ್ ರೂಪಾ ಅವರನ್ನು ಬೆಳಗ್ಗೆ 11 ಗಂಟೆಗೆ ಅದಾಲತ್ ಉದ್ಘಾಟಿಸಲು ಅಧಿಕಾರಿಗಳು ಗಡಿಬಿಡಿಯಿಂದ ಆಹ್ವಾನಿಸಿದರು. ಜನರೇ ಇಲ್ಲದ ಕಾರಣ ಪಾಲಿಕೆ ಕಚೇರಿಯ ಸಿಬ್ಬಂದಿಯನ್ನು ಸಂಘಟಕರು ಕರೆತಂದು ಮಾಧ್ಯಮದವರ ಮುಂದೆ ಸರತಿ ಸಾಲಿನಲ್ಲಿ ನಿಲ್ಲಿಸಿ, ಫೋಟೋ ತೆಗೆಯಬೇಕಾದ ದುರ್ಗತಿ ಕಂಡು ಬಂದಿತು. ಕೌಂಟರ್‌ಗಳಲ್ಲಿ ಜನರ ಕೊರತೆ ಮತ್ತು ಪಾಲಿಕೆ ಅಧಿಕಾರಿಗಳ ಅನುಪಸ್ಥಿತಿಯ ಬಗ್ಗೆ ಮಾಧ್ಯಮದವರು ಪ್ರಶ್ನಿಸಿದಾಗ, ಮುಜುಗರಕ್ಕೊಳಗಾದ ಅಧಿಕಾರಿಗಳು ಅದಾಲತ್‌ಗೆ ಪ್ರಚಾರ ನೀಡುವಲ್ಲಿ ಲೋಪವಾಗಿರುವುದನ್ನು ಒಪ್ಪಿಕೊಂಡರು. ನಾಳೆಯಿಂದ ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲಿ ಸಂಚರಿಸಿ, ಕಸ ಸಂಗ್ರಹಿಸುವ ವಾಹನಗಳಲ್ಲಿ ಮೈಕ್ ಮೂಲಕ ಜನರಿಗೆ ಮಾಹಿತಿ ನೀಡುವುದಾಗಿ ಮಾಧ್ಯಮಗಳಿಗೆ ತಿಳಿಸಿದರು.

ಅದಾಲತ್‌ನಲ್ಲಿ ಎಲ್ಲಾ ಬಾಕಿ ಇರುವ ಅರ್ಜಿಗಳನ್ನು ಮರುಪರಿಶೀಲಿಸಲು ಉದ್ದೇಶಿಸಲಾಗಿತ್ತು. ನ.19 ರವರೆಗೆ ಸಾರ್ವಜನಿಕರು ದಾಖಲೆಗಳೊಂದಿಗೆ ಅರ್ಜಿಗಳನ್ನು ಸ್ವೀಕರಿಸಲು ಯೋಜಿಸಲಾಗಿತ್ತು. ನ.30ರಂದು ಅಂತಿಮ ಅದಾಲತ್‌ನಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲಾಗುವುದು. ಸಾರ್ವಜನಿಕರ ಮಾಹಿತಿಗಾಗಿ ಮೊ– 94498–41196 ಅನ್ನು ಸಂಪರ್ಕಿಸಲು ತಿಳಿಸಲಾಗಿದೆ. ಪಾಲಿಕೆ ಅದಾಲತ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ನ.27ರೊಳಗೆ ಕೂಲಂಕಷವಾಗಿ ಪರಿಶೀಲಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಕುಂದುಕೊರತೆಗಳನ್ನು ಪರಿಹರಿಸದಿರುವ ನಿವಾಸಿಗಳು ಅಥವಾ ಅವರ ಅರ್ಜಿಯ ಬಗ್ಗೆ ಯಾವುದೇ ಮಾಹಿತಿ ಸಿಗದಿದ್ದರೆ, ನ.30 ರಂದು ಅಂತಿಮ ಪಾಲಿಕೆ ಅದಾಲತ್ ಅನ್ನು ಸಂಪರ್ಕಿಸಲು ಅವಕಾಶ ನೀಡಲಾಗಿದೆ.

ನಗರಪಾಲಿಕೆ ಉಪ ಆಯುಕ್ತ (ಕಂದಾಯ) ದಾಸೇಗೌಡ, ಕಾರ್ಯಪಾಲಕ ಇಂಜಿನಿಯರ್ ರಂಜಿತ್ ಕುಮಾರ್, ಕೌನ್ಸಿಲ್ ಕಾರ್ಯದರ್ಶಿ ಎ.ರಂಗಸ್ವಾಮಿ, ಆಡಳಿತಾಧಿಕಾರಿ ವೆಂಕಟರಾವ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮೊದಲ ದಿನ ಸ್ವೀಕೃತವಾದದ್ದು ಕೇವಲ 19 ಅರ್ಜಿ!?

ಮೈಸೂರು, ನ.14– ನಗರಪಾಲಿಕೆಯ ಮಹತ್ವಾಕಾಂಕ್ಷೆಯ ಆರು ದಿನಗಳ ‘ಪಾಲಿಕೆ ಅದಾಲತ್’ನಲ್ಲಿ ಭಾರೀ ಸಂಖ್ಯೆಯಲ್ಲಿ ಸಾರ್ವಜನಿಕರು ಬಂದು ದೂರು ನೀಡುತ್ತಾರೆಂದು ನಿರೀಕ್ಷಿಸಲಾಗಿತ್ತು. ಆದರೆ ಮೊದಲ ದಿನವೇ ಕೇವಲ ಬೆರಳೆಣಿಕೆಯಷ್ಟು ಮಂದಿ ಅರ್ಜಿ ಸಲ್ಲಿಸಿದರು. ವಿವಿಧ ವಿಭಾಗದಲ್ಲಿ 19 ಅರ್ಜಿಗಳು ಮಾತ್ರ ಸಲ್ಲಿಕೆಯಾಗಿವೆ. ವಲಯ ಕಚೇರಿ–3ರಲ್ಲಿ ನಿವೇಶನ ಖಾತೆ, ವಲಯ ಕಚೇರಿ–9ರಲ್ಲಿ ಫಾರಂ–3 ಮೂರು ಅರ್ಜಿಗಳು, ಕಟ್ಟಡ ಪೂರ್ಣಗೊಂಡ ವರದಿ ಕುರಿತು ಒಂದು ಅರ್ಜಿ, ಅನಧಿಕೃತ ಕಟ್ಟಡದ ಬಗ್ಗೆ ದೂರು– ಮೂರು ಅರ್ಜಿ, ವ್ಯಾಯಾಮ ಶಾಲೆ ಕಟ್ಟಿಕೊಡಲು ಕೋರಿ ಒಂದು ಅರ್ಜಿ, ಕಳಪೆ ಕಾಮಗಾರಿ ಬಗ್ಗೆ ದೂರು– ಒಂದು ಅರ್ಜಿ, ವಲಯ ಕಚೇರಿ– 8ರಲ್ಲಿ ಸ್ಮಶಾನ ಸ್ವಚ್ಛ ಮಾಡಿಕೊಡಲು ಕೋರಿ, ಆಶ್ರಯ ವಿಭಾಗದಲ್ಲಿ ಹಕ್ಕು ಖುಲಾಸೆ ಮತ್ತು ಹಕ್ಕು ಪತ್ರ ಕೋರಿ ನಾಲ್ಕು ಅರ್ಜಿ, ಒಳಚರಂಡಿ ವಿಭಾಗದಲ್ಲಿ ಯುಜಿಡಿ ಸಮಸ್ಯೆ ಬಗ್ಗೆ ದೂರಿನ ಒಂದು ಅರ್ಜಿ, ವಾಣಿವಿಲಾಸ ನೀರು ಸರಬರಾಜು ಕುರಿತಂತೆ ನೀರಿನ ಬಿಲ್ಲಿನ ಬಗ್ಗೆ ಮೂರು ಅರ್ಜಿಗಳು ಅದಾಲತ್‌ನಲ್ಲಿ ಸಲ್ಲಿಸಲ್ಪಟ್ಟವು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳು ಹಾಗೂ ಮನೆಗಳ ಇ ಹರಾಜು
ಪ್ರಕಟಣೆ ಸಂಖ್ಯೆ/ಮೈ.ನ.ಪ್ರಾ/ಇ.ಹ.ಪ್ರ/04/2022–23 ದಿನಾಂಕ: 09.11.2022 ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 18.11.2022 ರ ಭಾರತೀಯ ಕಾಲಮಾನ 18.00 ಗಂಟೆಯ ನಂತರ
2) ಕ್ರಸಂ.1 ರಿಂದ 50 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 05.12.2022 ರ ಭಾರತೀಯ ಕಾಲಮಾನ 18.00 ಗಂಟೆವರೆಗೆ ಮತ್ತು ಇ–ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 07.12.2022 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರಸಂ.51 ರಿಂದ 100 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 07.12.2022 ರ ಭಾರತೀಯ ಕಾಲಮಾನ 18.00 ಗಂಟೆವರೆಗೆ ಮತ್ತು ಇ–ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 09.12.2022 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).

ಕ್ರ. ಸಂ.	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ: ಉ–ದ	ಅಳತೆ ಮೀ ಗಳಲ್ಲಿ: ಪೂ–ಪ	ವಿಸ್ತೀರ್ಣ ಚ.ಮೀ. ಗಳಲ್ಲಿ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
ಮೂಲೆ ಹಾಗೂ ಮಧ್ಯಂತರ ನಿವೇಶನಗಳು								
24 ಮೀ (80 ಅಡಿ) ರಸ್ತೆ								
1	ದಟ್ಟಗಳ್ಳಿ 3ನೇ ಹಂತ	5011	ಮೂಲೆ	ಪ–ದ 24.00	18.00	(18.50+7.00)/2	229.50	122.09
2	ವಿಜಯನಗರ 4ನೇ ಹಂತ 1ನೇ ಫೇಸ್	1276	ಮೂಲೆ	ಪೂ–ದ 9–24	(11.20+18.50)/2	27.00	400.95	176.17
3	ವಿಜಯನಗರ 4ನೇ ಹಂತ 2ನೇ ಫೇಸ್	3136	ಮೂಲೆ	ಪೂ–ದ 24–9	(25.80+16.00)/2	22.00	459.80	202.03
4	ವಿಜಯನಗರ 4ನೇ ಹಂತ 2ನೇ ಫೇಸ್	4002	ಮಧ್ಯಂತರ	ಪೂರ್ವ 24.00	15.00	24.00	360.00	157.32
5	ವಿಜಯನಗರ 4ನೇ ಹಂತ 2ನೇ ಫೇಸ್	12228	ಮಧ್ಯಂತರ	ಉತ್ತರ 24.00	24.00	15.00	360.00	157.32
18 ಮೀ (60 ಅಡಿ) ರಸ್ತೆ								
6	ನಾಚನಹಳ್ಳಿ 2ನೇ ಹಂತ	262	ಮೂಲೆ	ಪೂ–ಉ 18.00	6.00	18.00	108.00	42.07
7	ವಿಜಯನಗರ 4ನೇ ಹಂತ 2ನೇ ಫೇಸ್	150	ಮಧ್ಯಂತರ	ಪೂರ್ವ 18.00	15.00	24.00	360.00	155.61
8	ದಟ್ಟಗಳ್ಳಿ ‘ಹೆಚ್’ ಬ್ಲಾಕ್ (ರಾಮಕೃಷ್ಣನಗರ)	36/ಬಿ	ಮೂಲೆ	ದ–ಪ 18.00	(7.00+18.50)/2	19.30	246.07	133.83
9	ದಟ್ಟಗಳ್ಳಿ ‘ಹೆಚ್’ ಬ್ಲಾಕ್ (ರಾಮಕೃಷ್ಣನಗರ)	106/ಸಿ	ಮೂಲೆ	ದ–ಪ 18.00	(13.00+18.50)/2	18.00	283.50	154.19
10	ದೇವನೂರು 3ನೇ ಹಂತ	1924	ಮಧ್ಯಂತರ	ಪೂರ್ವ 18.00	12.00	18.00	216.00	52.16
11	ದೇವನೂರು 3ನೇ ಹಂತ	1972	ಮಧ್ಯಂತರ	ಪಶ್ಚಿಮ 18.00	12.00	18.00	216.00	52.16
12	ದೇವನೂರು 3ನೇ ಹಂತ	3382	ಮಧ್ಯಂತರ	ದಕ್ಷಿಣ 18.00	12.00	18.00	216.00	52.16
13	ಸಾತಗಳ್ಳಿ 1ನೇ ಹಂತ	1139	ಮಧ್ಯಂತರ	ಪೂರ್ವ 18.00	15.00	24.00	360.00	114.02
14	ಸಾತಗಳ್ಳಿ 1ನೇ ಹಂತ	1140	ಮಧ್ಯಂತರ	ಪೂರ್ವ 18.00	15.00	24.00	360.00	114.02
15	ಸಾತಗಳ್ಳಿ 1ನೇ ಹಂತ	1141	ಮಧ್ಯಂತರ	ಪೂರ್ವ 18.00	15.00	24.00	360.00	114.02
16	ಸಾತಗಳ್ಳಿ 1ನೇ ಹಂತ	1142	ಮಧ್ಯಂತರ	ಪೂರ್ವ 18.00	15.00	24.00	360.00	114.02
17	ಸಾತಗಳ್ಳಿ 1ನೇ ಹಂತ	1460	ಮೂಲೆ	ಪೂ–ಉ 9–18	18.00	(10.00+19.00)/2	261.00	85.27
18	ಸಾತಗಳ್ಳಿ 1ನೇ ಹಂತ	1567	ಮೂಲೆ	ಪ–ಉ 9–18	(20.50+12.50)/2	18.00	297.00	97.03
19	ಸಾತಗಳ್ಳಿ 1ನೇ ಹಂತ	1586	ಮೂಲೆ	ಪ–ಉ 18–9	15.00	24.00	360.00	117.61
15 ಮೀ (50 ಅಡಿ) ರಸ್ತೆ								
20	ಸಾತಗಳ್ಳಿ 1ನೇ ಹಂತ	180/ಸಿ	ಮೂಲೆ	ಪೂ–ಉ 9–15	12.00	9.00	108.00	35.01
21	ಸಾತಗಳ್ಳಿ 1ನೇ ಹಂತ	641	ಮೂಲೆ	ಪ–ದ 9–15	18.00	12.00	216.00	70.03
12 ಮೀ (40 ಅಡಿ) ರಸ್ತೆ								
22	ಶ್ರೀರಾಂಪುರ 2ನೇ ಹಂತ	1782/ಎ	ಮೂಲೆ	ಪೂ–ಉ 12–9	7.90	(13.25+13.40)/2	105.27	38.75
23	ವಿಜಯನಗರ 4ನೇ ಹಂತ 2ನೇ ಫೇಸ್	223	ಮಧ್ಯಂತರ	ಉತ್ತರ 12.00	18.00	12.00	216.00	91.31
24	ವಿಜಯನಗರ 4ನೇ ಹಂತ 2ನೇ ಫೇಸ್	224	ಮಧ್ಯಂತರ	ಉತ್ತರ 12.00	18.00	12.00	216.00	91.31
25	ವಿಜಯನಗರ 4ನೇ ಹಂತ 2ನೇ ಫೇಸ್	4004/ಸಿ	ಮಧ್ಯಂತರ	ಉತ್ತರ 12.00	24.00	15.00	360.00	152.19
26	ಕೆ.ಸಿ.ಬಡಾವಣೆ	293	ಮೂಲೆ	ಪ–ಉ 12–9	(5.70+6.75)/2	18.30	113.92	58.44
27	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ ‘ಎ’ & ‘ಬಿ’ ಬ್ಲಾಕ್	110/ಡಿ	ಮೂಲೆ	ಉ–ಪ 12.00	12.00	(8.00+17.50)/2	153.00	81.76
28	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ ‘ಎ’ & ‘ಬಿ’ ಬ್ಲಾಕ್	132	ಮಧ್ಯಂತರ	ದಕಿಣ 12.00	18.00	12.00	216.00	114.91
29	ದಟ್ಟಗಳ್ಳಿ ‘ಕೆ’ ಬ್ಲಾಕ್ (ರಾಮಕೃಷ್ಣನಗರ)	1213/ಎ	ಮೂಲೆ	ಉ–ಪ 12.00	17.75	(9.50+20.00)/2	261.81	139.91
30	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	666	ಮಧ್ಯಂತರ	ದಕ್ಷಿಣ 12.00	12.00	9.00	108.00	31.51
31	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	668	ಮಧ್ಯಂತರ	ದಕ್ಷಿಣ 12.00	12.00	9.00	108.00	31.51
32	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	671	ಮಧ್ಯಂತರ	ದಕ್ಷಿಣ 12.00	12.00	9.00	108.00	31.51
33	ಸಾತಗಳ್ಳಿ 1ನೇ ಹಂತ	88	ಮೂಲೆ	ಪ–ದ 9–12	(5.00+25.00)/2	12.00	180.00	57.91
34	ಸಾತಗಳ್ಳಿ 1ನೇ ಹಂತ	191	ಮೂಲೆ	ಪೂ–ಉ 9.00	9.00	12.00	108.00	34.74
35	ಸಾತಗಳ್ಳಿ 1ನೇ ಹಂತ	1577	ಮೂಲೆ	ಪ–ದ 12–9	15.00	24.00	360.00	115.81
36	ಸಾತಗಳ್ಳಿ 1ನೇ ಹಂತ	1595	ಮೂಲೆ	ಉ–ಪ 12–9	15.00	24.00	360.00	115.81
37	ಸಾತಗಳ್ಳಿ 1ನೇ ಹಂತ	1619	ಮೂಲೆ	ಉ–ಪ 9–12	15.00	24.00	360.00	115.81
9 ಮೀ (30 ಅಡಿ) ರಸ್ತೆ								
38	ಶ್ರೀರಾಂಪುರ 3ನೇ ಹಂತ	2717	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
39	ಶ್ರೀರಾಂಪುರ 3ನೇ ಹಂತ	2718	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
40	ಶ್ರೀರಾಂಪುರ 3ನೇ ಹಂತ	2719	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
41	ಶ್ರೀರಾಂಪುರ 3ನೇ ಹಂತ	2720	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
42	ಶ್ರೀರಾಂಪುರ 3ನೇ ಹಂತ	2721	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
43	ಶ್ರೀರಾಂಪುರ 3ನೇ ಹಂತ	2723	ಮಧ್ಯಂತರ	ಪಶ್ಚಿಮ 9.00	9.00	15.00	135.00	48.09
44	ನಂಜನಗೂಡು ಬಸವನಗುಡಿ ಬ್ಲಾಕ್	07	ಮೂಲೆ	ಪೂ–ದ 9.00	7.00	20.50	143.50	31.93
45	ಹಂಡುವಿನಹಳ್ಳಿ (ನಂಜನಗೂಡು)	94	ಮೂಲೆ	ಪೂ–ದ 9.00	(16.00+16.50)/2	12.00	195.00	19.50
46	ವಿಜಯನಗರ 4ನೇ ಹಂತ 2ನೇ ಫೇಸ್	2714	ಮಧ್ಯಂತರ	ದಕ್ಷಿಣ 9.00	14.20	9.00	127.80	53.42
47	ವಿಜಯನಗರ 4ನೇ ಹಂತ 2ನೇ ಫೇಸ್	2716/ಬಿ	ಮಧ್ಯಂತರ	ದಕ್ಷಿಣ 9.00	(14.30+14.20)/2	9.00	128.25	53.61
48	ವಿಜಯನಗರ 4ನೇ ಹಂತ 2ನೇ ಫೇಸ್	2716/ಸಿ	ಮಧ್ಯಂತರ	ದಕ್ಷಿಣ 9.00	(14.20+14.00)/2	9.00	126.90	53.04
49	ವಿಜಯನಗರ 4ನೇ ಹಂತ 2ನೇ ಫೇಸ್	4006	ಮಧ್ಯಂತರ	ಪಶ್ಚಿಮ 9.00	15.00	24.00	360.00	150.48
50	ವಿಜಯನಗರ 4ನೇ ಹಂತ 2ನೇ ಫೇಸ್	4007	ಮಧ್ಯಂತರ	ಪಶ್ಚಿಮ 9.00	15.00	24.00	360.00	150.48
51	ಹೆಬ್ಬಾಳು 2ನೇ ಹಂತ	1718	ಮೂಲೆ	ಉ–ಪ 9.00	(13.20+28.00)/2	18.00	370.80	193.74
52	ಹೆಬ್ಬಾಳು 3ನೇ ಹಂತ	1291	ಮಧ್ಯಂತರ	ಪೂರ್ವ 9.00	9.00	12.00	108.00	51.30
53	ಹೆಬ್ಬಾಳು 3ನೇ ಹಂತ	1295	ಮಧ್ಯಂತರ	ಪಶ್ಚಿಮ 9.00	9.00	11.50	103.50	49.16
54	ಹೆಬ್ಬಾಳು 3ನೇ ಹಂತ	1297	ಮಧ್ಯಂತರ	ಪಶ್ಚಿಮ 9.00	9.00	11.50	103.50	49.16
55	ಹೆಬ್ಬಾಳು 3ನೇ ಹಂತ	1298	ಮಧ್ಯಂತರ	ಪಶ್ಚಿಮ 9.00	9.00	11.50	103.50	49.16
56	ಹೆಬ್ಬಾಳು 3ನೇ ಹಂತ	1299	ಮಧ್ಯಂತರ	ಪಶ್ಚಿಮ 9.00	9.00	11.50	103.50	49.16
57	ದೇವನೂರು 1ನೇ ಹಂತ	794	ಮಧ್ಯಂತರ	ಪಶ್ಚಿಮ 9.00	(4.00+10.00)/2	18.00	126.00	38.96
58	ದೇವನೂರು 1ನೇ ಹಂತ	1198	ಮೂಲೆ	ಪ–ದ 6–9	9.00	(14.50+27.00)/2	186.75	59.61
59	ದೇವನೂರು 2ನೇ ಹಂತ 2ನೇ ಫೇಸ್	1710	ಮಧ್ಯಂತರ	ಪೂರ್ವ 9.00	12.00	18.00	216.00	62.48
60	ದೇವನೂರು 2ನೇ ಹಂತ 2ನೇ ಫೇಸ್	2595/ಬಿ	ಮಧ್ಯಂತರ	ದಕ್ಷಿಣ 9.00	(0+15.00)/2	21.00	157.50	45.56
61	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	641	ಮಧ್ಯಂತರ	ದಕ್ಷಿಣ 9.00	12.00	9.00	108.00	31.24
62	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	1652	ಮಧ್ಯಂತರ	ಪಶ್ಚಿಮ 9.00	15.00	24.00	360.00	104.14
63	ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ	1662	ಮಧ್ಯಂತರ	ಪಶ್ಚಿಮ 9.00	15.00	24.00	360.00	104.14
64	ಸಾತಗಳ್ಳಿ 1ನೇ ಹಂತ	206/ಎ	ಮೂಲೆ	ಉ–ಪ 9.00	12.00	9.00	108.00	34.47
65	ಸಾತಗಳ್ಳಿ 1ನೇ ಹಂತ	426/ಎ	ಮೂಲೆ	ಉ–ಪ 9.00	(8.30+17.80)/2	12.30	160.51	51.23
66	ಸಾತಗಳ್ಳಿ 1ನೇ ಹಂತ	640	ಮೂಲೆ	ಪ–ಉ 9.00	18.00	12.00	216.00	68.95
67	ಸಾತಗಳ್ಳಿ 1ನೇ ಹಂತ	1132	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
68	ಸಾತಗಳ್ಳಿ 1ನೇ ಹಂತ	1133	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
69	ಸಾತಗಳ್ಳಿ 1ನೇ ಹಂತ	1134	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
70	ಸಾತಗಳ್ಳಿ 1ನೇ ಹಂತ	1151	ಮಧ್ಯಂತರ	ಉತ್ತರ 9.00	18.00	12.00	216.00	66.79
71	ಸಾತಗಳ್ಳಿ 1ನೇ ಹಂತ	1152	ಮಧ್ಯಂತರ	ಉತ್ತರ 9.00	18.00	12.00	216.00	66.79
72	ಸಾತಗಳ್ಳಿ 1ನೇ ಹಂತ	1153	ಮಧ್ಯಂತರ	ಉತ್ತರ 9.00	18.00	12.00	216.00	66.79
73	ಸಾತಗಳ್ಳಿ 1ನೇ ಹಂತ	1154	ಮಧ್ಯಂತರ	ಉತ್ತರ 9.00	18.00	12.00	216.00	66.79
74	ಸಾತಗಳ್ಳಿ 1ನೇ ಹಂತ	1156	ಮಧ್ಯಂತರ	ಉತ್ತರ 9.00	18.00	12.00	216.00	66.79
75	ಸಾತಗಳ್ಳಿ 1ನೇ ಹಂತ	1582	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
76	ಸಾತಗಳ್ಳಿ 1ನೇ ಹಂತ	1617	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
77	ಸಾತಗಳ್ಳಿ 1ನೇ ಹಂತ	1618	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
78	ಸಾತಗಳ್ಳಿ 2ನೇ ಹಂತ	5410	ಮಧ್ಯಂತರ	ಪಶ್ಚಿಮ 9.00	9.00	12.00	108.00	26.72
79	ಸಾತಗಳ್ಳಿ 2ನೇ ಹಂತ	5414	ಮಧ್ಯಂತರ	ಪೂರ್ವ 9.00	9.00	12.00	108.00	26.72
80	ಸಾತಗಳ್ಳಿ 2ನೇ ಹಂತ	5415	ಮಧ್ಯಂತರ	ಪೂರ್ವ 9.00	9.00	12.00	108.00	26.72
81	ಸಾತಗಳ್ಳಿ 2ನೇ ಹಂತ	5425	ಮಧ್ಯಂತರ	ಪಶ್ಚಿಮ 9.00	6.00	9.00	54.00	13.36
82	ಸಾತಗಳ್ಳಿ 2ನೇ ಹಂತ	5426	ಮಧ್ಯಂತರ	ಪಶ್ಚಿಮ 9.00	6.00	9.00	54.00	13.36
83	ಸಾತಗಳ್ಳಿ 2ನೇ ಹಂತ	5427	ಮಧ್ಯಂತರ	ಪಶ್ಚಿಮ 9.00	6.00	9.00	54.00	13.36
84	ಸಾತಗಳ್ಳಿ 2ನೇ ಹಂತ	5428	ಮಧ್ಯಂತರ	ಪಶ್ಚಿಮ 9.00	6.00	9.00	54.00	13.36
85	ಸಾತಗಳ್ಳಿ 2ನೇ ಹಂತ	5429	ಮಧ್ಯಂತರ	ಪಶ್ಚಿಮ 9.00	6.00	9.00	54.00	13.36
86	ಸಾತಗಳ್ಳಿ 2ನೇ ಹಂತ	5433	ಮಧ್ಯಂತರ	ಪೂರ್ವ 9.00	6.00	9.00	54.00	13.36
87	ಸಾತಗಳ್ಳಿ 2ನೇ ಹಂತ	5434	ಮಧ್ಯಂತರ	ಪೂರ್ವ 9.00	6.00	9.00	54.00	13.36
88	ಸಾತಗಳ್ಳಿ 2ನೇ ಹಂತ	5435	ಮಧ್ಯಂತರ	ಪೂರ್ವ 9.00	6.00	9.00	54.00	13.36
89	ಸಾತಗಳ್ಳಿ 2ನೇ ಹಂತ	5436	ಮಧ್ಯಂತರ	ಪೂರ್ವ 9.00	6.00	9.00	54.00	13.36
90	ಸಾತಗಳ್ಳಿ 1ನೇ ಹಂತ	527	ಮಧ್ಯಂತರ	ಪಶ್ಚಿಮ 9.00	15.00	24.00	360.00	111.32
91	ಸಾತಗಳ್ಳಿ 1ನೇ ಹಂತ	541	ಮೂಲೆ	ಪೂ–ದ 9.00	15.00	24.00	360.00	114.91
92	ಸಾತಗಳ್ಳಿ 1ನೇ ಹಂತ	1585	ಮೂಲೆ	ಉ–ಪ 9.00	15.00	24.00	360.00	114.91
93	ಸಾತಗಳ್ಳಿ 1ನೇ ಹಂತ	1594	ಮೂಲೆ	ಪೂ–ದ 9.00	15.00	24.00	360.00	114.91
6 ಮೀ (20 ಅಡಿ) ರಸ್ತೆ								
94	ವಿಜಯನಗರ 2ನೇ ಹಂತ	4887	ಮಧ್ಯಂತರ	ಪೂರ್ವ 6.00	6.00	9.00	54.00	27.05
95	ವಿಜಯನಗರ 2ನೇ ಹಂತ	4892	ಮಧ್ಯಂತರ	ಪೂರ್ವ 6.00	6.00	9.00	54.00	27.05
96	ದೇವನೂರು ಹುಡ್ಕೋ 1ನೇ ಹಂತ	160/ಎ	ಮೂಲೆ	ದ–ಪ 6.00	8.00	7.00	56.00	17.04

ಮನೆಗಳು

ಕ್ರ. ಸಂ.	ಬಡಾವಣೆಯ ಹೆಸರು	ಮನೆಯ ಸಂಖ್ಯೆ	ಮೂಲೆ / ಮಧ್ಯಂತರ	ಮನೆ ವಿಸ್ತೀರ್ಣ ಚ.ಮೀ.	ನಿವೇಶನದ ವಿಸ್ತೀರ್ಣ ಚ.ಮೀ.	ನಿಗಧಿಪಡಿಸಲಾದ ಮೌಲ್ಯ
97	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	ಎಂ.ಐ.ಜಿ–15	ಮಧ್ಯಂತರ	70.95	108.00	49.63
98	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	ಎಂ.ಐ.ಜಿ–21	ಮಧ್ಯಂತರ	70.95	108.00	49.63
99	ದಟ್ಟಗಳ್ಳಿ 2ನೇ ಹಂತ ‘ಹೆಚ್’ ಬ್ಲಾಕ್	ಹೆಚ್.ಐ.ಜಿ–546	ಮಧ್ಯಂತರ	73.66	216.00	102.50
100	ಹೆಬ್ಬಾಳು 1ನೇ ಹಂತ	ಇ.ಡಬ್ಲ್ಯೂ.ಎಸ್–2–405	ಮಧ್ಯಂತರ	19.00	32.30	20.52

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಸಿಟಿಜನ್ ವಿಭಾಗದಲ್ಲಿ ಲಭ್ಯವಿರುವ Simplified e-auction user guide ನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://www.eproc.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಅಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ.** 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 18.00 ಆಗಿದ್ದು, ನೀವು 17.57 ಕ್ಕೆ ಬಿಡ್ ಮಾಡಿದಾಗ 18.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನ/ಮನೆಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನ/ಮನೆಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಅಥವಾ ಡಿಡಿ/ ಚಲನ್ ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.10,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/–ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಅಥವಾ ಡಿ.ಡಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ನ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MUDA Mysore, Bank of Baroda, Account No.89260100004660 (IFSC Code No. BARB0VJMUDA, 5ನೇ ಅಕ್ಷರ ಸೊನ್ನೆ ಆಗಿರುತ್ತದೆ)**, ಖಾತೆಗೆ ವರ್ಗಾವಣೆ/ಪಾವತಿ ಮಾಡಬಹುದಾಗಿರುತ್ತದೆ ಹಾಗೂ ಡಿ.ಡಿ.ಯನ್ನು ಸಹ ಪಡೆದು ಸಲ್ಲಿಸಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ನ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು www.eproc.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ.** 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ನಿವೇಶನಗಳ ಸ್ಥಳ ಮಾಹಿತಿ, ಅಭಿಮುಖ, ರಸ್ತೆ ಅಳತೆ ಇನ್ನಿತರೆ ವಿವರಗಳನ್ನು https://www.eproc.karnataka.gov.in ಅಥವಾ www.mudamysore.gov.in ವೆಬ್‌ಸೈಟ್‌ನಿಂದ ತಿಳಿದುಕೊಳ್ಳಬಹುದಾಗಿರುತ್ತದೆ ಅಥವಾ ದೂರವಾಣಿ ಸಂಖ್ಯೆ– 0821–2421629 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. 18) ನಿವೇಶನಗಳ ಸ್ಥಳದ (Location) ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –ಅ) ವಲಯ ಕಛೇರಿ–1 – 1. ಶ್ರೀರಾಂಪುರ 2ನೇ ಮತ್ತು 3ನೇ ಹಂತ ಬಡಾವಣೆ – ಶ್ರೀ.ಪ್ರಸಾದ್, ಸ.ಅ., ಮೊಬೈಲ್ ನಂ.9880434585, 2. ಹಂಡುವಿನಹಳ್ಳಿ (ನಂಜನಗೂಡು), ನಂಜನಗೂಡು ಬಸವನಗುಡಿ ಬ್ಲಾಕ್, ಬೆಸ್ತರ್ ಬ್ಲಾಕ್‌ಬಡಾವಣೆ, ಚಿಕ್ಕಹರದನಹಳ್ಳಿ – ಶ್ರೀ. ಲೋಕೇಶ್, ಸ.ಅ., ಮೊಬೈಲ್ ನಂ.9972431398. ಆ) ವಲಯ ಕಛೇರಿ–2 – ದಟ್ಟಗಳ್ಳಿ 3ನೇ ಹಂತ– ಶ್ರೀ. ಲೋಹಿತ್, ಸ.ಅ., ಮೊಬೈಲ್ ನಂ.9632294840.ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ನಂದೀಶ್, ಸ.ಅ., ಮೊಬೈಲ್ ನಂ..9845153643.ಈ) ವಲಯ ಕಛೇರಿ–4– ಹೆಬ್ಬಾಳು 1, 2 ಮತ್ತು 3ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀ.ಪುಟ್ಟನಾಗರಾಜು, ಸ.ಅ., ಮೊಬೈಲ್ ನಂ.9886975792. ಉ) ವಲಯ ಕಛೇರಿ–5ಬಿ – ದೇವನೂರು 1, 2 & 3ನೇ ಹಂತ – ಶ್ರೀ. ರಾಜಶೇಖರ್, ಕಿ.ಅ., ಮೊಬೈಲ್ ನಂ.9880929640, ಊ) ವಲಯ ಕಛೇರಿ–6 – ಲಲಿತಾದ್ರಿನಗರ (ದಕ್ಷಿಣ) ಬಡಾವಣೆ, ಕೆ.ಸಿ.ಬಡಾವಣೆ – ಶ್ರೀ. ಪರಮೇಶ್, ಕಿ.ಅ., ಮೊಬೈಲ್ ನಂ. 9739841333. ಋ) ವಲಯ ಕಛೇರಿ–7 – ದಟ್ಟಗಳ್ಳಿ 2ನೇ ಹಂತ ಎಲ್ಲಾ ಬ್ಲಾಕ್ (ರಾಮಕೃಷ್ಣನಗರ) – ಶ್ರೀ. ಹೆಚ್.ಇ.ನಾಗರಾಜ್, ಸ.ಅ., ಮೊಬೈಲ್ ನಂ.9448673434.ಎ) ವಲಯ ಕಛೇರಿ–8 – ಸಾತಗಳ್ಳಿ 1ನೇ & 2ನೇ ಹಂತ, ಹಂಚ್ಯಾ–ಸಾತಗಳ್ಳಿ ‘ಬಿ’ ವಲಯ ಬಡಾವಣೆ – ಶ್ರೀ. ಚೇತನ್‌ಬಾಬು..ಎಂ, ಸ.ಅ., ಮೊಬೈಲ್ ನಂ.9008071575.

ಸಹಿ/– ಆಯುಕ್ತರು

ಅರ್ಜಿ ಆಹ್ವಾನ

ಮೈಸೂರು, ನ.14– ಟಿ.ನರಸೀಪುರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2022–23 ನೇ ಸಾಲಿಗೆ ನೀಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಡಿಸೆಂಬರ್ 31 ಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ.

ಆಸಕ್ತರು https://ssp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. 1–10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅಥವಾ https://bcwd.karnataka.gov.in/ ವೆಬ್‌ಸೈಟ್ ಅಥವಾ ದೂ.ಸಂ: 8050770005 ಅನ್ನು ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಒಬ್ಬ : ನಿಮ್ಮ ದೇಶದಲ್ಲಿ ಸಾವಿನ ಪ್ರಮಾಣ ಹೇಗೆ?
ಇನ್ನೊಬ್ಬ : ನೂರಕ್ಕೆ ನೂರು
ಒಬ್ಬ : ಹೇಗೆ?
ಇನ್ನೊಬ್ಬ : ಇಲ್ಲಿ ಯಾರು ಹುಟ್ಟಿದ್ದಾರೋ ಅವರೆಲ್ಲಾ ಕಡೆಯಲ್ಲಿ ಸಾಯ್ತಾರೆ

ಮೈಸೂರು ಮಿತ್ರ

ಮಂಗಳವಾರ, 15 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಏನೂ ಮಾಡದೆ ಇರುವುದಕ್ಕಿಂತ, ತಡವಾಗಿಯಾದರೂ ಏನಾದರೂ ಒಳ್ಳೆಯದನ್ನು ಮಾಡುವುದು ಶ್ರೇಯಸ್ಕರ –ಸೂಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿಶ್ವದಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಜಾಸ್ತಿ

ನಿಮ್ಮ ಪತ್ರಗಳು

ವಂದೇ ಭಾರತ್ ರೈಲಿನಲ್ಲಿ ಹೋಗುವಾಗ ಒಂದು ದರ, ಬರುವಾಗ ಒಂದು ದರ–ಇದು ಏಕೆ?

ಮಾನ್ಯರೆ,

ಬೆಳಗ್ಗೆ 10 ನಿಮಿಷ ಅವಧಿಯಲ್ಲೇ ಎರಡೂ ಸೂಪರ್ ಫಾಸ್ಟ್ ರೈಲುಗಳು ಚೆನ್ನೈ ಬಿಟ್ಟು ಮೈಸೂರು ಕಡೇ ಪ್ರಯಾಣಿಸುವ ರೈಲುಗಳಲ್ಲಿ ವಂದೇ ಭಾರತ್ ರೈಲಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ದರ 515 ರೂ. ಇದ್ದು, ವಾಪಸು ಹೋಗುವಾಗ ಅಷ್ಟೇ ದೂರಕ್ಕೆ 720 ನಿಗದಿಯಾಗಿದೆ. ಅಂದರೆ 205 ರೂ. ಜಾಸ್ತಿ. ಇದಕ್ಕೆ ಆಧಾರ (ಮೈಸೂರು ಮಿತ್ರ –3ನೇ ಪುಟ) ಗೊತ್ತಾಗ್ಲಿಲ್ಲ. ಇಲಾಖೆಯವರು ಪತ್ರಿಕೆ ಮೂಲಕ ಸ್ಪಷ್ಟೀಕರಿಸಬೇಕಾಗಿದೆ. ಶತಾಬ್ದಿ ರೈಲಿನಲ್ಲಿ ಕೊಡುತ್ತಿದ್ದ ನೀರಿನ ಬಾಟಲಿಯನ್ನು ಅರ್ಧ ಲೀಟರ್‌ಗೆ ಇಳಿಸಿದ್ದಾರೆ. ಇದರಲ್ಲಿ ಗುತ್ತಿಗೆದಾರನ ಕೈವಾಡವೇನಾದರೂ ಇದೆಯೇ ಎಂದು ವಿಚಾರಣೆ ಮಾಡಬೇಕಿದೆ.

ಚೆನ್ನೈನಿಂದ ಪ್ರಯಾಣಿಸುವವರಿಗೆ ತಮಿಳುನಾಡು ಸಮಾಚಾರ ಇರುವ ಚೆನ್ನೈ ಎಡಿಷನ್‌ನ ಹಿಂದೂ ಕೊಡುತ್ತಾರೆ. ಕರ್ನಾಟಕದವರಿಗೆ ಇದರಿಂದ ಏನೂ ಪ್ರಯೋಜನವಿಲ್ಲ. ಬೆಂಗಳೂರು ಬಿಟ್ಟ ಮೇಲೆ ಯಾವುದೇ ಪೇಪರ್ ಇಲ್ಲ. ಆದುದರಿಂದ ಬೆಂಗಳೂರು ಬಿಟ್ಟ ಮೇಲೆ ಕರ್ನಾಟಕ ಸಮಾಚಾರ ಇರುವ ಕನ್ನಡ ಪೇಪರ್ ಸಪ್ಲೈ ಮಾಡಲಿ. ರೈಲು ಅಧಿಕಾರಿಗಳು ಮತ್ತು ಮೈಸೂರಿನ ಸಂಸದರು ಇತ್ತ ಗಮನಹರಿಸಬೇಕೆಂದು ಮನವಿ.

–ಅಕ್ಕಿಹೆಬ್ಬಾಳ್ ವೆಂಕಟೇಶ್, ಮೈಸೂರು.

ಡಬಲ್ ಇಂಜಿನ್ ಸರ್ಕಾರ ಎಂಬ ಮಿಥ್ಯೆ

ಮಾನ್ಯರೆ,

ಸರ್ಕಾರದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿರುವ ಅನೇಕರು ಹಾಗೂ ಹಲವಾರು ಬಿಜೆಪಿ ನಾಯಕರು, ಡಬಲ್ ಇಂಜಿನ್ ಸರ್ಕಾರ, ಡಬಲ್ ಇಂಜಿನ್ ಸರ್ಕಾರ ಎಂದು ಆಗಿಂದಾಗ್ಗೆ ಹೇಳುತ್ತಿರುವುದು. ಅಷ್ಟೇನೂ ಸರಿ ಕಾಣದು. ಇದೊಂದು ರೀತಿಯಲ್ಲಿ ಹಾಸ್ಯಾಸ್ಪದ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆ ಎನ್ನಬಹುದು. ಈ ಮಹಾಶಯರ ಪ್ರಕಾರ, ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರ ಇದ್ದರೆ, ಅದನ್ನು ಡಬಲ್ ಇಂಜಿನ್ ಸರ್ಕಾರ ಎಂದು ಕರೆಯಲಾಗುತ್ತದೆ. ಈ ಗುಣ ವಿಶೇಷಣವನ್ನು ಉತ್ತರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಬಗ್ಗೆ ಪದೇ ಪದೆ ಒತ್ತಿ ಹೇಳಲಾಗುತ್ತಿದೆ.

ಕರ್ನಾಟಕದಲ್ಲಿ ಮುಂದಿನ ವರ್ಷದ ಮೇ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಹೀಗಾಗಿ ಮತದಾರರನ್ನು ಓಲೈಸಲು ಈ ಪುಂಗಿಯನ್ನು ಪದೇ ಪದೆ ಕೆಲವು ಬಿಜೆಪಿ ನಾಯಕರು ಅನಗತ್ಯವಾದರೂ ಸಹ ಊದುತ್ತಿರುವುದು ಅಸಹ್ಯಕರವಾಗಿದೆ. ಭಾರತ ಒಂದು ಒಕ್ಕೂಟ ರಾಷ್ಟ್ರವಾಗಿದೆ. ಇಲ್ಲಿ ವಿವಿಧ ಜಾತಿ ಮತ್ತು ಪಂಗಡಗಳಿಗೆ ಸೇರಿರುವ ಕೋಟ್ಯಾಂತರ ಜನರಿದ್ದಾರೆ. ನಮ್ಮ ರಾಜ್ಯಾಂಗದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ ಇರಬೇಕು ಎಂದು ಎಲ್ಲಿಯೂ ಹೇಳಿಲ್ಲ. ನಮ್ಮ ದೇಶದಲ್ಲಿ ಹಲವಾರು ಪ್ರಾದೇಶಿಕ ಪಕ್ಷಗಳಿದ್ದು, ತಮಿಳು ನಾಡು, ಆಂಧ್ರ ಪ್ರದೇಶ, ತೆಲಂಗಾಣ, ಒರಿಸ್ಸಾ, ಪಶ್ಚಿಮ ಬಂಗಾಳ, ದೆಹಲಿ, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ. ಪಶ್ಚಿಮ ಬಂಗಾಳದಲ್ಲಿ ದಿವಂಗತ ಜ್ಯೋತಿ ಬಸು ನೇತೃತ್ವದಲ್ಲಿ ಎರಡು ದಶಕಗಳಿಗಿಂತ ಅಧಿಕ ಕಾಲ ಎಡ ಪಕ್ಷಗಳು ಅಧಿಕಾರದಲ್ಲಿದ್ದವು. ಹೀಗಾಗಿ ತಮಗೆ ಇಷ್ಟ ಬಂದ ಪಕ್ಷವನ್ನು ಅಧಿಕಾರಕ್ಕೆ ತರುವುದು ಆಯಾ ರಾಜ್ಯಗಳ ಮತದಾರ ಪ್ರಭುಗಳ ತೀರ್ಮಾನ. ಕೆಲವು ಬಿಜೆಪಿ ನಾಯಕರ ಅಭಿಪ್ರಾಯದ ಪ್ರಕಾರ, ಡಬಲ್ ಇಂಜಿನ್ ಸರ್ಕಾರ ಇದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂಬ ಧೋರಣೆ ಪ್ರಜಾಪ್ರಭುತ್ವ ವಿರೋಧಿ ಧೋರಣೆಯಾಗುತ್ತದೆ. ಒಂದು ವೇಳೆ ನೀವು ಬೇರೆ ಪಕ್ಷಕ್ಕೆ ಮತ ನೀಡಿದರೆ, ನಿಮ್ಮ ರಾಜ್ಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ನೆರವು ಸಿಗುವುದಿಲ್ಲ ಎಂಬ ಪರೋಕ್ಷ ಸೂಚನೆಯನ್ನು ಸಹ ಡಬಲ್ ಇಂಜಿನ್ ಸರ್ಕಾರದ ಪ್ರವರ್ತಕರು ನೀಡುತ್ತಿದ್ದಾರೆ. ಆದ್ದರಿಂದ ಬಿಜೆಪಿ ನಾಯಕರು, ಇನ್ನು ಮುಂದಾದರೂ ಡಬಲ್ ಇಂಜಿನ್ ಸರ್ಕಾರ ಎಂಬ ಅನರ್ಥಕ ಪದವನ್ನು ಬಳಸದಿರುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಹಾತ್ಮ ಗಾಂಧಿ ರಸ್ತೆಯ ಹಳ್ಳ ಮುಚ್ಚಿ



ಮಾನ್ಯರೆ,

ನಗರದ ನ್ಯಾಯಾಲಯದ ಎದುರಿನ ಮಹಾತ್ಮ ಗಾಂಧಿ ರಸ್ತೆಯು ತುಂಬಾ ಹಳ್ಳಕೊಳ್ಳಗಳಿಂದ ಕೂಡಿದೆ ಇದರಿಂದಾಗಿ ವಕೀಲರು, ಕಕ್ಷಿದಾರರು, ವಿದ್ಯಾರ್ಥಿಗಳು, ಸಾರ್ವಜನಿಕ ವಾಹನ ಸವಾರರಿಗೆ ತೀವ್ರ ತೊಂದರೆ ಆಗುತ್ತಿದೆ.


ಆರ್‌ಟಿಓ ಕಚೇರಿಯಿಂದ ನ್ಯಾಯಾಲಯಕ್ಕೆ ಬರುವಾಗ ವಿಶ್ವ ಭೂಪಟದ ರೂಪದಲ್ಲಿ ರಸ್ತೆ ಕಿತ್ತು ಹಳ್ಳಗಳಾಗಿದ್ದು, ದ್ವಿಚಕ್ರ ವಾಹನಗಳ ಸವಾರರಿಗೆ ಬೆನ್ನು ನೋವು ಉಚಿತವಾಗಿ ಲಭ್ಯವಿದೆ. ವಾಹನದ ಸವಾರಿ ಮಾಡುವಾಗ ಸ್ವಲ್ಪ ಆಯ ತಪ್ಪಿದರೆ ಪ್ರಾಣಕ್ಕೆ ಸಂಚಕಾರ ಕಟ್ಟಿಟ್ಟ ಬುತ್ತಿ ದಿನನಿತ್ಯ ಸಾವಿರಾರು ವಾಹನಗಳ ಸಂಚಾರ ಇರುವ ಜನನಿಬಿಡ ರಸ್ತೆಯಾದ ಮಹಾತ್ಮ ಗಾಂಧಿ ರಸ್ತೆಯ ರಿಪೇರಿ ಮಾಡಲು ನಗರಪಾಲಿಕೆ ಕ್ರಮವಹಿಸಲಿ –ಪಡುವಾರಹಳ್ಳಿ ಎಂ ರಾಮಕೃಷ್ಣ, ವಕೀಲರು, ಮೈಸೂರು.

ಈ ವರ್ಷದಲ್ಲೇ ಪಿಸಿಎಂಬಿ ಕನ್ನಡ ಪುಸ್ತಕಗಳು ಬರಲಿ

ಮಾನ್ಯರೆ,

ಕರ್ನಾಟಕ ಸರ್ಕಾರ ಪದವಿ ಪೂರ್ವ ಶಿಕ್ಷಣ ಇಲಾಖೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡದಲ್ಲಿ ಪಿಸಿಎಂಬಿ ಪುಸ್ತಕಗಳನ್ನು ಹೊರತರಲು ನಿರ್ಧರಿಸಿದೆ. ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮ ವ್ಯಾಸಂಗ ಮಾಡಿದಂತಹ ವಿದ್ಯಾರ್ಥಿಗಳು ಪಿಯುಸಿಯಲ್ಲಿ ವಿಜ್ಞಾನ ಕೋರ್ಸ್ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಇಂಗ್ಲಿಷಿನಲ್ಲಿ ಓದಲು ಕಷ್ಟವಾಗುತ್ತಿತ್ತು. ಆದರೆ ಈಗ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡದಲ್ಲಿ ಪಿಸಿಎಂಬಿ ವಿಷಯಗಳ ಪುಸ್ತಕಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ. ಆದರೆ ಈ ವರ್ಷ ಓದುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಆದಷ್ಟು ಬೇಗ ಮಳಿಗೆ ಅಥವಾ ಗ್ರಂಥಾಲಯ ಹಾಗೂ ಕಾಲೇಜುಗಳಿಗೆ ಪುಸ್ತಕಗಳ ಒದಗಿಸಬೇಕೆಂದು ಮನವಿ.

– ಮಹಾಂತೇಶ್, ಬಳ್ಳೂರುಹುಂಡಿ, ನಂಜನಗೂಡು ತಾ.



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಗೋವೆಯಲ್ಲಿ ಆಚರಿಸಿದ ದೀಪಾವಳಿ–1

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ







ಪ್ರತಾಪ್ ಸಿಂಹ



ಪಿ.ವಿ. ಗಿರಿ



ತರುಣ್ ಗಿರಿ

ಕಳೆದ 45 ವರ್ಷಗಳಿಂದಲೂ ನನ್ನ ಲೋಕಸಭಾ ಕ್ಷೇತ್ರದಲ್ಲಿ (ಈಗ ಮೈಸೂರು–ಕೊಡಗು) ಕ್ಷೇತ್ರ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಚುನಾಯಿತ ಪ್ರತಿನಿಧಿಗಳನ್ನು ನೋಡಿದ್ದೇನೆ. ಆದರೆ, ಪ್ರಸ್ತುತ ಈ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿರುವ ಪ್ರತಾಪ ಸಿಂಹ ತಮ್ಮ 38ನೇ ವಯಸ್ಸಿನಲ್ಲೇ 2014ರ ಚುನಾವಣೆಯಲ್ಲಿ ಪ್ರಥಮ ಬಾರಿ ಲೋಕಸಭೆಗೆ ಆಯ್ಕೆಗೊಂಡರು. ಎರಡನೇ ಬಾರಿಗೆ ತಮ್ಮ 43ನೇ ವಯಸ್ಸಿನಲ್ಲಿ (2019ರ ಚುನಾವಣೆಯಲ್ಲಿ) ಆಯ್ಕೆಗೊಂಡರು. ಈ ಅವಧಿಯಲ್ಲಿ ನಾನು ಅವರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆದಂತಹ ಗಮನಾರ್ಹ ಸಾಧನೆಗಳನ್ನು ನೋಡುತ್ತಿದ್ದೇನೆ. ಅವರು ಮಾಡಿದಂತಹ ಕೆಲಸಗಳ ಪಟ್ಟಿ ಅತ್ಯಂತ ದೊಡ್ಡದಿದೆ.

ಭಾರತೀಯ ಮೂಲದ ಹಿಂದೂ– ಬ್ರಿಟಿಷ್ ಪ್ರಜೆಯಾದ ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನ ಮಂತ್ರಿಯಂತಹ ಉನ್ನತ ಹುದ್ದೆಗೆ ಕೇವಲ 42ನೇ ವಯಸ್ಸಿನಲ್ಲೇ ಏರಿದ್ದು ಪ್ರಜಾಸತ್ತಾತ್ಮಕ ಪ್ರಪಂಚದ ಮತದಾರರಿಗೆ ಹಲವಾರು ಪಾಠಗಳನ್ನು ಕಲಿಸಿದೆ.

ಆದಾಗ್ಯೂ, ಚಿಕ್ಕ ವಯಸ್ಸಿನಲ್ಲೇ ರಾಷ್ಟ್ರಪತಿ ಅಥವಾ ಪ್ರಧಾನ ಮಂತ್ರಿಯಂತಹ ಉನ್ನತ ಹುದ್ದೆಗೇರಿದ ಅನೇಕ ಉದಾಹರಣೆಗಳಿವೆ. ಆದರೆ ಅವರ ಸಂಖ್ಯೆ ಅತ್ಯಂತ ವಿರಳವಾಗಿದೆ. ನಮ್ಮ ದೇಶಕ್ಕೆ ಸಂಬಂಧಿಸಿದಂತೆ, 1984ರಲ್ಲಿ **ರಾಜೀವ್ ಗಾಂಧಿ**ಯವರು ತಮ್ಮ 40ನೇ ವಯಸ್ಸಿನಲ್ಲೇ ಪ್ರಧಾನಮಂತ್ರಿ ಹುದ್ದೆಗೇರಿದರು. ಭಾರತದ ಮಟ್ಟಿಗೆ ಇದೊಂದು ವಿರಳಾತಿವಿರಳವೆನ್ನಬಹುದಾದ ಉದಾಹರಣೆಯಾಗಿದೆ. ಏಕೆಂದರೆ ಅದು ವಂಶಪಾರಂಪರ್ಯ ಆಡಳಿತದ ಕೊಂಡಿಯಾಗಿತ್ತು. ರಾಜೀವ್ ಗಾಂಧಿ, ಇಂದಿರಾಗಾಂಧಿ ವಂಶಸ್ಥರಾದುದರಿಂದ ಇದು ಸಾಧ್ಯವಾಯಿತು. ಅಮೇರಿಕಾದಲ್ಲಿ **ಬರಾಕ್ ಒಬಾಮ** ಅವರು ತಮ್ಮ 47ನೇ ವಯಸ್ಸಿನಲ್ಲಿ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು. ಆದರೆ **ಬಿಲ್ ಕ್ಲಿಂಟನ್**‌ರವರು ತಮ್ಮ 46ನೇ ವಯಸ್ಸಿಗೇ ಅಮೇರಿಕದ ಅಧ್ಯಕ್ಷರಾಗಿ ಚುನಾಯಿತಗೊಂಡರು. ಮತ್ತು ಬ್ರಿಟನ್ನಿನ ಅತ್ಯಂತ ಕಡಿಮೆ ವಯಸ್ಸಿನ ಪ್ರಧಾನಿ ಎಂಬ **ರಿಷಿ ಸುನಕ್**‌ರವರ ಹೆಗ್ಗಳಿಕೆಯನ್ನು ಪ್ರಶ್ನಿಸುವವರೂ ಇದ್ದಾರೆ. ಬ್ರಿಟನ್ನಿನ ರಾಜಕೀಯ ಇತಿಹಾಸದ ಪ್ರಕಾರ, **ವಿಲಿಯಮ್ ಪಿಟಿ** ಎಂಬುವವರು ಡಿಸೆಂಬರ್ 19, 1783ರಲ್ಲಿ 24ನೇ ವಯಸ್ಸಿಗೆ ಬ್ರಿಟನ್ ಪ್ರಧಾನ ಮಂತ್ರಿಯಾಗುವ ಮೂಲಕ ಬ್ರಿಟನ್ನಿನ ಅತ್ಯಂತ ಕಡಿಮೆ ವಯಸ್ಸಿನ (ಕಿರಿಯ) ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಆದರೆ, ಆಧುನಿಕ ಯುಗದಲ್ಲಿ, ಆ ಕೀರ್ತಿ **ರಿಷಿ ಸುನಕ್**‌ರವರಿಗೆ ಸಲ್ಲುತ್ತದೆ.

ಅದು ಒಂದು ಕಡೆ ಇರಲಿ. ನಾನು ನಮ್ಮ ಚುನಾಯಿತ ಪ್ರತಿನಿಧಿಗಳು ಯುವಕರಾಗಿ, ಶಕ್ತಿಶಾಲಿಯಾಗಿ ಇರಬೇಕೆಂದು ಅಪೇಕ್ಷಿಸುತ್ತೇನೆ. ಏಕೆಂದರೆ, ಒಬ್ಬ ಜನಪ್ರತಿನಿಧಿ ಅಥವಾ ದೇಶದ ನಾಯಕ ಯುವಕನಾಗಿದ್ದರೆ ಆ ನಾಯಕ ತುಂಬಾ ಹುರುಪಿನಿಂದ, ಹೊಸ ಆಲೋಚನೆಗಳಿಂದ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಾನೆ. ಆದರೆ ವಯಸ್ಸಾದವರಿಂದ ಇದು ಸಾಧ್ಯವೇ ಇಲ್ಲ. ಅವರು ಬರೀ ಆರಾಮ ಕುರ್ಚಿಯಲ್ಲಿ ಕೂತು ಅಧಿಕಾರ ಚಲಾಯಿಸುವುದು, ವೇದಿಕೆಯ ಮೇಲೆ ವಿರಾಜಮಾನರಾಗಿ ಕೂತು ಬೊಗಳೆ ಹೊಡೆಯುವುದು ಅಷ್ಟೆ. ಕಳೆದ 45 ವರ್ಷಗಳಿಂದಲೂ ನನ್ನ ಲೋಕಸಭಾ ಕ್ಷೇತ್ರದಲ್ಲಿ (ಈಗ ಕೊಡಗು–ಮೈಸೂರು ಕ್ಷೇತ್ರ) ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಚುನಾಯಿತ ಪ್ರತಿನಿಧಿಗಳನ್ನು ನೋಡಿದ್ದೇನೆ.

ಆದರೆ, ಪ್ರಸ್ತುತ ಈ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿರುವ **ಪ್ರತಾಪ ಸಿಂಹ** ತಮ್ಮ 38ನೇ ವಯಸ್ಸಿನಲ್ಲೇ 2014ರ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಲೋಕಸಭೆಗೆ ಆಯ್ಕೆಗೊಂಡರು. ಎರಡನೇ ಬಾರಿಗೆ ತಮ್ಮ 43ನೇ ವಯಸ್ಸಿನಲ್ಲಿ (2019ರ ಚುನಾವಣೆಯಲ್ಲಿ) ಆಯ್ಕೆಗೊಂಡರು. ಈ ಅವಧಿಯಲ್ಲಿ ನಾನು ಅವರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆದಂತಹ ಗಮನಾರ್ಹ ಸಾಧನೆಗಳನ್ನು ನೋಡುತ್ತಿದ್ದೇನೆ. ಅವರು ಮಾಡಿದಂತಹ ಕೆಲಸಗಳ ಪಟ್ಟಿ ಅತ್ಯಂತ ದೊಡ್ಡದಿದೆ. ಅವರು ಮಾಡಿದ ಕೆಲಸಗಳನ್ನು ಮಾಡಲು ಈ ಮೊದಲಿನವರಿಂದ ಏಕೆ ಸಾಧ್ಯವಾಗಲಿಲ್ಲ? ಪ್ರಾಯಶಃ ಒಂದು ಕಾರಣವಾಗಿರಬಹುದು. ಕ್ಷೇತ್ರದ ಇತಿಹಾಸ ಜ್ಞಾನ. ಸ್ವಾಭಿಮಾನ, ದಿಲ್ಲಿಯ ನಾಯಕರನ್ನು ಭೇಟಿ ಮಾಡಿ ತನ್ನ ಕ್ಷೇತ್ರದ ಕೆಲಸ ಮಾಡುವ ಕಾಳಜಿ.... ಪ್ರತಾಪ್ ಸಿಂಹರಿಗೆ ಈ ಎಲ್ಲಾ ಗುಣಗಳಿದ್ದವು.

ಆದರೆ, ಮಂಡಕಳ್ಳಿಯಲ್ಲಿರುವ ಮೈಸೂರು ವಿಮಾನ ನಿಲ್ದಾಣಕ್ಕೆ ವಿಮಾನಗಳನ್ನು ತಂದದ್ದಕ್ಕಾಗಿ ನಾನು ಅವರನ್ನು ಅವಶ್ಯವಾಗಿ ಅಭಿನಂದಿಸಲೇಬೇಕಾಗಿದೆ. ಆ ಹಿಂದಿನ ಎಲ್ಲಾ ವರ್ಷಗಳಲ್ಲಿ ಅದೊಂದು ಹೆಸರಿಗೆ ಮಾತ್ರ ಸಾಧಾರಣ ಒಂದು ವಿಮಾನ ನಿಲ್ದಾಣವಾಗಿತ್ತು. ಪ್ರತಾಪ ಸಿಂಹ ಅವರೊಬ್ಬರೇ ಮೈಸೂರಿನಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ದೆಹಲಿಯಲ್ಲಿ ಅತ್ಯಂತ ಆಸ್ಥೆಯಿಂದ ಭೇಟಿಯಾಗಿ ಆಗ್ರಹಪೂರ್ವಕವಾಗಿ ಮನವಿ ಸಲ್ಲಿಸಿ, ಸದರಿ ವಿಮಾನ ನಿಲ್ದಾಣಕ್ಕೆ ಪುನರ್‌ಜೀವ ನೀಡಿದರು.

ಅದರ ಬಗ್ಗೆ ನಾನು ಪರ್ಯಾಲೋಚಿಸುತ್ತೇನೆ. ಏಕೆಂದರೆ, ಮೈಸೂರಿನಿಂದ ಗೋವೆಗೆ ಈಗ ವಿಮಾನ ಸಂಪರ್ಕವಿದೆ. ನನಗೆ, ಈ ವರ್ಷದ ದೀಪಾವಳಿ ಹಬ್ಬದ ಸವಿಯನ್ನು ನನ್ನ ಕುಟುಂಬ, ಅದರಲ್ಲೂ ವಿಶೇಷವಾಗಿ ನನ್ನ ಮೊಮ್ಮಕ್ಕಳ ಜೊತೆ ಕಳೆಯಲು ಈ ವಾಯು ಮಾರ್ಗವಿಲ್ಲದೇ ಹೋಗಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಎಷ್ಟಾದರೂ ಮಕ್ಕಳು ಸೂರ್ಯ, ಸಮುದ್ರ ಮತ್ತು ಮರಳನ್ನು (Sun, Sea and Sand) ಇಷ್ಟಪಡುತ್ತವೆ. ಈ ಕಾರಣಕ್ಕಾಗಿಯೇ ಪ್ರಪಂಚದ ಪ್ರವಾಸಿಗರು ಗೋವಾವನ್ನು ಇಷ್ಟಪಡುತ್ತಾರೆ. ಗೋವೆಯು ಒಂದು ಪ್ರವಾಸಿ ತಾಣವಾಗಿ ವಿಶ್ವಾದ್ಯಂತ ಹೆಸರುವಾಸಿಯಾಗಿದೆ.

ಸಂಸ್ಕೃತಿ, ಸಂಪ್ರದಾಯ, ಸಾಹಿತ್ಯ, ಆಹಾರ ಹಾಗೂ ಹಬ್ಬಗಳ ಆಚರಣೆ ವಿಷಯದಲ್ಲಿ ಕೊಲ್ಕತ್ತಾವನ್ನು "ಸಂತೋಷದ ನಗರಿ (ಸಿಟಿ ಆಫ್ ಜಾಯ್) ಎಂದು ಹಿಂದೊಮ್ಮೆ ಕರೆಯಲಾಗುತ್ತಿತ್ತು. ಏಕೆಂದರೆ ಮೇಲ್ಕಂಡ ವಿಷಯಗಳಲ್ಲಿ ಜನರಿಗೆ ಅನಿರ್ಬಂಧಿತ ಸ್ವಾತಂತ್ರ್ಯ ಇತ್ತು. ಕೊಳಚೆ ಪ್ರದೇಶಗಳು, ಕಲ್ಮಶಗಳು, ಬಡತನ ಮುಂತಾದವು ತುಂಬಿ ತುಳುಕುತ್ತಿದ್ದರೂ ಸಹ ಈ ಮಹಾನಗರ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿತ್ತು. ಇದೇ ರೀತಿಯ ಸಾಮ್ಯತೆಯನ್ನು ಗೋವಾಗೂ ನೀಡಬಹುದು. ಗೋವೆಯು ಒಂದು ನಗರವಲ್ಲವಾದರೂ ಸಹ ಜನರಿಂದ ತುಂಬಿದ ಕರಾವಳಿ ಪ್ರದೇಶವಾಗಿದೆ. ಇದು ನಮ್ಮ ದೇಶದ ನೈರುತ್ಯ ಭಾಗದ ಒಂದು ಪುಟ್ಟ ರಾಜ್ಯವಾಗಿದ್ದು ಇಲ್ಲಿ ಸ್ಥಳೀಯರಿಗೆ ಹಾಗೂ ಪ್ರವಾಸಿಗರಿಗೆ ಬೇಕಾದ ಹಲವಾರು ಸಮುದ್ರ ತೀರಗಳನ್ನು (beaches) ಕಾಣಬಹುದು.

ಪೋರ್ಚುಗೀಸರು, ಗೋವೆಯನ್ನು ಸುಮಾರು 456 ವರ್ಷಗಳ ಕಾಲ ಆಳಿದರು (1505–1961). ಇದು ಬ್ರಿಟಿಷರು ಭಾರತವನ್ನು ಆಳಿದ ಅವಧಿಗಿಂತಲೂ ಹಾಗೂ ಫ್ರೆಂಚರು ಪುದುಚೇರಿಯನ್ನು ಆಳಿದ ಅವಧಿಗಿಂತಲೂ ಹೆಚ್ಚಾಗಿದೆ. ಆದ್ದರಿಂದ ಗೋವಾ ಉದ್ದಕ್ಕೂ ಪೋರ್ಚುಗೀಸರ ಮನೆಗಳ, ಚರ್ಚುಗಳ ಮತ್ತು ಸಮಾಧಿಗಳ ಕುರುಹುಗಳನ್ನು ಅಲ್ಲಲ್ಲಿ ನೋಡಬಹುದಾಗಿದೆ. ಕೆಲವು ಹಿರಿಯರು ಈಗಲೂ ಸಹ ಪೋರ್ಚುಗೀಸರ ಆಡಳಿತ ವ್ಯವಸ್ಥೆಯನ್ನು ನೆನಪಿಸಿಕೊಳ್ಳುತ್ತಾರೆ. ಅದು ತುಂಬಾ ಕ್ರೂರ, ಕನಿಕರವಿಲ್ಲದ ಆಡಳಿತ ವ್ಯವಸ್ಥೆಯಾಗಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ.

ಗೋವೆಯ ವಿಮೋಚನೆಗಾಗಿ ನಮಗೆ ಆಂಗ್ಲರಿಂದ ಸ್ವಾತಂತ್ರ್ಯ ಲಭಿಸಿದ ನಂತರವೂ 14 ವರ್ಷಗಳಷ್ಟು ದೀರ್ಘ ಕಾಲ ಏತಕ್ಕಾಗಿ ಕಾಯಬೇಕಾಯಿತು ಎಂಬುದು ಸೋಜಿಗದ ಸಂಗತಿ. ಅದೇ ಕಾಲಕ್ಕೆ ಗೋವಾದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಹುತಾತ್ಮರಾದರು. ಪಂಚತಾರಾ ಸಂಸ್ಕೃತಿಯ ಪ್ರವಾಸಿಗರಲ್ಲದವರು, ಆರ್ಥಿಕವಾಗಿ ತುಂಬಾ ಸ್ಥಿತಿವಂತರಲ್ಲದವರು ತಮ್ಮ ಆರ್ಥಿಕ ಬಲಕ್ಕೆ ತಕ್ಕಂತಹ ವಸತಿಯನ್ನು ಗೋವೆಯಲ್ಲಿ ಆರಿಸಿಕೊಳ್ಳಬಹುದು. ಕರಾವಳಿ ರಾಜ್ಯವಾಗಿರುವುದರಿಂದ ತಾಪಮಾನ ಹೆಚ್ಚು. ವೈವಿಧ್ಯಮಯ ಮೀನಿನ ಆಹಾರ ಪದಾರ್ಥಗಳು, ಸೀಗಡಿಗಳಿಂದ ಹಿಡಿದು ಲೋಬ್‌ಸ್ಟರ್ ಮೀನುಗಳವರೆಗೆ, ಬಾಯಲ್ಲಿ ನೀರೂರಿಸುವ ಆಹಾರ ಪದಾರ್ಥಗಳು ಲಭ್ಯ. ಇಲ್ಲಿ ಹಳೆಯ ಕಾಲದ ಮನೆಗಳು ಮತ್ತು ದೊಡ್ಡ ಕುಟುಂಬಗಳಿಗಾಗಿ ಹಾಗೂ ಎರಡು ಕುಟುಂಬಗಳಿಗೆ ಬೇಕಾಗುವಷ್ಟು ವಿಶಾಲವಾದ ಅಡುಗೆ ಮನೆಗಳನ್ನು ಹಾಗೂ ಸೇವಕರನ್ನು ಹೊಂದಿರುವ ಸುಸಜ್ಜಿತವಾದ ಬಂಗಲೆಗಳು ಲಭ್ಯವಿವೆ. ನಿಜವಾಗಿಯೂ ಇದು ಮನೆಯಿಂದ ದೂರವಿರುವ ಮತ್ತೊಂದು ಮನೆ ಎನ್ನಬಹುದು.

ಇಲ್ಲಿ ಹಲವಾರು ಸಮುದ್ರ ತೀರಗಳು(ಬೀಚುಗಳು) ಇವೆ. ಪ್ರವಾಸಿಗರ ಒತ್ತಡ ಹೆಚ್ಚಾಗಿದ್ದರೂ ಇವುಗಳನ್ನು ಸ್ವಚ್ಛ ಮತ್ತು ಶುದ್ಧವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಬೀಚುಗಳಿಗೆ ದಾಸರಾಗಿರುವಂತಹ ಗಂಡಸರು, ಹೆಂಗಸರು, ಮಕ್ಕಳು ಕೇವಲ ಮಾನ ಮುಚ್ಚುವಷ್ಟು ಬೀಚ್ ಉಡುಪಿನಲ್ಲಿ ಓಡಾಡುತ್ತಿರುತ್ತಾರೆ. ನನಗಂತೂ ಅವರು ಭೂ ಹಾಗೂ ಜಲಚರ ಪ್ರಾಣಿಗಳಂತೆ ಗೋಚರಿಸುತ್ತಿದ್ದರು. ಇವರನ್ನು ರೆಸ್ಟೋರೆಂಟ್ ಚೇರಿನಲ್ಲಿ ಕುಳಿತು ಬಿಯರನ್ನು ಸೇವಿಸುತ್ತಾ, ಮೀನಿನ ಖಾದ್ಯವನ್ನು ಸವಿಯುತ್ತಾ ನಾನು ಗಮನಿಸುತ್ತಿದ್ದೆ. ಸೂರ್ಯಾಸ್ತಮವನ್ನು ಬೀಚಿನಿಂದ, ಸಮುದ್ರದ ತುತ್ತ ತುದಿಯಿಂದ ನೋಡುವುದು ಒಂದು ದೈವಿಕವಾದ ಅನುಭವ ಎನ್ನಬಹುದು. ದೂರದ ದಿಗಂತದಲ್ಲಿ ಸೂರ್ಯನು ಸಮುದ್ರದಲ್ಲಿ ಮುಳುಗುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುವನೇ? (ಸಮುದ್ರದ ತಟದಲ್ಲಿರುವ ಜನರಿಂದ ರಕ್ಷಿಸಲು ಸಾಧ್ಯವಾಗದಿರುವ ರೀತಿಯಲ್ಲಿ). ರಕ್ತವು ನೀರಿಗಿಂತ ಗಟ್ಟಿ ಎಂಬುದು ಒಂದು ಮನು ಕುಲದಷ್ಟೇ ಪ್ರಾಚೀನವಾದ ಗಾದೆ ಮಾತು. (Blood is thicker than water).

ಆದ್ದರಿಂದಲೇ, ಭಾರತೀಯರಾದ ನಾವು ಭಾರತೀಯ ಮೂಲದ **ರಿಷಿ ಸುನಕ್** ಅವರು ಬ್ರಿಟನ್ ಪ್ರಧಾನ ಮಂತ್ರಿಯಾಗಿ ಆಯ್ಕೆಗೊಂಡಾಗ ಉದ್ವೇಗದೊಂದಿಗೆ ರೋಮಾಂಚನಗೊಂಡೆವು. ಅದೇ ತರಹ, ನಮ್ಮ ಮೈಸೂರಿನ ಹೋಟೆಲ್ ಸಿದ್ಧಾರ್ಥ ಸಮೂಹದ "ಆಲಿವ್ ಗಾರ್ಡನ್" ಮತ್ತು "ವಿಂಡ್ ಫ್ಲವರ್ ರೆಸಾರ್ಟ್"ಗಳವರ ಗೋವಾದಲ್ಲಿರುವ ರೆಸಾರ್ಟ್ ನೋಡಿ ಅತ್ಯಂತ ಸಂತೋಷಗೊಂಡೆ. ಇವುಗಳ ಮಾಲೀಕರಾದ **ಪಿ.ವಿ.ಗಿರಿ** ಮತ್ತು ಅವರ ಮಗ **ತರುಣ್ ಗಿರಿ** ದಕ್ಷಿಣ ಗೋವಾದಲ್ಲಿ ತಮ್ಮ ಇರುವಿಕೆಯನ್ನು ವೈಭವೋಪೇತ ಪಂಚತಾರಾ ರೆಸಾರ್ಟ್ "ವಾರ್ಸ ಲೀ ಪಾವ್ಸ್" ಎಂಬ ರೆಸಾರ್ಟ್ ಮೂಲಕ ಸಾಬೀತುಪಡಿಸಿದ್ದಾರೆ.

ಗೋವಾದಲ್ಲಿ ಪ್ರವಾಸಿಗರು ಮೆಚ್ಚುವ 18 ಉತ್ತಮವಾದ ಸಮುದ್ರ ತೀರಗಳು ಇವೆ ಎಂದು ನನಗೆ ತಿಳಿದು ಬಂತು.

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

(ಮುಂದುವರೆಯುವುದು)

voice
@starofmysore.com

ಟಿಎಂಸಿ ಸಚಿವ ಗಿರಿ ಹೇಳಿಕೆ ಖಂಡಿಸಿ, ರಾಷ್ಟ್ರಪತಿಗಳ ಕ್ಷಮೆಯಾಚಿಸಿದ ಮಮತಾ

ಕೋಲ್ಕತಾ, ನ.14–ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತು ಪಶ್ಚಿಮ ಬಂಗಾಳ ಸಚಿವ ಅಖಿಲ್ ಗಿರಿ ಅವರು ನೀಡಿದ್ದ ವಿವಾದಾತ್ಮಕ ಹೇಳಿಕೆಯನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಖಂಡಿಸಿದ್ದು, ಟಿಎಂಸಿ ಪರವಾಗಿ ಕ್ಷಮೆ ಯಾಚಿಸಿದ್ದಾರೆ. ರಾಷ್ಟ್ರಪತಿಗಳ ಬಗ್ಗೆ ನನಗೆ ಅಪಾರ ಗೌರವವಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದು, ಭವಿಷ್ಯದಲ್ಲಿ ಅವಹೇಳನಕಾರಿ ಹೇಳಿಕೆಗಳನ್ನು ನೀಡದಂತೆ ತಮ್ಮ ಪಕ್ಷ ಗಿರಿ ಅವರಿಗೆ ಎಚ್ಚರಿಕೆ ನೀಡಿದೆ ಎಂದು ತಿಳಿಸಿದ್ದಾರೆ. "ರಾಷ್ಟ್ರಪತಿ ದ್ರೌಪದಿ ಮುರ್ಮು ಕುರಿತ ಅಖಿಲ್ ಗಿರಿ ಅವರ ಹೇಳಿಕೆಯನ್ನು ನಾನು ಖಂಡಿಸುತ್ತೇನೆ. ಅಖಿಲ್ ಮಾಡಿರುವುದು ತಪ್ಪು. ಅಂತಹ ಹೇಳಿಕೆಯನ್ನು ನಾವು ಬೆಂಬಲಿಸುವುದಿಲ್ಲ. ಅವರು ನನ್ನ ಪಕ್ಷದ ಸಹೋದ್ಯೋಗಿಯಾಗಿರುವುದರಿಂದ ನಾನು ನನ್ನ ಪಕ್ಷದ ಪರವಾಗಿ ಕ್ಷಮೆ ಯಾಚಿಸುತ್ತೇನೆ. ಪಕ್ಷವು ಈಗಾಗಲೇ ಅಖಿಲ್ ಗಿರಿಗೆ ಎಚ್ಚರಿಕೆ ನೀಡಿದೆ ಎಂದು ಬ್ಯಾನರ್ಜಿ ರಾಜ್ಯ ಸಚಿವಾಲಯದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ಈ ಹಿಂದೆ ಗಿರಿ ಅವರನ್ನು ಕಾಗೆ ಎಂದು ಕರೆಯುತ್ತಿದ್ದುದನ್ನು ನೆನಪಿಸಿಕೊಂಡ ಸಿಎಂ ಮಮತಾ, ನೇರವಾಗಿ ಯಾರ ಹೆಸರನ್ನು ಪ್ರಸ್ತಾಪಿಸಲಿಲ್ಲ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯಶಸ್ವಿನಿ ಆರೋಗ್ಯ ಸೇವೆ ಪಡೆದುಕೊಳ್ಳುವಂತೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ ಸಲಹೆ

ಪಟ್ಟಣದವರು 1000 ರೂ.; ಗ್ರಾಮೀಣ ಪ್ರದೇಶದವರು 500 ರೂ. ಪಾವತಿಸಿ ಕಾರ್ಡ್ ಪಡೆದುಕೊಳ್ಳಲು ಸೂಚನೆ

ಮೈಸೂರು,ನ.14(ಎಂಟಿವೈ)–ರಾಜ್ಯದಲ್ಲಿ ಮತ್ತೆ ಯಶಸ್ವಿನಿ ಯೋಜನೆ ಜಾರಿಗೆ ಬಂದಿದ್ದು, ಎಲ್ಲಾ ಸಹಕಾರಿಗಳು ತಪ್ಪದೇ ಯಶಸ್ವಿನಿ ಕಾರ್ಡ್ ಮಾಡಿಸಿಕೊಂಡು, ಆರೋಗ್ಯ ಸೇವೆ ಪಡೆದುಕೊಳ್ಳುವಂತೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಜಿಲ್ಲಾ ಸಹಕಾರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಸೋಮವಾರ ಆಯೋಜಿಸಿದ್ದ '69ನೇ ಅಖಿಲ ಭಾರತ ಸಹಕಾರ ಸಪ್ತಾಹ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕೆಲ ಕಾರಣದಿಂದ ಮೂರು ವರ್ಷ ಸ್ಥಗಿತಗೊಂಡಿದ್ದ ಯಶಸ್ವಿನಿ ಯೋಜನೆಯನ್ನು ಇದೀಗ ಮತ್ತೆ ಜಾರಿಗೆ ತರಲಾಗಿದೆ. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ರಾಜ್ಯದಾದ್ಯಂತ ಸಹಕಾರಿಗಳು ಸಲ್ಲಿಸಿದ ಮನವಿ ಮೇರೆಗೆ ಯಶಸ್ವಿನಿ ಯೋಜನೆಯನ್ನು ಪುನರಾರಂಭಿಸಲು ಶ್ರಮಿಸಿದ್ದಾರೆ. ಈ ಯೋಜನೆ ಪ್ರತಿಯೊಬ್ಬ ಸಹಕಾರಿ, ರೈತರಿಗೆ ಸಹಕಾರಿಯಾಗಿದೆ. ವಿವಿಧ ಸಹಕಾರಿ ಸಂಸ್ಥೆಗಳ ಸದಸ್ಯರಾಗಿರುವವರಿಗೆ ಆರೋಗ್ಯ ಸೇವೆ ಒದಗಿಸಲು ನೆರವಾಗುತ್ತದೆ. ನಗರದ ಸಹಕಾರಿಗಳು 1000 ರೂ., ಗ್ರಾಮೀಣದ ಸಹಕಾರಿಗಳು 500 ರೂ. ಪಾವತಿಸಬೇಕಾಗಿದೆ. ಈ ಬಾರಿ ಒಂದು ಕುಟುಂಬದ ನಾಲ್ಕು ಜನರಿಗೆ ಆರೋಗ್ಯ ಸೇವೆ ಒದಗಿಸಲು ಯಶಸ್ವಿನಿ ಯೋಜನೆಯಲ್ಲಿ ಸೇರಿಸಲಾಗಿದೆ. ಯಶಸ್ವಿನಿ ಯೋಜನೆ ಜಾರಿ ಸರ್ಕಾರಕ್ಕೆ ಲಾಭವಾಗುವುದಿಲ್ಲ. ಇದರಿಂದ ಸಹಕಾರಿಗಳಿಗೆ ಉಪಯೋಗವಾಗುತ್ತದೆ. ಆದ್ದರಿಂದ ಎಲ್ಲಾ ಸಹಕಾರಿಗಳು ನಿರ್ಲಕ್ಷಿಸದೇ ಯಶಸ್ವಿನಿ ಕಾರ್ಡ್ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಹಕಾರಿ ಚಳುವಳಿಗಳ ಬಗ್ಗೆ ಹೆಚ್ಚಿನ ಜನರಿಗೆ ಮನವರಿಕೆ ಮಾಡಿಕೊಡುವುದರೊಂದಿಗೆ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಸದಸ್ಯರ ನೋಂದಣಿ ಆಗಬೇಕು. ಆ ಮೂಲಕ ಸೌಲಭ್ಯಗಳು ಇನ್ನಷ್ಟು ಜನರಿಗೆ ದೊರೆಯುವಂತಾಗಬೇಕು. ಪ್ರಸ್ತುತ ವರ್ಷದ ರಾಜ್ಯಮಟ್ಟದ ಸಹಕಾರಿ ಸಪ್ತಾಹ ಗುಲ್ಬರ್ಗಾದಲ್ಲಿ ನಡೆಯುತ್ತಿದೆ. ನ.20ರಂದು ಮೈಸೂರಿನಲ್ಲೇ ಸಪ್ತಾಹದ ಸಮಾರೋಪ ಸಮಾರಂಭ ನಡೆಸಲು ಉದ್ದೇಶಿಸಲಾಗಿದೆ. ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸಮಾರೋಪ ಕಾರ್ಯಕ್ರಮ ಜರುಗಲಿದ್ದು, ಎಲ್ಲಾ ಸಹಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಕಳೆದ ವರ್ಷದ ಅಭಿವೃದ್ಧಿ ಹಾಗೂ ವೈಫಲ್ಯತೆ ಏನಾಗಿದೆ ಎಂದು ಚರ್ಚೆ ಮಾಡಿ, ಮುಂದೇನು ಮಾಡಬೇಕು ಎಂದು ಅವಲೋಕಿಸಲು ಸಪ್ತಾಹ ಆಚರಿಸಲಾಗುತ್ತದೆ. ಪ್ರಗತಿಗೆ ಇನ್ನಷ್ಟು ವೇಗ ನೀಡಲು ಏನು ಮಾಡಬೇಕು. ವೈಫಲ್ಯಗಳಿಗೆ ಕಾರಣಗಳೇನು. ಇದಕ್ಕೆ ಪರಿಹಾರವೇನು ಎಂಬುದರ ಬಗ್ಗೆ ರಾಜ್ಯದ ಉದ್ದಗಲಕ್ಕೂ ಚರ್ಚೆ ಮಾಡಲು ಸಪ್ತಾಹ ನಡೆಸಲಾಗುತ್ತಿದೆ. ಇದರೊಂದಿಗೆ ಉತ್ತಮ ಸಹಕಾರಿಗಳು ಹಾಗೂ ಸಂಸ್ಥೆಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದರು. ಸ್ಪರ್ಧಾತ್ಮಕ ಯುಗದಲ್ಲಿ ಸಹಕಾರಿ ಕ್ಷೇತ್ರದಲ್ಲಿ ವ್ಯಾಪಾರೀಕರಣವನ್ನು ಸರಣೀಕರಣಗೊಳಿಸುವ ಬಗ್ಗೆ ಚಿಂತಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರ ಎಲ್ಲಾ ಮಜಲುಗಳನ್ನು ಒಳಗೊಂಡು ವಿಸ್ತಾರಗೊಳ್ಳುತ್ತಿದೆ. ಅದಕ್ಕೆ ತಕ್ಕಂತೆ ವ್ಯಾಪಾರವನ್ನು ವೃದ್ಧಿಗೊಳಿಸುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹಾಲಿನ(ಕೆಎಂಎಫ್) ಕ್ಷೇತ್ರ ಹಲವು ಹೆಜ್ಜೆಗಳನ್ನು ಯಶಸ್ವಿಯಾಗಿ ಇಡುತ್ತಿದೆ. ಕೇವಲ ಹಾಲು ಮಾರಾಟಕ್ಕೆ ಮಾತ್ರ ಚಟುವಟಿಕೆ ಸೀಮಿತಗೊಳ್ಳದೆ ಇನ್ನಿತರ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಉತ್ಪನ್ನಗಳ ಮಾರಾಟ, ತಯಾರಿ, ಶೇಖರಣೆಗೆ ಸಂಬಂಧಿಸಿದಂತೆ ಸಂಶೋಧನೆಗಳು, ಹೊಸ ಹೊಸ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದೆ. ಮಲ್ಟಿನ್ಯಾಷನಲ್ ಕಂಪನಿಗಳಂತೆ ನಂದಿನಿ ಔಟ್‌ಲೆಟ್ ನಿರ್ಮಿಸಲಾಗಿದೆ. ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡಬೇಕಾದರೆ ಗುಣಾತ್ಮಕತೆ ಬಗ್ಗೆ ಎಚ್ಚರಿಕೆಯ ಹೆಜ್ಜೆ ಇಡಬೇಕು. ಗುಣಾತ್ಮಕತೆಯಲ್ಲಿ ರಾಜೀ ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು. ನಂದಿನಿ ಉತ್ಪನ್ನದ ಗುಣಮಟ್ಟದಲ್ಲಿ ಯಾವ ರಾಜಿ ಇಲ್ಲ. ಹಾಗಾಗಿ ಜನಮನ್ನಣೆಗೆ ಕಾರಣವಾಗಿದೆ. ಸರ್ಕಾರ ಬದಲಾದ ಹಿನ್ನೆಲೆಯಲ್ಲಿ ತಿರುಪತಿಯಲ್ಲಿ ಲಾಡು ತಯಾರಿಸಲು ಈ ಹಿಂದೆ ಬಳಸುತ್ತಿದ್ದ ನಂದಿನಿ ತುಪ್ಪವನ್ನು ನಿಲ್ಲಿಸಿದ್ದರು. ಆದರೆ, ಬೇರೆ ಕಂಪನಿಯ ತುಪ್ಪ ಗುಣಮಟ್ಟವಿಲ್ಲದ ಕಾರಣ ಮತ್ತೆ ನಂದಿನಿ ತುಪ್ಪವನ್ನೇ ಖರೀದಿಸಲಾರಂಭಿಸಿದ್ದಾರೆ. ಇದು ನಂದಿನಿ ಉತ್ಪನ್ನಗಳ ಮಹತ್ವ ಹಾಗೂ ತಾಜಾತನವನ್ನು ತೋರ್ಪಡಿಸುತ್ತದೆ ಎಂದು ತಿಳಿಸಿದರು.

ಯಶಸ್ವಿನಿ ಯೋಜನೆ ಪಡೆಯಿರಿ: ರಾಜ್ಯದಲ್ಲಿ ಮತ್ತೆ ಯಶಸ್ವಿನಿ ಯೋಜನೆ ಜಾರಿಗೊಳಿಸಿರುವುದು ಶ್ಲಾಘನೀಯ. ಇದು ರೈತರು, ಸಹಕಾರಿಗಳು, ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆ ಒದಗಿಸಲು ಸಹಕಾರಿಯಾಗುತ್ತದೆ. 2004ರಲ್ಲಿ ಸಹಕಾರ ಗ್ರಾಮೀಣ ಆರೋಗ್ಯ ಯೋಜನೆ ಹೆಸರಲ್ಲಿ ಜಾರಿಗೆ ಬಂದ ಯಶಸ್ವಿನಿ ಯೋಜನೆ ಆರಂಭದಲ್ಲಿ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿತ್ತು. ಡಾ. ಹೆಚ್.ಎಸ್.ಮಹದೇವಪ್ರಸಾದ್ ಅವರು ಸಹಕಾರ ಸಚಿವರಾಗಿದ್ದಾಗ ನಗರ ಪ್ರದೇಶದಲ್ಲಿರುವ ವಿವಿಧ ಸಹಕಾರ ಸಂಸ್ಥೆಗಳ ಸಹಕಾರಿಗಳಿಗೂ ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ವಿಸ್ತರಣೆ ಮಾಡಿದರು ಎಂದು ಸ್ಮರಿಸಿದರು. ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ವ್ಯವಸ್ಥೆಯಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯಲು ಮೊದಲು ಸರ್ಕಾರಿ ಆಸ್ಪತ್ರೆಗೆ ಹೋಗಿ, ಆ ನಂತರ ಅಲ್ಲಿನ ವೈದ್ಯರು ಸೂಚಿಸಿದ ಖಾಸಗಿ ಆಸ್ಪತ್ರೆಗಳಿಗೆ ರೆಫರ್(ಶಿಫಾರಸ್ಸು) ಮಾಡುವ ವ್ಯವಸ್ಥೆ ಇತ್ತು. ಆದರೆ ಯಶಸ್ವಿನಿ ಯೋಜನೆಯಲ್ಲಿ ಒಡಂಬಡಿಕೆ ಮಾಡಿಕೊಂಡು ನೋಂದಣಿಯಾಗಿರುವ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ದಾಖಲಾಗಬಹುದಾಗಿದೆ. ಖಾಸಗಿ ವಿಮೆಯಲ್ಲಿ ವಯಸ್ಸಿನ ಮಿತಿ ಇರುವಂತೆ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ವಯೋಮಿತಿ ಇಲ್ಲ. ಇದರಲ್ಲಿ 98 ವರ್ಷದವರೆಗೂ ಶಸ್ತ್ರಚಿಕಿತ್ಸೆಗೆ ಒಳಗಾಗಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರಿ ಒಕ್ಕೂಟದ ನಿರ್ದೇಶಕರಾದ ವೈಭೈರಪ್ಪ, ಹೆಚ್.ಎಸ್.ಪ್ರಶಾಂತ್ ತಾತಾಚಾರ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಚಿಕ್ಕಹಳ್ಳಿ ಕುಮಾರ್, ಮೈಮುಲ್ ನಿರ್ದೇಶಕರಾದ ಲೀಲಾ ನಾಗರಾಜ್, ಎಸ್.ಸಿ.ಅಶೋಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ಐಎಎಸ್ ಅಧಿಕಾರಿ ಗೌರವ್ ದ್ವಿವೇದಿ ಪ್ರಸಾರ ಭಾರತಿ ಸಿಇಒ



ನವದೆಹಲಿ: ಹಿರಿಯ ಐಎಎಸ್ ಅಧಿಕಾರಿ ಗೌರವ್ ದ್ವಿವೇದಿ ಅವರನ್ನು ಪ್ರಸಾರ ಭಾರತೀಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ (ಸಿಇಒ) ಸೋಮವಾರ ನೇಮಕ ಮಾಡಲಾಗಿದೆ. ದ್ವಿವೇದಿ ಅವರು ಛತ್ತೀಸಗಡ ಕೇಡರ್‌ನ 1995ನೇ ಬ್ಯಾಚ್ ಅಧಿಕಾರಿ. ಇದಕ್ಕೂ ಮುನ್ನ ಇವರು ಸರ್ಕಾರದ MyGovIndia ದಲ್ಲಿ ಸಿಇಒ ಆಗಿದ್ದರು. ದ್ವಿವೇದಿ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಐದು ವರ್ಷಗಳ ಅವಧಿಗೆ ಪ್ರಸಾರ ಭಾರತೀಯ ಸಿಇಒ ಆಗಿರುತ್ತಾರೆ. ಇದಕ್ಕೂ ಮುನ್ನ ಶಶಿ ಶೇಖರ್ ವೆಂಪತಿ ಅವರು ಪ್ರಸಾರ ಭಾರತಿಯ ಸಿಇಒ ಆಗಿದ್ದರು.

ಭತ್ತ ಕಟಾವಿಗೂ ಮುನ್ನ ಖರೀದಿ ಕೇಂದ್ರ ತೆರೆಯಲು ಆಗ್ರಹ



ಮೈಸೂರು,ನ.14(ಪಿಎಂ)– ಭತ್ತ ಕಟಾವಿಗೂ ಮುನ್ನವೇ ಖರೀದಿ ಕೇಂದ್ರಗಳನ್ನು ತೆರೆಯಲು ರಾಜ್ಯ ಸರ್ಕಾರ ಕ್ರಮ ವಹಿಸಬೇಕೆಂದು ಕಬ್ಬು ಬೆಳೆಗಾರರ ಹೋರಾಟ ಹಿತರಕ್ಷಣಾ ಸಮಿತಿ ಒತ್ತಾಯಿಸಿದೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಬ್ಯಾತಹಳ್ಳಿ ಮಾದಪ್ಪ, ಭತ್ತ ಕಟಾವಿಗೂ ಮುನ್ನವೇ ಖರೀದಿ ಕೇಂದ್ರಗಳನ್ನು ತೆರೆಯದ ಕಾರಣ ಈ ಹಿಂದೆ ರೈತರಿಗೆ ಸಮಸ್ಯೆ ಆಗಿದೆ. ಹಾಗಾಗಿ ಈ ಬಾರಿ ಕಟಾವಿಗೂ ಮುನ್ನವೇ ಭತ್ತ ಖರೀದಿಗಳನ್ನು ತೆರೆಯಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾರ್ಖಾನೆಗಳು ಕಬ್ಬಿನ ತೂಕದಲ್ಲಿ ರೈತರನ್ನು ವಂಚಿಸುತ್ತಿವೆ. ಇದನ್ನು ತಪ್ಪಿಸಬೇಕು. ನಿಗದಿತ ಸಮಯಕ್ಕೆ ಕಬ್ಬು ಕಟಾವು ಮಾಡುಂತೆ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಸೂಕ್ತ ನೀಡಬೇಕು. ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳು ನೈಜ ರೈತರನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು. ನಮ್ಮ ಸಮಿತಿ ವತಿಯಿಂದ ಈವರೆಗೆ 50 ಮಂದಿ ಪ್ರಗತಿಪರ ರೈತರನ್ನು ಗುರುತಿಸಿ ಸನ್ಮಾನಿಸಲಾಗಿದೆ. ಈ ಕಾರ್ಯಕ್ರಮ ಮುಂದುರೆಯಲಿದೆ ಎಂದರು. ಸಮಿತಿ ಮುಖಂಡರಾದ ಕೆಂಡಗಣ್ಣಸ್ವಾಮಿ, ನಂಜುಂಡಸ್ವಾಮಿ, ಗುರುಸ್ವಾಮಿ ಸುದ್ದಿಗೋಷ್ಠಿಯಲ್ಲಿದ್ದರು.

ಶಾಸಕ ಪ್ರಿಯಾಂಕ್ ಖರ್ಗೆ ಬಗ್ಗೆ ಅವಹೇಳನ ಹೇಳಿಕೆ ಖಂಡಿಸಿ ಪ್ರತಿಭಟನೆ

ಮೈಸೂರು,ನ.14(ಪಿಎಂ)– ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರನ್ನು ಶೂಟ್ ಮಾಡಲು ನಾವು ರೆಡಿ ಎಂಬ ಬಿಜೆಪಿ ಮುಖಂಡ ಮಣಿಕಂಠ ರಾಥೋಡ್ ಹೇಳಿಕೆ ಖಂಡಿಸಿ ಹಾಗೂ ಗೃಹ ಸಚಿವರ ರಾಜೀನಾಮೆಗೆ ಆಗ್ರಹಿಸಿ ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಪುರಭವನದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಪ್ರಿಯಾಂಕ್ ಖರ್ಗೆ ಅವರ ಕುರಿತಂತೆ ಬಿಜೆಪಿ ಮುಖಂಡ ಮಣಿಕಂಠ ರಾಥೋಡ್ ಅವಹೇಳನಕಾರಿಯಾಗಿ ಮಾತನಾಡಿ ಕೊಲೆ ಬೆದರಿಕೆ ಹಾಕಿದ್ದು, ಕಾನೂನಿನ ಭಯವಿಲ್ಲದಂತಹ ವರ್ತನೆ ತೋರಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಬ್ಬ ಶಾಸಕರಿಗೇ ಪತ್ರಿಕಾಗೋಷ್ಠಿಯಲ್ಲಿ ಈ ರೀತಿಯಲ್ಲಿ ಬೆದರಿಕೆ ಹಾಕಿರುವುದು ಖಂಡನೀಯ. ಈ ಹೇಳಿಕೆ ಗಮನಿಸಿದರೆ ಕರ್ನಾಟಕ ಗೂಂಡಾ ರಾಜ್ಯವಾಗುತ್ತಿರುವುದು ಗೋಚರಿಸುತ್ತದೆ. ಹಾಗಾಗಿ ಕೂಡಲೇ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ, ಜಿಲ್ಲಾಧ್ಯಕ್ಷ ಬಂಡಿಪಾಳ್ಯ ವಿಜಯ ಕುಮಾರ್, ಮೈಸೂರು ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ, ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಮುಖಂಡರಾದ ಮಹೇಶ್ ಸೋಸಲೆ, ನಂಜನಗೂಡು ಪ್ರದೀಪ್, ಹರೀಶ್, ಮಂಜು, ಪ್ರಸನ್ನ, ಮಾನವ ಬಂಧುತ್ವ ವೇದಿಕೆ ಮುಖಂಡ ಮಹದೇವ್, ಡಿಎಸ್‌ಎಸ್ ಮುಖಂಡರಾದ ಕಲ್ಲಹಳ್ಳಿ ಕುಮಾರ್, ಹರದನಹಳ್ಳಿ ರಾಜೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಯಲಕ್ಷ್ಮಿಪುರಂನಲ್ಲಿ ಆಟೋ ಚಾಲಕರಿಂದ ಕನ್ನಡ ರಾಜ್ಯೋತ್ಸವ



ಮೈಸೂರು,ನ.14–ನಗರದ ಜಯಲಕ್ಷ್ಮಿಪುರಂನ ಟೆಂಪಲ್ ರಸ್ತೆಯ ಚಾಮುಂಡೇಶ್ವರಿ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜ್‌ಕುಮಾರ್ ಸ್ಮರಣೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಸಾಹಿತಿ ಸಿಪಿಕೆಯವರು ಮಾತನಾಡಿ, ಕನ್ನಡ ಭಾಷೆ ನಾಡು ನುಡಿಯ ವಿಚಾರದಲ್ಲಿ ಆಟೋ ಚಾಲಕರು ಸದಾ ಮುಂದು. ರಾಜ್ಯೋತ್ಸವವನ್ನು ಆಟೋ ಚಾಲಕರು ಹಬ್ಬದ ರೀತಿಯಲ್ಲಿ ಆಚರಿಸುತ್ತಾರೆ. ಇವರು ಕನ್ನಡಿಗರಿಗೆ ಸದಾ ಮಾದರಿಯಲ್ಲಿ ಇರುತ್ತಾರೆ. ಕನ್ನಡ ನವೆಂಬರ್ ಮಾಹೆಗೆ ಸೀಮಿತವಾಗದೆ ನಿತ್ಯೋತ್ಸವವಾಗಬೇಕೆಂದು ತಿಳಿಸಿದರು.

ಮಾಜಿ ಶಾಸಕ ವಾಸು ಮಾತನಾಡಿ, ಆಟೋ ಚಾಲಕರ ಕನ್ನಡ ಪ್ರೇಮವನ್ನು ಶ್ಲಾಘಿಸಿದರು ಹಾಗೂ ಪುನೀತ್ ರಾಜ್‌ಕುಮಾರ್ ಅವರ ಸಾಮಾಜಿಕ ಕಳಕಳಿಯನ್ನು ಇಂದು ನಾಡಿನ ಪ್ರತಿಯೊಬ್ಬ ವ್ಯಕ್ತಿಯೂ ಕೊಂಡಾಡುತ್ತಿದ್ದು ಅವರು ಭೌತಿಕವಾಗಿ ನಮನ್ನು ಅಗಲಿದ್ದರೂ ಅವರ ನಟನೆ ಹಾಗೂ ಸಾಮಾಜಿಕ ಸೇವೆಯ ಮೂಲಕ ಚಿರಸ್ಥಾಯಿಯಾಗಿದ್ದಾರೆ ಎಂದರು. ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ದಂತ ವೈದ್ಯೆ ಡಾ. ಪ್ರಗ್ನಾ, ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಡಿ.ಮೋಹನ್ ಕುಮಾರ್ ರಾಧಾಕೃಷ್ಣ, ಕೃಷ್ಣ, ಅಶ್ವಥ್, ಪ್ರತಾಪ್, ಶಿವಣ್ಣ, ಕಾಂತಾ, ಪುಂಡಲೀಕ, ಗೋವಿಂದ, ವಾಸು, ಚಿಕ್ಕಣ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಬಿ.ಕುಮಾರ್, ರಾಘವ್ ಎಂ.ಗೌಡ ಇನ್ನಿತರರಿದ್ದರು.



ಮೈಸೂರು ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬಸವಯ್ಯ ವೃತ್ತದಲ್ಲಿರುವ ಸಿದ್ದಪ್ಪಾಜಿ ದೇವಸ್ಥಾನದ 12ನೇ ವರ್ಷದ ಕುಂಬಾಭಿಷೇಕ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಎಸ್‌ಸಿ, ಎಸ್‌ಟಿ ಕಾಯಿದೆಯಲ್ಲಿ ಡಿಸಿ ವಕೀಲರ ನೇಮಿಸಬಹುದು

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ನಿಯಮಗಳು ಮೇಲ್ವರ್ಗದ ಜನರ ವಿರುದ್ಧದ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಪರಿಣಾಮಕಾರಿಯಾಗಿ ವಿಚಾರಣೆಗೆ ಒಳಪಡಿಸಲು ದಲಿತರ ಪರವಾಗಿ ಖ್ಯಾತ ಹಿರಿಯ ವಕೀಲರನ್ನು ನೇಮಿಸುವ ಅಧಿಕಾರವನ್ನು ಡಿಸಿಗಳಿಗೆ ಒದಗಿಸುತ್ತದೆ ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ.



ಚಿಕ್ಕಮಗಳೂರಿನ ಎಂ.ಸಿ.ಚೆರಿಯನ್ ಮತ್ತು ಇತರ ಮೂವರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ನ್ಯಾಯಮೂರ್ತಿ ಕೆ.ನಟರಾಜನ್ ಈ ಆದೇಶ ನೀಡಿದ್ದಾರೆ. 2021ರ ಏಪ್ರಿಲ್‌ನಲ್ಲಿ ಡೆಪ್ಯೂಟಿ ಕಮಿಷನರ್‌ನಿಂದ ವಿಶೇಷ ಪ್ರಾಸಿಕ್ಯೂಟರ್ ಆಗಿ ವಕೀಲರನ್ನು ನೇಮಿಸಿದ್ದನ್ನು ಅವರು ಪ್ರಶ್ನಿಸಿದ್ದರು. ಸಂತ್ರಸ್ತೆಯ ಕೋರಿಕೆ ಮೇರೆಗೆ ವಕೀಲರ ನೇಮಕವು ಎಸ್‌ಸಿ/ ಎಸ್‌ಟಿ ಕಾಯ್ದೆ ಮತ್ತು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಕೋರ್ಟ್ ಹೇಳಿದೆ. ಅಲ್ಲದೆ, ರಾಜ್ಯವು ಎಸ್‌ಸಿ/ಎಸ್‌ಟಿ ವರ್ಗದ ಸದಸ್ಯರ ಹಿತಾಸಕ್ತಿಗಳನ್ನು ಕಿರುಕುಳ ಮತ್ತು ದೌರ್ಜನ್ಯಗಳಿಂದ ರಕ್ಷಿಸಲು ಬಯಸಿದಾಗ ವಕೀಲರ ಶುಲ್ಕಕ್ಕೆ ಹೆಚ್ಚಿನ ಹಣವನ್ನು ಖರ್ಚು ಮಾಡುವ ಮೂಲಕ ಸರ್ಕಾರಕ್ಕೆ ಹೊರೆಯಾಗುತ್ತದೆ ಎಂದು ತಪ್ಪಾಗಿ ಅರ್ಥೈಸಲಾಗುವುದಿಲ್ಲ ಎಂದೂ ಸ್ಪಷ್ಟಪಡಿಸಿದೆ.

ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನಕ್ಕೆ ತಡೆ ತರ್ತೇವೆ: ತನ್ವೀರ್

ಮೈಸೂರು,ನ,14(ಎಂಟಿವೈ)– ಟಿಪ್ಪು ಕುರಿತಂತೆ ರಂಗಾಯಣದಲ್ಲಿ ನ.20 ರಂದು ಪ್ರದರ್ಶಿಸಲು ಉದ್ದೇಶಿಸಿರುವ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ತಡೆ ತರುವ ನಿಟ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ನಿರ್ಧರಿಸಲಾಗಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಬರೆದಿರುವ ಟಿಪ್ಪು ನಿಜ ಕನಸುಗಳು ಪುಸ್ತಕ ನನ್ನ ಕೈ ಸೇರಿದೆ. ಸಾಕಷ್ಟು ತಪ್ಪು ಮಾಹಿತಿ ನಮೂದಿಸಲಾಗಿದೆ. ಈ ಕುರಿತಂತೆ ಅಡ್ವೋಕೇಟ್ ರಂಗನಾಥ್ ಎಂಬುವರನ್ನು ಸಂಪರ್ಕಿಸಿ ಚರ್ಚಿಸಲಾಗಿದೆ. ನಾಟಕ ಪ್ರದರ್ಶನ ಮಾಡದಂತೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುತ್ತೇವೆ. ಸಮಾಜದಲ್ಲಿ ಶಾಂತಿ ಕದಡಲು ಈ ಹುನ್ನಾರ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಗೋಪುರಗಳಲ್ಲಿ ಮುಸ್ಲಿಂರನ್ನು ಕಾಣುತ್ತಾರಾ?: ಬಸ್ ಪ್ರಯಾಣಿಕರ ಉಪಯೋಗಕ್ಕಾಗಿ ನಿರ್ಮಿಸಿರುವ ತಂಗುದಾಣದಲ್ಲಿ ಗೋಪುರ ಇದೆ ಎಂಬ ಕಾರಣಕ್ಕೆ ನೆಲಸಮ ಮಾಡುತ್ತೇನೆ ಎಂದು ಸಂಸದ ಪ್ರತಾಪಸಿಂಹ ಹೇಳಿರುವುದು ಖಂಡನೀಯ. ಎಲ್ಲಾ ಗೋಪುರದಲ್ಲಿ ಸಾಬ್ರು ಕಾಣುತ್ತಾರೆ. ನಿಮ್ಮ ಮನಸ್ಥಿತಿ ಏನೆಂದು ಇದರಿಂದ ಗೊತ್ತಾಗುತ್ತದೆ. ಯಾರ ಯಾರ ದೃಷ್ಟಿಯಲ್ಲಿ ಏನೇನು ಕಾಣುತ್ತದೋ ನೋಡೋಣ. ಗೋಪುರಗಳನ್ನು ಮಸೀದಿ ಮಾದರಿಯಲ್ಲಿದೆ ಎಂದು ಭಾವಿಸುವುದಕ್ಕೆ ಏನೇಂದು ಹೇಳಬೇಕು ಎಂದು ಪ್ರಶ್ನಿಸಿದರು.

ಬಸ್ ತಂಗುದಾಣ ಸರ್ಕಾರಿ ಆಸ್ತಿ. ಅದನ್ನು ಯಾರು ನಿರ್ಮಿಸಿದ್ದಾರೆ. ವಿನ್ಯಾಸ ಮಾಡಿದವರು ಯಾರು ಎಂಬ ಮಾಹಿತಿ ತಿಳಿಯದೆ ಮಾತನಾಡುವುದು ಸರಿಯಲ್ಲ. ಪ್ರತಾಪಸಿಂಹ ಇನ್ನು ಏನೇನು ಹೊಡೆದು ಹಾಕುತ್ತಾರೋ ನೋಡೋಣ. ವಿನಾಕಾರಣ ವಿವಾದ ಸೃಷ್ಟಿ ಮಾಡುವುದು ಸರಿಯಲ್ಲ. ಸರ್ಕಾರಿ ಆಸ್ತಿ ರಕ್ಷಣೆ ನಮ್ಮ ಹೊಣೆ. ಅದನ್ನು ಧ್ವಂಸ ಮಾಡುತ್ತೀನಿ ಎಂದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವರ್ಷವಿಡೀ ಆಚರಣೆಗೆ ಪ್ರೇರಣೆ: ಟಿಪ್ಪು ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಣೆ ಮಾಡುವುದಕ್ಕೂ ಮುನ್ನವೇ ಟಿಪ್ಪು ಜಯಂತಿಯನ್ನು ಪ್ರತಿವರ್ಷ ಮಾಡಿಕೊಂಡೇ ಬಂದಿದ್ದೇವೆ. ವಿನಾಕಾರಣ ವಿವಾದ ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಈ ಹಿಂದೆ ನಾವು ಒಂದು ದಿನ ಮಾತ್ರ ಟಿಪ್ಪು ಜಯಂತಿ ಆಚರಿಸುತ್ತಿದ್ದೆವು. ಇವರು ವಿರೋಧ ಮಾಡುತ್ತಿರುವುದರಿಂದ ವರ್ಷವಿಡೀ ಆಚರಿಸುತ್ತೇವೆ. ಎಲ್ಲದಕ್ಕೂ ಇತಿ ಮಿತಿ ಇರುತ್ತದೆ ಎಂದರು.

KSRTC ನೌಕರರಿಗೆ 1 ಕೋಟಿ ಮೌಲ್ಯದ ವಿಮೆ ಸೌಲಭ್ಯ ಜಾರಿ

ಬೆಂಗಳೂರು: ದೇಶದ ರಸ್ತೆ ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ 1 ಕೋಟಿ ರೂ. ಮೌಲ್ಯದ ಅಪಘಾತ ವಿಮೆ ಸೌಲಭ್ಯ ಜಾರಿಗೊಳಿಸಲಾಗಿದೆ. ಬೆಂಗಳೂರಿನ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಂ.ಚಂದ್ರಪ್ಪ ಸಮ್ಮುಖದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಯುನೈಟೆಡ್ ಇಂಡಿಯಾ ವಿಮಾ ಕಂಪನಿ ಪ್ರಧಾನ ವ್ಯವಸ್ಥಾಪಕರು ಅಂಗ್ರೂಪ್ ಸೋನಂ ಒಡಂಬಡಿಕೆಗೆ ಸಹಿ ಹಾಕಿದರು.

ಈಗಾಗಲೇ ಭಾರತೀಯ ಸ್ಟೇಟ್‌ಬ್ಯಾಂಕ್‌ನೊಂದಿಗೆ ಮಾಡಿಕೊಂಡ 50 ಲಕ್ಷ ವಿಮೆ ಹಾಗೂ ಇಂದು ಯುನೈಟೆಡ್ ಇಂಡಿಯಾ ವಿಮಾ ಕಂಪನಿಯೊಂದಿಗೆ ಮಾಡಿಕೊಂಡ ಒಡಂಬಡಿಕೆಯ 50 ಲಕ್ಷ ಸೇರಿ ಒಟ್ಟು 1 ಕೋಟಿ ವಿಮೆ ಪರಿಹಾರ ನೀಡಲು ನಿರ್ಧರಿಸಲಾಗಿದೆ. ಕೆಎಸ್‌ಆರ್‌ಟಿಸಿಯು ತನ್ನ ಸಿಬ್ಬಂದಿ ಕರ್ತವ್ಯದಲ್ಲಿದ್ದಾಗ ಅಥವಾ ಇಲ್ಲದಿದ್ದಾಗ ಅಪಘಾತದಲ್ಲಿ ಮೃತಪಟ್ಟರೆ, ಶಾಶ್ವತ ಅಥವಾ ತಾತ್ಕಾಲಿಕ ಅಂಗವೈಕಲ್ಯಕ್ಕೆ ತುತ್ತಾದರೆ ಅವರಿಗೆ 50 ಲಕ್ಷ ರೂ. ವಿಮೆ ನೀಡುವ ಸೌಲಭ್ಯವನ್ನು ಎಸ್‌ಬಿಐನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಜಾರಿಗೆ ತರಲಾಗಿತ್ತು. ಇದರ ಮುಂದುವರಿದ ಭಾಗವಾಗಿ, ಯುನೈಟೆಡ್ ಇಂಡಿಯಾ ವಿಮಾ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಯೋಜನೆಗೆ ಒಳಪಡುವ ಸಿಬ್ಬಂದಿ ಪ್ರತಿ ತಿಂಗಳಿಗೆ 62.50 ರೂ. ಜಿಎಸ್‌ಟಿ ಹಾಗೂ ವಾರ್ಷಿಕ ಜಿಎಸ್‌ಟಿ 750 ರೂ. ಸೇರಿ ಒಟ್ಟು 885 ರೂ. ಪಾವತಿಸಬೇಕಾಗುತ್ತದೆ. ಈ ವೈಯಕ್ತಿಕ ವಿಮಾ ಯೋಜನೆಯಿಂದ ಪಾಲಿಸಿದಾರರು ಅಪಘಾತದಲ್ಲಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ 50 ಲಕ್ಷ ಪರಿಹಾರದ ಹಣ ದೊರೆಯಲಿದೆ. ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾದರೆ 50 ಲಕ್ಷ ವಿಮೆ ಪರಿಹಾರ ಸಿಗಲಿದೆ. ಕರ್ತವ್ಯ ಸಮಯ ಅಥವಾ ಕರ್ತವ್ಯದಲ್ಲಿ ಇಲ್ಲದ ಸಮಯದಲ್ಲೂ ಆಗುವ ಅಪಘಾತಗಳಿಗೂ ವಿಮೆ ಅನ್ವಯವಾಗುತ್ತದೆ. ಒಂದು ವೇಳೆ ಸಿಬ್ಬಂದಿ ಅಪಘಾತಕ್ಕೆ ಒಳಗಾಗಿ ತಾತ್ಕಾಲಿಕ ಅಂಗವೈಕಲ್ಯ ಉಂಟಾಗಿ, ತನ್ನ ಮೂಲ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಅಸಮರ್ಥನಾದ ಪಕ್ಷದಲ್ಲಿ, ಆತನು ಚೇತರಿಸಿಕೊಳ್ಳುವವರೆಗೆ ಅವನಿಗೆ ವಿಮಾ ಮಾಡಲಾದ 50 ಲಕ್ಷ ರೂ.ಗಳಲ್ಲಿ ಶೇ.1ರಷ್ಟು ಮೊತ್ತವನ್ನು ಪ್ರತಿ ವಾರ 5 ಸಾವಿರ ರೂ.ನಂತೆ ಅಥವಾ ಮಾಸಿಕ ವೇತನ ರೂಪದಲ್ಲಿ ಶೇ.25ರಷ್ಟು ಹಣವನ್ನು ವಿಮಾ ಸಂಸ್ಥೆ ನೀಡುತ್ತದೆ.

ಮುರುಘಾ ಶ್ರೀ ಪ್ರಕರಣ

ಮಠದ ಮಾಜಿ ಆಡಳಿತಾಧಿಕಾರಿ ಬಸವರಾಜನ್‌ಗೆ ನ್ಯಾಯಾಂಗ ಬಂಧನ

ಚಿತ್ರದುರ್ಗ, ನ.14– ಮುರುಘಾ ಮಠದ ರಾಜಾಂಗಣದಲ್ಲಿದ್ದ ಶಿವಮೂರ್ತಿ ಮುರುಘಾ ಶರಣರ ಫೋಟೊ ಕಳವು ಮಾಡಿದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಅವರಿಗೆ ಸ್ಥಳೀಯ ಕೋರ್ಟ್ ನ.28 ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ.


ಬಸವರಾಜನ್ ಅವರ ಪೊಲೀಸ್ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಇಂದು ಆರೋಪಿಗಳ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಕೆ.ಕೋಮಲಾ ಅವರು, ಬಸವರಾಜನ್ ಹಾಗೂ ಮತ್ತೋರ್ವ ಆರೋಪಿ ಬಸವರಾಜೇಂದ್ರ ಅವರಿಗೆ ನ್ಯಾಯಾಂಗ ಬಂಧನ ವಿಧಿಸಿದ್ದಾರೆ. ಆರೋಪಿ ಶಿವಮೂರ್ತಿ ಮುರುಘಾ ಶರಣರು ಕೂಡ ಜಿಲ್ಲಾ ಕಾರಾಗೃಹದಲ್ಲಿ ಇರುವುದರಿಂದ ತಮ್ಮ ಕಕ್ಷಿದಾರರನ್ನು ಬೇರೆ ಜೈಲಿಗೆ ಕಳುಹಿಸುವಂತೆ ಬಸವರಾಜನ್ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದರು. ಆದರೆ, ನ್ಯಾಯಾಧೀಶರು ಮನವಿಯನ್ನು ತಿರಸ್ಕರಿಸಿದರು. ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಜೈಲು ಪಾಲಾಗಿರುವ ಮುರುಘಾ ಶ್ರೀ ಮತ್ತು ಒಂದು ಕಾಲದಲ್ಲಿ ಶ್ರೀಗಳಿಗೆ ಆಪ್ತರಾಗಿದ್ದು, ಈಗ ಬದ್ಧ ವೈರಿಗಳಾಗಿರುವ ಇಬ್ಬರನ್ನೂ ಒಂದೇ ಜೈಲಿನಲ್ಲಿ ಇರಿಸಲಾಗಿದೆ.

ಪ್ರಿಯತಮೆ ಕೊಂದು 35 ತುಂಡು ಮಾಡಿ ದೆಹಲಿಯಾದ್ಯಂತ ಎಸೆದಿದ್ದ ಪ್ರಿಯಕರನ ಬಂಧನ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯನ್ನು ಬೆಚ್ಚಿ ಬೀಳಿಸಿದ್ದ ಪ್ರಿಯತಮೆಯ ಕೊಂದು ದೇಹವನ್ನು 35 ತುಂಡುಗಳಾಗಿ ಕತ್ತರಿಸಿ ದೆಹಲಿಯಾದ್ಯಂತ ಬಿಸಾಡಿದ್ದ ಪ್ರಿಯಕರನನ್ನು ಪೊಲೀಸರು ಬಂಧಿಸಿದ್ದಾರೆ.

ಈ ಹಿಂದಿನ ನೀರಜ್ ಗ್ರೋವರ್ ಕೊಲೆಯನ್ನು ನೆನಪಿಸುವ ಹತ್ಯೆಯೊಂದು ದೆಹಲಿಯಲ್ಲಿ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ತನ್ನೊಂದಿಗೆ ಲಿವ್ ಇನ್ ಸಂಬಂಧದಲ್ಲಿದ್ದ ಪ್ರೇಯಸಿಯನ್ನು ಕೊಲೆಗೈದು ಆಕೆಯ ದೇಹವನ್ನು 35 ತುಂಡುಗಳಾಗಿ ಕತ್ತರಿಸಿ ನಗರದಾದ್ಯಂತ ಎಸೆದಿದ್ದ ವ್ಯಕ್ತಿಯನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಅಫ್ತಾಬ್ ಅಮೀನ್ ಪೂನಾವಾಲಾ ಬಂಧಿತ ಆರೋಪಿಯಾಗಿದ್ದು, ತನ್ನ ಗೆಳತಿ ಶ್ರದ್ಧಾಳೊಂದಿಗೆ ಜಗಳವಾಡಿದ್ದ ಈತ, ಮೇ18ರಂದು ಆಕೆಯನ್ನು ಕೊಲೆಗೈದಿದ್ದ. ಬಳಿಕ ದೇಹವನ್ನು 35 ತುಂಡುಗಳಾಗಿ ಕತ್ತರಿಸಿ ಫ್ರಿಡ್ಜ್‌ನಲ್ಲಿಟ್ಟಿದ್ದ. ಮುಂದಿನ 18 ದಿನಗಳ ಕಾಲ ಮಧ್ಯರಾತ್ರಿ 2 ಗಂಟೆಗೆ ಮನೆಯಿಂದ ತೆರಳಿ ನಗರದಾದ್ಯಂತ ನಿತ್ಯ ದೇಹದ ಒಂದೊಂದು ಭಾಗಗಳನ್ನು ಎಸೆದು ಬರುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.



ಶ್ರದ್ಧಾ



ಅಫ್ತಾಬ್ ಪೂನಾವಾಲಾ

26 ವರ್ಷದ ಶ್ರದ್ಧಾ ಮುಂಬೈನ ಕಾಲ್‌ಸೆಂಟರ್‌ನಲ್ಲಿ ಉದ್ಯೋಗಿಯಾಗಿದ್ದು, ಆರೋಪಿ ಅಫ್ತಾಬ್‌ನನ್ನು ಭೇಟಿಯಾಗಿದ್ದಳು. ಪ್ರೀತಿಯ ಬಲೆಗೆ ಬಿದ್ದ ಇಬ್ಬರು ಒಟ್ಟಾಗಿರಲು ಪ್ರಾರಂಭಿಸಿದ್ದರು. ಕುಟುಂಬ ಇವರ ಸಂಬಂಧಕ್ಕೆ ಒಪ್ಪದೇ ಇದ್ದಾಗ ಇಬ್ಬರೂ ದೆಹಲಿಗೆ ಬಂದು ಮೆಹ್ರೌಲಿಯಲ್ಲಿ ವಾಸಿಸಲು ಪ್ರಾರಂಭಿಸಿದ್ದರು.

ಈ ಹಿಂದೆ ಮಗಳು ಶ್ರದ್ಧಾಗೆ ಆಕೆಯ ತಂದೆ ವಿಕಾಸ್ ಮದಾನ್ ಕರೆ ಮಾಡಿದ್ದಾರೆ. ಈ ವೇಳೆ ಮಗಳು ಕರೆ ಸ್ವೀಕರಿಸದಿದ್ದಾಗ ಗಾಬರಿಗೊಂಡ ಆಕೆಯ ತಂದೆ ವಿಕಾಸ್ ಮದಾನ್ ಮಗಳನ್ನು ನೋಡಲು ನ.8ರಂದು ದೆಹಲಿಗೆ ಬಂದಿದ್ದಾರೆ. ಆದರೆ ಆಕೆ ಉಳಿದುಕೊಂಡಿದ್ದ ಫ್ಲಾಟ್ ಬೀಗ ಹಾಕಿರುತ್ತದೆ. ಇದರಿಂದ ಗಾಬರಿಯಾದ ಅವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ದೂರಿನ ಮೇರೆಗೆ ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಶನಿವಾರ ಆರೋಪಿಯನ್ನು ಬಂಧಿಸಿದ್ದಾರೆ. ತನಿಖೆ ಬಳಿಕ ಕೊಲೆಯ ವಿಚಾರ ಬೆಳಕಿಗೆ ಬಂದಿದೆ.

ವಿಚಾರಣೆ ವೇಳೆ ಆರೋಪಿ ಶ್ರದ್ಧಾಳ ಕತ್ತು ಹಿಸುಕಿ ಕೊಂದಿದ್ದಾನೆ. ನಂತರ ಆಕೆಯ ದೇಹವನ್ನು 35 ತುಂಡುಗಳಾಗಿ ಕತ್ತರಿಸಿ ಅವುಗಳನ್ನು ಇಡಲು ಫ್ರಿಡ್ಜ್ ಖರೀದಿಸಿದ್ದ. ನಂತರ 18 ದಿನ ಆತ ಆಕೆಯ ದೇಹದ ತುಂಡುಗಳನ್ನು ದೆಹಲಿಯ ವಿವಿಧ ಭಾಗಗಳಲ್ಲಿ ಬಿಸಾಡಿದ್ದಾನೆ ಎನ್ನಲಾಗಿದೆ. ಇನ್ನು ಹತ್ಯೆಗೂ ಮುನ್ನ ಶ್ರದ್ಧಾ ತನ್ನನ್ನು ಮದುವೆಯಾಗುವಂತೆ ಅಫ್ತಾಬ್ ಅಮೀನ್ ಪೂನಾವಾಲಾನನ್ನು ಒತ್ತಾಯಿಸಿದ್ದರು ಎನ್ನಲಾಗಿದೆ. ಶ್ರದ್ಧಾ ಆತನನ್ನು ಮದುವೆಯಾಗಲು ಬಯಸಿದ್ದರಿಂದ ಇಬ್ಬರೂ ಆಗಾಗ್ಗೆ ಜಗಳವಾಡುತ್ತಿದ್ದರು ಎಂದು ತನಿಖೆಯ ವೇಳೆ ಆತ ಬಹಿರಂಗಪಡಿಸಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದು, ಶ್ರದ್ಧಾ ಶವಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಕಲ್ಲು ಕ್ವಾರಿ ಕುಸಿತ: 15 ಮಂದಿ ಮಣ್ಣಿನಡಿ ಸಿಲುಕಿರುವ ಶಂಕೆ

ಐಜ್ವಾಲ್, ನ.14– ಕಲ್ಲು ಕ್ವಾರಿ ಕುಸಿದು 15ಕ್ಕೂ ಹೆಚ್ಚು ಕಾರ್ಮಿಕರು ಮಣ್ಣಿನಡಿ ಸಿಲುಕಿರುವ ಘಟನೆ ಮಿಜೋರಾಂನಲ್ಲಿ ನಡೆದಿದೆ. ಮಿಜೋರಾಂನ ಹ್ನಾಥಿಯಾಲ್ ಗ್ರಾಮದ ಬಳಿ ಇದ್ದ ಕಲ್ಲು ಕ್ವಾರಿಯಲ್ಲಿ 15ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಈ ವೇಳೆ ಕ್ವಾರಿ ಕುಸಿದು ಕ್ವಾರಿಗೆ ಮಣ್ಣು ಆವರಿಸಿದೆ. ಏಕಾಏಕಿ ಮಣ್ಣು ಕುಸಿದ ಪರಿಣಾಮ ಕ್ವಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ಮಣ್ಣಿನಡಿಯಲ್ಲಿ ಸಿಲುಕಿದ್ದಾರೆ. ಕನಿಷ್ಠ 15 ಮಂದಿ ಮಣ್ಣಿನಡಿಯಲ್ಲಿರುವ ಶಂಕೆ ವ್ಯಕ್ತವಾಗಿದ್ದು, ಘಟನಾ ಸ್ಥಳದಲ್ಲಿ ರಕ್ಷಣಾ ಕಾರ್ಯಚರಣೆ ನಡೆಯುತ್ತಿದೆ. ಮಣ್ಣಿನಡಿ ಡ್ರಿಲ್ಲಿಂಗ್ ಯಂತ್ರಗಳು ಹೂತುಹೋಗಿವೆ. 5ಕ್ಕೂ ಹೆಚ್ಚು ಜೆಸಿಬಿಗಳು (JCB) ಮಣ್ಣು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ.

ಜನರಲ್ ತಿಮ್ಮಯ್ಯ ಮ್ಯೂಸಿಯಂ ಪ್ರವೇಶ ಶುಲ್ಕ ಹೆಚ್ಚಳ



ಮಡಿಕೇರಿ,ನ.14– ಜನರಲ್ ತಿಮ್ಮಯ್ಯ ಸ್ಮಾರಕ ಭವನ ಪ್ರವೇಶ ಶುಲ್ಕವನ್ನು ನವೆಂಬರ್ 16 ರಿಂದ ಹೆಚ್ಚಿಸಲಾಗಿದೆ. 15 ವರ್ಷ ಮೇಲ್ಪಟ್ಟವರಿಗೆ 40 ರೂ., 5 ವರ್ಷ ಮೇಲ್ಪಟ್ಟವರಿಗೆ 20 ರೂ. ಪ್ರವೇಶ ಶುಲ್ಕವನ್ನು ಹೆಚ್ಚಿಸಲಾಗಿದೆ. 5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶವಿದೆ. ಜನರಲ್ ತಿಮ್ಮಯ್ಯ ಸ್ಮಾರಕ ಭವನ ನಿರ್ವಹಣಾ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿರುವುದರಿಂದ ಸಾರ್ವಜನಿಕರ ಪ್ರವೇಶ ಶುಲ್ಕವನ್ನು ಹೆಚ್ಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ನಿಸರ್ಗಧಾಮ ತೂಗು ಸೇತುವೆ ಮೇಲೆ ಪ್ರವಾಸಿಗರ ಪ್ರವೇಶ ನಿರ್ಬಂಧ



ಕುಶಾಲನಗರ, ನ.14– ಕಾವೇರಿ ನಿಸರ್ಗಧಾಮದಲ್ಲಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ತೂಗು ಸೇತುವೆ ತೀರಾ ಶಿಥಿಲಾವಸ್ಥೆಯಲ್ಲಿರುವ ಕಾರಣ ಸಂಭವನೀಯ ಅಪಾಯ ತಪ್ಪಿಸುವ ಸಲುವಾಗಿ ಪ್ರವಾಸಿ ತಾಣ ಬಂದ್ ಮಾಡಲಾಗಿದೆ ಎಂದು ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಂ ತಿಳಿಸಿದರು.

ಪ್ರವಾಸಿ ತಾಣ ಮುಚ್ಚಿರುವ ಕಾರಣ ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಿದೆ ಎಂದು ಸ್ಥಳೀಯ ಕೆಲವು ಆರೋಪಿಸಿದ್ದಾರೆ. ಕಡಿಮೆ ಸಂಖ್ಯೆಯಲ್ಲಿ ಪ್ರವಾಸಿಗರು ತೆರಳಲು ಅವಕಾಶ ಮಾಡಿಕೊಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ತಾಂತ್ರಿಕ ಪರಿಣಿತರ ಸೂಚನೆಯಂತೆ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ನಿಸರ್ಗಧಾಮ ಮುಚ್ಚಲಾಗಿದೆ. ಇದು ಜೀವಕ್ಕೆ ಸಂಬಂಧಿಸಿದ ವಿಚಾರವಾದ ಕಾರಣ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ಅರಣ್ಯ ಇಲಾಖೆ ಸಿದ್ಧವಿಲ್ಲ ಎಂದು ತಿಳಿಸಿದರು.

ಇತರರಂತೆ ಅರಣ್ಯ ಇಲಾಖೆಗೂ ಕೂಡ ಆದಾಯ ಕ್ಷೀಣಿಸಲಿದೆ. ದುರಸ್ತಿ ಕಾರ್ಯ ಮುಗಿಯಲು ತಿಂಗಳುಗಳ ಕಾಲ ಸಮಯ ಹಿಡಿಯಲಿದೆ. ಈ ನಿಟ್ಟಿನಲ್ಲಿ ಒಳಗೆ ಪ್ರಾಣಿಪಕ್ಷಿಗಳು, ಅರಣ್ಯ ಸಂಪತ್ತನ್ನು ಕಾಪಾಡುವ ಸಂಬಂಧ ಪರ್ಯಾಯ ಮಾರ್ಗ ಸಿದ್ದಪಡಿ ಸಲಾಗುತ್ತಿದೆ ಹೊರತು ಪ್ರವಾಸಿ ಗರಿಗೆ ತೆರಳಲು ಅಲ್ಲ ಎಂದು ಸ್ಪಷ್ಟಪಡಿಸಿದರು.

ಈಗಿರುವ ಸೇತುವೆ ದುರಸ್ತಿಗೆ ರೂ. 45 ಲಕ್ಷ ವೆಚ್ಚವಾಗಲಿದೆ, ಹೊಸ ತೂಗು ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ನ.19ರಂದು ಮುಪ್ಪಟ್ಟು ಶನಿವಾರ ಪೂಜೆ

ವಿರಾಜಪೇಟೆ, ನ.14– ವಿರಾಜಪೇಟೆ ಸಮೀಪದ ಹೆಗ್ಗಳ ಗ್ರಾಮದಲ್ಲಿರುವ ಶ್ರೀ ಅಯ್ಯಪ್ಪ ಭಗವತಿ ದೇವಾಲಯದಲ್ಲಿ 'ಮುಪ್ಪಟ್ಟು ಶನಿವಾರ'ದ ವಿಶೇಷ ಪೂಜಾ ಕಾರ್ಯಕ್ರಮವು ನ.19 ರಂದು ನಡೆಯಲಿದೆ. ಅಂದು ಬೆಳಗ್ಗೆ 9–30 ಗಂಟೆಗೆ ದೇವರಿಗೆ ರುದ್ರಾಭಿಷೇಕ ಹಾಗೂ ವಿಶೇಷ ಪೂಜೆಗಳು ನಡೆದ ಬಳಿಕ 12 ಗಂಟೆಗೆ ಮಹಾಪೂಜೆ, ಪ್ರಸಾದ ವಿನಿಯೋಗ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಮುಪ್ಪಟ್ಟು ಶನಿವಾರದ ಪೂಜೆಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಅಮ್ಮಣಕುಟ್ಟಂಡ ಜಿ.ಬೋಪಣ್ಣ ಕೋರಿದ್ದಾರೆ.

ಕೆರೆಯಲ್ಲಿ ಮುಳುಗುತ್ತಿದ್ದ ವೃದ್ಧನ ರಕ್ಷಿಸಿದ ಕೊಡಗಿನ ಕುವರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ



ಮಡಿಕೇರಿ,ನ.14– ಕೊಡಗಿನ ಕುವರಿ ಗೋಣಿಕೊಪ್ಪಲು ಸೀಗೆತೋಡು ನಿವಾಸಿ ಶಬರೀಶ ಶಾಂತ ದಂಪತಿ ಪುತ್ರಿ ನಮ್ರತಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೊಡಮಾಡುವ ಪ್ರತಿಷ್ಠಿತ 'ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ' ಬಾಜನರಾಗಿದ್ದಾರೆ. ಮಕ್ಕಳ ದಿನಾಚರಣೆ ಪ್ರಯುಕ್ತ ಬೆಂಗಳೂರಿನ ಜವಾಹರ್ ಲಾಲ್ ಬಾಲಭವನದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನಮ್ರತಾಳಿಗೆ ಪ್ರತಿಷ್ಠಿತ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ನೀಡಿ, ಗೌರವಿಸಿದರು. ಈ ಸಂದರ್ಭ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವ ಹಾಲಪ್ಪ ಆಚಾರ್ ಸೇರದಂತೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಗೋಣಿಕೊಪ್ಪಲು ಅರ್ವತೋಕ್ಲುವಿನ ಸರ್ವದೈವತಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿರುವ ನಮ್ರತಾ, 2021 ರ ನವೆಂಬರ್ 6 ರಂದು ಮಧ್ಯಾಹ್ನ ಎಂದಿನಂತೆ ಕಾಲೇಜು ಮುಗಿಸಿ ಮನೆಕಡೆಗೆ ಹೆಜ್ಜೆ ಹಾಕುತ್ತಿದ್ದಳು. ಆ ಸಂದರ್ಭ ಮನೆ ಸಮೀಪದಲ್ಲಿರುವ ಕೆರೆಯಲ್ಲಿ ವೃದ್ಧರೋರ್ವರು ಮುಳುಗುತ್ತ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದುದ್ದನ್ನು ಗಮನಿಸಿದ ನಮ್ರತಾ ಕೆರೆಗೆ ಧುಮುಕಿ ಮುಳುಗುತ್ತಿದ್ದ ವೃದ್ಧನನ್ನು ಸುರಕ್ಷಿತವಾಗಿ ದಡ ಸೇರಿಸುವ ಮೂಲಕ ಜೀವ ರಕ್ಷಿಸಿದ್ದಳು. ಈ ಘಟನೆಯನ್ನು ಪರಿಗಣಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಮ್ರತಾ ಹೆಸರನ್ನು ಪ್ರತಿಷ್ಠಿತ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗಾಗಿ ಸರಕಾರಕ್ಕೆ ಶಿಫಾರಸು ಮಾಡಿತ್ತು.

ತನಗೆ ಸಿಕ್ಕಿದ ಪ್ರಶಸ್ತಿಯನ್ನು ಕಾಲೇಜಿನ ಪ್ರಾಂಶುಪಾಲರು, ಮುಖ್ಯೋಪಾಧ್ಯಾಯರಿಗೆ ಹಾಗೂ ತನ್ನ ತಂದೆ, ತಾಯಿಗೆ ಅರ್ಪಿಸುವುದಾಗಿ ನಮ್ರತಾ ಹೆಮ್ಮೆಯಿಂದ ನುಡಿದಿದ್ದಾರೆ. ತನ್ನ ಮಗಳು ಜೀವವೊಂದನ್ನು ಕಾಪಾಡಿದ್ದು, ತುಂಬಾ ಸಂತೋಷ ತಂದಿದೆ ಎಂದು ಮಗಳ ಸಾಧನೆಯ ಬಗ್ಗೆ ತಾಯಿ ಶಾಂತ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿನಿ ನಮ್ರತಾ ರಾಷ್ಟ್ರಮಟ್ಟದ ಥ್ರೋಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿರುವುದು ಅಲ್ಲದೇ ಈವರೆಗೆ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕುಶಾಲನಗರದಲ್ಲಿ ನೂತನ ಶಾಲಾ ಕೊಠಡಿ ಉದ್ಘಾಟನೆ



ಕುಶಾಲನಗರ, ನ.14– ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 'ಸೇರ್ಪಡೆ ಮಾರ್ಪಾಡು' ಯೋಜನೆಯಡಿ ರೂ.15.75 ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿಯನ್ನು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕರು, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ವಿಶೇಷ ಒತ್ತು ನೀಡಿದೆ. ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಈ ಎಲ್ಲ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು.

ಪಪಂ ಅಧ್ಯಕ್ಷ ಬಿ.ಜೈವರ್ಧನ್ ಮಾತನಾಡಿ, ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚಿನ ಒತ್ತು ನೀಡಬೇಕು. ಉತ್ತಮ ಫಲಿತಾಂಶ ತಂದು ಶಾಲೆಗೆ ಹಾಗೂ ಪೋಷಕರರಿಗೆ ಕೀರ್ತಿ ತರಬೇಕು ಎಂದರು. ಈ ಸಂದರ್ಭ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವೇದಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ.ಸುರೇಶ್, ಮುಖ್ಯಶಿಕ್ಷಕಿ ಪುಷ್ಪಾ ಹಾಗೂ ಶಿಕ್ಷಕರು ಇದ್ದರು.

ಕುಪ್ಪಂಡ ಪುಷ್ಪ ಮುತ್ತಣ್ಣ ನಿಧನ



ವಿರಾಜಪೇಟೆ, ನ.14– ವಿರಾಜಪೇಟೆ ನಗರದ ಜೈನರ ಬೀದಿಯ ನಿವಾಸಿ (ನಿವೃತ್ತ) ಕರ್ನಲ್ ಕುಪ್ಪಂಡ ಮುತ್ತಣ್ಣ ಅವರ ಪತ್ನಿ ಕುಪ್ಪಂಡ ಪುಷ್ಪ ಮುತ್ತಣ್ಣ(79) ಅವರು ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಮೃತರು ಹಲವು ವರ್ಷಗಳಿಂದ ಸಮಾಜ ಸೇವೆಯನ್ನು ಮುಂದುವರೆಸಿಕೊಂಡು ಬಂದಿದ್ದರು. ವಿರಾಜಪೇಟೆ ಕೊಡವ ಪೊಮ್ಮಕ್ಕಡ ಒಕ್ಕೂಟದ ಸಲಹಾ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದರು.

ಮೃತರು ಪತಿ, ಓರ್ವ ಪುತ್ರ ಹಾಗೂ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿರಾಜಪೇಟೆ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು. ಮೃತರ ನಿಧನಕ್ಕೆ ಕೊಡವ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷೆ ಕಾಂತಿ ಸತೀಶ್ ಹಾಗೂ ಸದಸ್ಯರು ಸಂತಾಪ ಸೂಚಿಸಿದ್ದಾರೆ.

ಕಬ್ಬಿಗೆ ಬೆಂಬಲ ಬೆಲೆ ನಿಗದಿಗೆ ಸದನದಲ್ಲಿ ಚರ್ಚೆ

ರೈತರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಮಂಡ್ಯ, ನ.14– ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವಂತೆ ಕಳೆದೊಂದು ವಾರದಿಂದ ನಗರದ ಸರ್‌ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ರೈತರು ಧರಣಿ ನಡೆಸುತ್ತಿದ್ದರೂ, ರಾಜ್ಯ ಸರ್ಕಾರ ಕ್ಯಾರೆ ಎನ್ನುತ್ತಿಲ್ಲ. ಹೀಗಾಗಿ ಈ ಬಗ್ಗೆ ರೈತರ ಪರ ಸದನದಲ್ಲಿ ದನಿ ಎತ್ತುವೆ. ಅಲ್ಲದೇ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವ ನಿಟ್ಟಿನಲ್ಲಿ ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಗಂಭೀರ ಚರ್ಚೆ ನಡೆಸುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ರಾಜ್ಯ ರೈತ ಸಂಘ ಕಳೆದ ಒಂದು ವಾರದಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿ, ಪ್ರತಿಭಟನೆಗೆ ಬೆಂಬಲ ಸೂಚಿಸಿ ಅವರು ಮಾತನಾಡಿದರು.

ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವಂತೆ ನಾನು ಈಗಾಗಲೇ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಅಲ್ಲದೇ ಹೋರಾಟ ನಡೆಸುತ್ತಿರುವ ರೈತ ಮುಖಂಡರು ಸಹ ಒಮ್ಮೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಆದರೆ ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ದಸರಾ ಸಂದರ್ಭದಲ್ಲೂ ಸಹ ಬೆಂಬಲ ಬೆಲೆ ನಿಗದಿ ಮಾಡುವುದಾಗಿ ಹೇಳಿ ಅದರಂತೆ ಸರ್ಕಾರ ನಡೆದುಕೊಂಡಿಲ್ಲ ಎಂದು ಕಿಡಿಕಾರಿದರು.

ಸದನದಲ್ಲಿ ವಿಶೇಷವಾಗಿ ಈ ವಿಚಾರದ ಬಗ್ಗೆ ಪ್ರಸ್ತಾಪಿಸಿ, ಗಂಭೀರವಾಗಿ ಚರ್ಚೆ ಮಾಡುತ್ತೇನೆ. ಮಂಡ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಕ್ರೀಡಾ ಸಚಿವ ನಾರಾಯಣಗೌಡ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಬಂದಿದ್ದರೂ ಪ್ರತಿ ಭಟನಾ ಜಾಗಕ್ಕೆ ಬಂದಿಲ್ಲ ಎಂಬ ರೈತ ಮುಖಂಡರ ಹೇಳಿಕೆಗೆ ಪ್ರತಿಕ್ರಿಯಿಸಿ, ಸಚಿವರು ಪ್ರತಿಭಟನಾ ಸ್ಥಳಕ್ಕೆ ಬಂದರೆ ಸುಳ್ಳು ಹೇಳಿ ಹೋಗಬೇಕಾಗುತ್ತದೆ ಎಂಬ ಕಾರಣಕ್ಕೆ ಇಲ್ಲಿಗೆ ಬಂದಿಲ್ಲ ಎಂದು ಲೇವಡಿ ಮಾಡಿದರು.

ನೀವು ನಮಗೆ ಆಶೀರ್ವಾದ ಮಾಡಿ. ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ಕಬ್ಬಿನ ಪ್ರೋತ್ಸಾಹ ಹಣ ಹೆಚ್ಚು ಮಾಡುತ್ತೇವೆ. ನನ್ನ ಅಧಿಕಾರಾವಧಿಯಲ್ಲಿ 4 ರೂ. ಇದ್ದ ಪ್ರೋತ್ಸಾಹ ಹಣವನ್ನು 5ರೂ.ಗೆ ಹೆಚ್ಚಿಸಿದ್ದೆ. ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭಗೊಂಡರೂ ಸಮರ್ಪಕವಾಗಿ ನಡೆಯುತ್ತಿಲ್ಲ. ಸರ್ಕಾರ ಕಾರ್ಖಾನೆಯನ್ನು ಸಮರ್ಪಕವಾಗಿ ನಡೆಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಈ ವೇಳೆ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಹೆಚ್.ಸಿ.ಮಹದೇವಪ್ಪ ರೈತ ಮುಖಂಡರಾದ ಕೆಂಪೂಗೌಡ, ಮಧುಚಂದನ್, ಕಾಂಗ್ರೆಸ್ ಮುಖಂಡ ರುದ್ರಪ್ಪ ಇತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ನ.14– ಚಿಕ್ಕಮಂಡ್ಯ ಮತ್ತು ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.15 ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಶಂಕರಪುರ, ಜೈನಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ವಿನಾಯಕನಂದ ಬಡಾವಣೆ, ಗೋಪಾಲಪುರ, ಚಿಕ್ಕಮಂಡ್ಯ, ಸಾತನೂರು, ಕೊಮ್ಮೇರಹಳ್ಳಿ, ಹುಲಿವಾನ, ಕೆ.ಗೌಡಗೆರೆ. ಹೆಚ್.ಮಲ್ಲಿಗೆರೆ, ಎಸ್.ಐ.ಕೋಡಿಹಳ್ಳಿ, ಹೆಚ್.ಕೋಡಿಹಳ್ಳಿ, ಸಂಪಹಳ್ಳಿ, ಗೊರವಾಲೆ, ಬಿ.ಹೊಸಹಳ್ಳಿ, ಬೀರಗೌಡನಹಳ್ಳಿ, ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ.ಹೊನ್ನೇನಹಳ್ಳಿ, ಬಿದರಕಟ್ಟೆ, ಬೆನ್ನಹಟ್ಟಿ, ಮನುಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ರಸ್ತೆ ಗುಂಡಿಯಿಂದ ಪಾರಾಗಲು ಹೋಗಿ ಲಾರಿ ಹರಿದು ಮಾಜಿ ಯೋಧ ದುರ್ಮರಣ



ಮಂಡ್ಯ, ನ.14– ಎಲ್ಲೆಡೆ ರಸ್ತೆ ಗುಂಡಿಗಳದ್ದೇ ಕಾರುಬಾರು. ಇಂತಹ ಗುಂಡಿಗಳು ಸಾವಿನ ಗುಂಡಿಗಳಾಗಿ ಪರಿಣಮಿಸಿವೆ. ಆ ಗುಂಡಿಗೆ ಮಾಜಿ ಯೋಧರೊಬ್ಬರು ಬಲಿಯಾಗಿರುವ ಘಟನೆ ನಗರದ ಕಾರೆಮನೆ ಗೇಟ್ ಬಳಿ ಸಂಭವಿಸಿದೆ.

ಸಾತನೂರು ಗ್ರಾಮದ ಮಾಜಿ ಯೋಧ ಎಸ್.ಎನ್.ಕುಮಾರ್(39) ದುರಂತ ಸಾವಿಗೀಡಾದವರು. ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಇವರು ಪೊಲೀಸ್ ಕಾನ್ಸ್‌ಸ್ಟೇಬಲ್ ಹುದ್ದೆಗೆ ಆಯ್ಕೆಯಾಗಿ ಬೆಂಗಳೂರಿನಲ್ಲಿ ಕಳೆದ 6 ತಿಂಗಳಿನಿಂದ ತರಬೇತಿ ಪಡೆಯುತ್ತಿದ್ದರು. ಇತ್ತೀಚೆಗೆ ಗ್ರಾಮಕ್ಕೆ ಬಂದಿದ್ದ ಎಸ್.ಎನ್.ಕುಮಾರ್, ಭಾನುವಾರ ತಮ್ಮ ತಂದೆಯೊಂದಿಗೆ ಬೈಕ್‌ನಲ್ಲಿ ಮಂಡ್ಯದಿಂದ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕಾರೆಮನೆ ಗೇಟ್ ಬಳಿ ರಸ್ತೆಯ ದೊಡ್ಡ ಗುಂಡಿಗಳನ್ನು ತಪ್ಪಿಸಲು ಹೋಗಿ ಎದುರಿನಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದಿದ್ದಾರೆ. ಈ ವೇಳೆ ಹಿಂದಿನಿಂದ ಬಂದ ಲಾರಿ ಇವರ ತಲೆ ಮೇಲೆ ಹರಿದಿದೆ. ಪರಿಣಾಮ ಹೆಲ್ಮೆಟ್ ಧರಿಸಿದ್ದರೂ, ಅದು ಛಿದ್ರಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಮಾರ್ ಅವರ ತಂದೆ ಗಂಭೀರವಾಗಿ ಗಾಯಗೊಂಡಿದ್ದು, ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾರೆಮನೆ ಗೇಟ್ ಬಳಿ ರಸ್ತೆ ಕೆರೆಯಂತಾಗಿದ್ದು, ದೊಡ್ಡ ಗುಂಡಿಗಳು ನಿರ್ಮಾಣವಾಗಿವೆ. ಜಮೀನು ವಿವಾದ ಇರುವುದರಿಂದ ಲೋಕೋಪಯೋಗಿ ಇಲಾಖೆ ಏನು ಕ್ರಮ ಕೈಗೊಳ್ಳದೇ ಹಾಗೆಯೇ ಬಿಟ್ಟಿರುವುದರಿಂದ ಪ್ರತಿನಿತ್ಯ ವಾಹನ ಸವಾರರಿಗೆ ಅಪಾಯದ ಗುಂಡಿಯಾಗಿದೆ. ಕೂಡಲೇ ರಸ್ತೆ ಸರಿಪಡಿಸಬೇಕು ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಸ್.ಎನ್.ಕುಮಾರ್ ನಿವೃತ್ತಿ ಸಂದರ್ಭ ಅದ್ಧೂರಿ ಮೆರವಣಿಗೆ ಮೂಲಕ ತಮ್ಮ ಸ್ವಗ್ರಾಮಕ್ಕೆ ಮರಳಿದ್ದರು. ಈಗ ರಸ್ತೆ ಗುಂಡಿಗೆ ಬಲಿಯಾಗಿರುವುದು ಗ್ರಾಮಸ್ಥರಲ್ಲಿ ಶೋಕ ಮಡುಗಟ್ಟಿದೆ.

ಈ ಸಂಬಂಧ ನಗರದ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಮಂಗಲದಲ್ಲಿ ಒಕ್ಕಲಿಗ ಸಮುದಾಯದ ವಧು–ವರರ ಸಮಾವೇಶದಲ್ಲಿ ನೂಕುನುಗ್ಗಲು

ಇದ್ದ 250 ಯುವತಿಯರಿಗೆ ವರಮಹಾಶಯರು 13 ಸಾವಿರಕ್ಕೂ ಅಧಿಕ!

ಮಂಡ್ಯ, ನ.14– ರೈತಾಪಿ ಜಿಲ್ಲೆ ಎಂದೇ ಕರೆಯಲ್ಪಡುವ ಸಕ್ಕರೆ ನಾಡು ಮಂಡ್ಯದಲ್ಲಿ ರೈತರ ಮಕ್ಕಳಿಗೆ ಮದುವೆಯಾಗಲು ಹುಡುಗಿಯರೇ ಸಿಗುತ್ತಿಲ್ಲ ಎಂಬ ಮಾತುಗಳು ಆಗಾಗ ಕೇಳಿ ಬರುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಜಿಲ್ಲೆಯ ನಾಗಮಂಗಲದ ಆದಿಚುಂಚನಗಿರಿ ಧಾರ್ಮಿಕ ಕ್ಷೇತ್ರದಲ್ಲಿ ನಡೆದ ಒಕ್ಕಲಿಗ ವಧು–ವರರ ಸಮಾವೇಶದಲ್ಲಿ ಕೇವಲ 250 ಮಂದಿ ಹುಡುಗಿಯರಿಗೆ ಬರೋಬ್ಬರಿ 13 ಸಾವಿರಕ್ಕೂ ಅಧಿಕ ಮಂದಿ ಮದುವೆ ಬಯಸಿ ಬಂದ ಅಪರೂಪದ ಪ್ರಸಂಗ ನಡೆದಿದೆ.

ಇತ್ತೀಚೆಗೆ ಮಂಡ್ಯದ ಕೆ.ಎಂ.ದೊಡ್ಡಿಯಲ್ಲಿ ರೈತರ ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ ಎಂದು ಸಂಸ್ಥೆಯೊಂದು ಮಲೆ ಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಮದುವೆಯಾಗದ ಹುಡುಗರನ್ನು ಬೇಗ ಮದುವೆಯಾಗಲಿ ಎಂದು ಕರೆದುಕೊಂಡು ಹೋಗಿದ್ದರು. ಇದು ರಾಜ್ಯವ್ಯಾಪಿ ಸುದ್ದಿಯಾಗಿತ್ತು.

ಭಾನುವಾರ ಶ್ರೀಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸಮಾಜ ಸಂಪರ್ಕ ವೇದಿಕೆ, ರಾಜ್ಯ ಚುಂಚಾದ್ರಿ ಮಹಿಳಾ ಒಕ್ಕೂಟದಿಂದ ರಾಜ್ಯ ಮಟ್ಟದ ಒಕ್ಕಲಿಗರ ವಧು–ವರರ ಸಮಾವೇಶವನ್ನು ಮಠದ ಬಿಜಿಎಸ್ ಸಭಾ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಪೈಕಿ ಮದುವೆಯಾಗಲು ಆಸಕ್ತಿ ವಹಿಸಿ 250 ಮಂದಿ ಯುವತಿಯರು ನೋಂದಣಿ ಮಾಡಿಸಿದ್ದರೆ, ಹುಡುಗರ ಸಂಖ್ಯೆ ಹೇಳ ತೀರದ್ದಾಗಿತ್ತು ಕೇವಲ 250 ಮಂದಿ ಹುಡುಗಿಯರಿಗೆ ಬರೋಬ್ಬರಿ 13 ಸಾವಿರ ಮಂದಿ ಹುಡುಗರು ಮದುವೆಗಾಗಿ ವಧು–ವರರ ಸಮಾವೇಶದಲ್ಲಿ ನೋಂದಣಿಯಾಗಿದ್ದರು. ಮಂಡ್ಯ ಜಿಲ್ಲೆ ಸೇರಿದಂತೆ ಪಕ್ಕದ ತುಮಕೂರು, ರಾಮನಗರ, ಮೈಸೂರು, ಹಾಸನ ಸೇರಿದಂತೆ ರಾಜ್ಯದ ವಿವಿಧ ಮೂಲೆಗಳಿಂದ ಬರೋಬ್ಬರಿ 13 ಸಾವಿರ ಯುವಕರು ನೋಂದಣಿಯಾಗಿದ್ದರು.

ನೋಂದಣಿಯಾಗುವವರು ತಮ್ಮ ಆಧಾರ್ ಕಾರ್ಡ್, ಮೊಬೈಲ್ ನಂಬರ್, ಫೋಟೋ ಮತ್ತು ವಿಳಾಸವನ್ನು ಮಠದ ಸಂಬಂಧಿಸಿದ ಕಚೇರಿಗೆ ತಲುಪಿಸಬೇಕಾಗಿತ್ತು. ಆದರೆ 250 ಮಂದಿ ಯುವತಿಯರಿಗೆ ಬರೋಬ್ಬರಿ 13 ಸಾವಿರಕ್ಕೂ ಅಧಿಕ ಮಂದಿ ರಿಜಿಸ್ಟಾರ್ ಮಾಡಿಕೊಂಡು ವಧು–ವರರ ಸಮಾವೇಶಕ್ಕೆ ಹಾಜರಾಗಿದ್ದರು. ವರದಿಯೊಂದರ ಪ್ರಕಾರ 25 ಸಾವಿರದವರೆಗೂ ಆಗಮಿಸಿದ್ದರೆನ್ನಲಾಗಿದೆ.

ರೈತರು ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ರೈತನಿದ್ದರೆ ದೇಶ ಸುಭೀಕ್ಷಾ ಎನ್ನುವ ಈ ಕಾಲದಲ್ಲಿ ರೈತರ ಮಕ್ಕಳಿಗೆ ವಧು ಸಿಗುತ್ತಿಲ್ಲ. ರೈತರಿಗೆ ಹೆಣ್ಣೆತ್ತವರು ಮಗಳನ್ನು ಕೊಡಲು ನಿರಾಕರಿಸುತ್ತಿದ್ದಾರೆ. ಕೇವಲ ನಗರ ಪ್ರದೇಶದಲ್ಲಿರುವವರಿಗೆ ಮಾತ್ರ ತಮ್ಮ ಮಗಳನ್ನು ಕೊಡುವುದಾಗಿ ಹೇಳುತ್ತಾರೆ. ಇದರಿಂದ ರೈತರ ಮಕ್ಕಳು ದಾಂಪತ್ಯ ಜೀವನಕ್ಕೆ ಕಾಲಿಡುವುದು ಕಷ್ಟವಾಗಿದ್ದು, ಈ ನಿಟ್ಟಿನಲ್ಲಿ ಮಠದಲ್ಲಿ ನಡೆದ ವಧು–ವರರ ಸಮಾವೇಶದಲ್ಲಿ ಸಾವಿರಾರು ಮಂದಿ ಭಾಗವಹಿಸಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಸುಮಾರು 13 ಸಾವಿರ ಮಂದಿ ಯುವಕರು ನೋಂದಣಿ ಮಾಡಿಸಿಕೊಂಡಿದ್ದ ಸಮಾವೇಶದಲ್ಲಿ 250 ಮಂದಿಗೆ ಮಾತ್ರ ಮದುವೆ ಭಾಗ್ಯ ಒಲಿದಿದ್ದು, ಉಳಿದವರು ನಿರಾಶೆಯಿಂದ ವಾಪಸ್ಸಾಗಿದ್ದಾರೆ. ಬಂದಿದ್ದ ಹುಡುಗರ ಪೈಕಿ ಬಹುತೇಕರು ರೈತ ಕುಟುಂಬದವರಾಗಿದ್ದರು.

ವಿವೇಕ ಯೋಜನೆಯಡಿ ಶಾಲಾ ಕೊಠಡಿಗೆ ಭೂಮಿ ಪೂಜೆ



ಗುಂಡ್ಲುಪೇಟೆ, ನ.14– ಸರ್ಕಾರಿ ಶಾಲೆಗಳ ಮಕ್ಕಳ ಕಲಿಕೆಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಪೋಷಕರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ಪಟ್ಟಣದ ಹೊಸೂರು ಬಡಾವಣೆಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ವಿವೇಕ ಯೋಜನೆಯಡಿ 14 ಲಕ್ಷ ರೂ. ವೆಚ್ಚದಲ್ಲಿ ನೂತನ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ವಿವೇಕ ಯೋಜನೆಯಡಿ ಸರ್ಕಾರ ರಾಜ್ಯದ 7601 ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಿದ್ದಾರೆ. ಇದರಲ್ಲಿ ಎಲ್ಲಾ ತಾಲೂಕುಗಳಿಗೂ 20 ಶಾಲೆಗಳಿಗೆ ಹೆಚ್ಚುವರಿ ಕೊಠಡಿ ಮಂಜೂರು ಮಾಡಿದ್ದರೆ ಗುಂಡ್ಲುಪೇಟೆ ತಾಲೂಕಿನಲ್ಲಿ 12 ಹೆಚ್ಚುವರಿ ಕೊಠಡಿ ಸೇರಿ 32 ಶಾಲೆಗಳಲ್ಲಿ 4.5 ಕೋಟಿ ವೆಚ್ಚದಲ್ಲಿ ಕೊಠಡಿಗಳನ್ನು ನಿರ್ಮಿಸಲಾಗುವುದು. ಇದಕ್ಕೆ ಸಾಂಕೇತಿಕವಾಗಿ ಭೂಮಿಪೂಜೆ ನೆರವೇರಿಸಲಾಗುತ್ತಿದ್ದು, ಉಳಿದ ಎಲ್ಲಾ ಶಾಲೆಗಳಲ್ಲಿಯೂ ಕಾಮಗಾರಿಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಉಚಿತ ಪಠ್ಯಪುಸ್ತಕ, ಪೌಷ್ಟಿಕ ಆಹಾರ, ಹಾಲು ಮೊಟ್ಟೆ ವಿತರಣೆ, ಮಧ್ಯಾಹ್ನದ ಬಿಸಿಯೂಟ, ಪ್ರತಿಭಾ ಕಾರಂಜಿ, ವಿಜ್ಞಾನ ಮೇಳ, ಯುವಸಂಸತ್, ಕ್ರೀಡಾಕೂಟಗಳನ್ನು ಆಯೋಜಿಸಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕ್ರಮಕೈಗೊಳ್ಳಲಾಗಿದೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅತಿಥಿ ಶಿಕ್ಷಕರ ನೇಮಕ ಮಾಡಲಾಗಿದೆ. ಇದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಸದಸ್ಯ ನಾಗೇಶ್, ಶಾಲಾಭಿವೃದ್ಧಿ ಸಮಿತಿಯ ಸದಸ್ಯ ಹೊಸೂರು ಬಸವರಾಜು ಹಲವರು ಭಾಗವಹಿಸಿದ್ದರು.

ಚಿಕ್ಕಹೊಳೆ–ಎಲೆಕಟ್ಟೆ ಹದಗಟ್ಟ ರಸ್ತೆ ಸಾರ್ವಜನಿಕರ ದಿನನಿತ್ಯದ ಗೋಳು

ಗ್ರಾಮಸ್ಥರಿಂದ ಚುನಾವಣೆ ಬಹಿಷ್ಕಾರ ಎಚ್ಚರಿಕೆ



ಚಾಮರಾಜನಗರ, ನ.14– ಒಂದಲ್ಲ ಎರಡಲ್ಲ ನಾಲ್ಕಾರು ವರ್ಷ ಕಳೆದರೂ ರಸ್ತೆ ನಿರ್ಮಾಣಗೊಂಡಿಲ್ಲ, ಮಂಡಿ ಗಾತ್ರದ ಹಳ್ಳ ದಿನ ನಿತ್ಯ ಸಂಚರಿಸುವ ಪ್ರಯಾಣಿಕರಿಗೆ ಈ ರಸ್ತೆ ನರಕಯಾತನೆ, ಈ ರಸ್ತೆ ಕರ್ನಾಟಕದ ಚಾಮರಾಜನಗರ ಗಡಿಭಾಗದಲ್ಲಿರುವ ಚಿಕ್ಕಹೊಳೆಯಿಂದ ಎಲೆಕಟ್ಟೆವರೆಗೆ ಇದ್ದು ತೀವ್ರ ಅವ್ಯವಸ್ಥೆಯಿಂದ ಕೂಡಿದೆ.

ಚಾಮರಾಜನಗರ ಗಡಿ ಅಂಚಿನ ಪ್ರದೇಶವಾದ ಚಿಕ್ಕಹೊಳೆಯಿಂದ ತಮಿಳುನಾಡು ಗಡಿಗೆ ಸಂಪರ್ಕ ಕಲ್ಪಿಸುವ ಎಲೆಕಟ್ಟೆ ಗ್ರಾಮದವರೆಗೆ 6 ಕಿಮೀ ರಸ್ತೆ ಸಂಚರಿಸುವುದೆಂದರೆ ಈ ಭಾಗದಲ್ಲಿ ಸಂಚರಿಸುವ ಪ್ರಯಾಣಿಕರ ಪಾಲಿಗಂತೂ ಶಿಕ್ಷೆ ನೀಡುವಂತಿದೆ, ಈವರೆಗೂ ಶಾಸಕರಾಗಲೀ, ಜಿಲ್ಲಾ ಪಂಚಾಯತ್ ಅಧಿಕಾರಿಗಳಾಗಲಿ ಒಮ್ಮೆಯೂ ಇತ್ತ ತಿರುಗಿ ನೋಡಿಲ್ಲ, ರಸ್ತೆಯ ಉದ್ದಗಲಕ್ಕೂ ಮಂಡಿ ಗಾತ್ರದ ಹಳ್ಳ, ಮಳೆ ಬಂದ ವೇಳೆ ಹಳ್ಳಿಗಳಲ್ಲಿ ನೀರು ತಂಬಿ ವಾಹನಗಳು ಮಗುಚಿ ಬಿದ್ದಿವೆ. ಅನೇಕ ಭಾರಿ ಜಿಲ್ಲಾಡಳಿತ, ಸರ್ಕಾರದ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ, ದಿನ ನಿತ್ಯ ಸಂಚರಿಸುವ ಪ್ರಯಾಣಿಕರು, ಮಹಿಳೆಯರು, ಮಕ್ಕಳು ಆಡಳಿತ ವ್ಯವಸ್ಥೆಗೆ ಹಿಡಿ ಶಾಪ ಹಾಕುತ್ತಿದ್ದಾರೆ, ಅಲ್ಲದೇ ವಾಹನಗಳ ಸವಾರರಿಗಂತೂ ಈ ರಸ್ತೆ ಯಮಯಾತನೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಚಿಕ್ಕಹೊಳೆ, ಬೊಮ್ಮನಹಳ್ಳಿ, ಫಾರಂ, ಎಲೆಕಟ್ಟೆ ಸುತ್ತಮುತ್ತಲಿನ ಗ್ರಾಮಸ್ಥರು ಮತದಾನ ಬಹಿಷ್ಕರಿಸುವುದಾಗಿ ಎಚ್ಚರಿಸಿದ್ದಾರೆ.

ಈಗಲಾದರೂ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ಎಚ್ಚೆತ್ತು ಹದಗೆಟ್ಟಿರುವ ರಸ್ತೆಯನ್ನು ಒಮ್ಮೆ ದರ್ಶನ ಮಾಡಿ ಗುಂಡಿ ಮುಚ್ಚುವ ಕೆಲಸ ಮಾಡಬೇಕು ಹಾಗೂ ಹೊಸ ರಸ್ತೆಯನ್ನು ನಿರ್ಮಾಣ ಮಾಡಬೇಕು ಎಂದು ಎಚ್ಚರಿಸಿದ್ದಾರೆ.

ಇಂದು ಹನೂರಲ್ಲಿ ಡಿಸಿಯಿಂದ ಅಹವಾಲು ಸ್ವೀಕಾರ

ಚಾಮರಾಜನಗರ, ನ.14– ಜಿಲ್ಲಾಧಿಕಾರಿಗಳು ಹನೂರು ತಾಲೂಕು ಕಚೇರಿಗೆ ನ.15 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿಯ ಪರಿಶೀಲನೆ ನಡೆಸುವರು ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.



ಬೇಗೂರು ಸಮೀಪದ ಅರೇಪುರ ಗೇಟ್ ಬಳಿ ಟೀಪುಡಿ ತುಂಬಿದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಉರುಳಿಬಿದ್ದಿದ್ದು, ಅದೃಷ್ಟವಷಾತ್ ಯಾವುದೇ ಅನಾವುತ ಸಂಭವಿಸಿಲ್ಲ.

ಸರ್ಕಾರಿ ಶಾಲೆಯ ಮಕ್ಕಳಿಗೆ ಗಂಧದಗುಡಿ ಚಿತ್ರ ಪ್ರದರ್ಶನ



ಚಾಮರಾಜನಗರ, ನ14– ಮಕ್ಕಳಲ್ಲಿ ಪರಿಸರದ ಹರಿವು ಮೂಡಿಸುವ ಸಲುವಾಗಿ ಸೋಮವಾರ ಚಾಮರಾಜನಗರದ ಈಶ್ವರಿ ಟ್ರಸ್ಟ್ ವತಿಯಿಂದ ಜಾಲಹಳ್ಳಿ ಸರ್ಕಾರಿ ಶಾಲೆಯ ಮಕ್ಕಳಿಗೆ ಪುನೀತ್‌ರಾಜ್ ಕುಮಾರ್ ಅಭಿನಯದ ಗಂಧದಗುಡಿ ಚಿತ್ರವನ್ನು ಶ್ರೀ ರಾಘವೇಂದ್ರ ಚಿತ್ರಮಂದಿರದಲ್ಲಿ ಪ್ರದರ್ಶಿಸಲಾಯಿತು.

ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್ ಮಾತನಾಡಿ, ಮಕ್ಕಳಿಗೆ ಮೊಬೈಲ್ ಕೊಟ್ಟು ಹಾಳುಮಾಡುವ ಬದಲು ಪರಸರದ ಬಗ್ಗೆ, ಇನ್ನು ಒಳ್ಳೆಯ ವಿಷಯಗಳ ಬಗ್ಗೆ ಹರಿವು ಮೂಡಿಸುವ ಚಲನಚಿತ್ರಗಳನ್ನು ತೋರಿಸುವುದರಿಂದ ಮಕ್ಕಳ ಜ್ಞಾನ ವೃದ್ದಿಯಾಗುತ್ತದೆ. ನಮ್ಮ ಸಂಸ್ಥೆಯ ವತಿಯಿಂದ ಜಾಲಹಳ್ಳಿ ಹುಂಡಿ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ಪರಿಸರದ ಬಗ್ಗೆ ತೆರೆ ಕಂಡಿರುವ ಗಂಧದಗುಡಿ ಚಿತ್ರವನ್ನು, ನಮ್ಮ ಸಂಸ್ಥೆಯಿಂದ ಉಚಿತವಾಗಿ ತೋರಿಸಲಾಗುತ್ತದೆ. ಎಂದರು. ಈ ಸಂದರ್ಭದಲ್ಲಿ ಜಯಲಕ್ಷ್ಮಿ ವೆಂಕಟೇಶ್ ಮಕ್ಕ ಶಾಲಾ ಶಿಕ್ಷಕರು ಹಾಜರಿದ್ದರು.

ಕಾರ್ತಿಕ ಸೋಮವಾರದ ವಿಶೇಷ ಪೂಜೆ



ಗುಂಡ್ಲುಪೇಟೆ, ನ.14– ಮೂರನೇ ಕಾರ್ತಿಕ ಸೋಮವಾರದ ಅಂಗವಾಗಿ ಪಟ್ಟಣದ ಪುರಾತನ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಶಿವಲಿಂಗಕ್ಕೆ ರುದ್ರಾಭಿಷೇಕ ಮಾಡಿ ಸಿಂಧೂರ ಹಾಗೂ ವಿವಿಧ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ನಂತರ ಮಹಿಳಾ ಭಕ್ತರಿಂದ ಭಜನೆ, ಹಾಡು ಹಾಗೂ ಸಂಗೀತ ಕಾರ್ಯಕ್ರಮ ನಡೆಸಲಾಯಿತು. ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ನೇತೃತ್ವದಲ್ಲಿ ವಿಶೇಷ ಪೂಜೆ ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ತೆರಕಣಾಂಬಿ ಸೋಮೇಶ್ವರ ದೇವಾಲಯ: ತಾಲೂಕಿನ ತೆರಕಣಾಂಬಿ ಗ್ರಾಮದ ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಆರಾಧನೆ ನಡೆಸಲಾಯಿತು. ಆರಾಧನೆಯ ಅಂಗವಾಗಿ ಶಿವಲಿಂಗಕ್ಕೆ ಬೆಳ್ಳಿ ಮುಖವಾಡ ಧರಿಸಿ ಅಭಿಷೇಕ ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಪರೀಕ್ಷೆ ವಿಚಾರದಲ್ಲಿ ಮಕ್ಕಳಲ್ಲಿ ವಿಶ್ವಾಸ ತುಂಬುವ ಮೂಲಕ ಶಾಸಕ ರಾಮದಾಸರಿಂದ ಅರ್ಥಪೂರ್ಣ ಮಕ್ಕಳ ದಿನಾಚರಣೆ

ಮೈಸೂರು, ನ.14(ಎಸ್‌ಬಿಡಿ)– 'ಪರೀಕ್ಷೆ ಒಂದು ಹಬ್ಬ' ಕುರಿತ ಸಂವಾದ ನಡೆಸಿ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುವ ಮೂಲಕ ಶಾಸಕ ಎಸ್.ಎ.ರಾಮದಾಸ್ ಅವರು 'ಮಕ್ಕಳ ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಕೃಷ್ಣರಾಜ ಕ್ಷೇತ್ರದ ಜಯನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೊಂದಿಗೆ ಮಕ್ಕಳ ದಿನ ಆಚರಿಸಿದ ಶಾಸಕ ರಾಮದಾಸ್, ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ, ಭಯಪಡಬೇಡಿ. ಸಮಾಜದ ಎಲ್ಲಾ ಕ್ಷೇತ್ರದಲ್ಲೂ ಉನ್ನತ ಸ್ಥಾನಗಳಲ್ಲಿರುವುದು ಇಂತಹ ಸರ್ಕಾರಿ ಶಾಲೆಗಳಲ್ಲಿ ಓದಿದವರೇ. ನೀವೂ ಕೂಡ ಚೆನ್ನಾಗಿ ಓದಿ ಸಮಾಜಕ್ಕೆ ಶಕ್ತಿಯಾದರೆ ಹೆತ್ತವರು, ಕಲಿಸಿದವರು ಹೆಮ್ಮೆ ಪಡುತ್ತಾರೆ. ನೀವೇ ದೇಶದ ಆಸ್ತಿ. ಓದುವ ಕಡೆ ಗಮನ ಕೊಡಿ ನಿಮ್ಮ ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ನನಗೆ ಬಿಡಿ ಎಂದು ಮನೋಸ್ಥೈರ್ಯ ತುಂಬಿದರು.



ಇದೇ ವೇಳೆ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳಿ, ಸರಿಯಾದ ಉತ್ತರ ನೀಡಿದ ಮಕ್ಕಳಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರಲ್ಲದೆ ಮುಂದಿನ ಸಂವಾದದಲ್ಲಿ ಎಲ್ಲಾ ಪ್ರಶ್ನೆಗಳಿಗೂ ಎಲ್ಲರೂ ಉತ್ತರ ನೀಡಬೇಕು. ಆಗ ನಿಮ್ಮ ಶಾಲೆಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿ ಕೊಡುತ್ತೇನೆ ಎಂದು ಮಕ್ಕಳನ್ನು ಅಧ್ಯಯನಕ್ಕೆ ಹುರಿದುಂಬಿಸಿದರಲ್ಲದೆ ಎಲ್ಲರಿಗೂ ಸಿಹಿ ಹಂಚಿದರು.

ಅಲ್ಲದೆ ಶಾಲಾ ಆವರಣದಲ್ಲಿ ಎರಡು ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಈ ಶಾಲೆಗೆ ಇನ್ನೂ ಒಂದು ಮೈದಾನ ನಿರ್ಮಿಸುವ ಭರವಸೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ರಾಮಾರಾಧ್ಯ, ಬಿಆರ್‌ಸಿ ಶ್ರೀಕಂಠಶಾಸ್ತ್ರೀ, ಬಿಆರ್‌ಸಿ ಶ್ರೀಕಂಠಸ್ವಾಮಿ, ಶಿಕ್ಷಕರ ಸಂಘದ ಸೋಮೇಗೌಡ್ರು, ಪ್ರಾಂಶುಪಾಲ, ಎಸ್‌ಡಿಎಂಸಿ ಅಧ್ಯಕ್ಷೆ ವಿನುತ, ಹರ್ಷ, ಗೀತಾ, ಗಿರೀಶ್, ಪ್ರದೀಪ್, ಅನಿಲ್, ಕೃಷ್ಣ, ವಿಜಯ್, ಕೆಂಪರಾಜು, ಉಮೇಶ್, ಸೋಮಣ್ಣ, ಮಹೇಶ್ ಸೇರಿದಂತೆ ಸ್ಥಳೀಯರು ಉಪಸ್ಥಿತರಿದ್ದರು.

ಕುರುಬ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಪೂರ್ವಭಾವಿ ಸಭೆಯಲ್ಲಿ ರೂಪುರೇಷೆ ನಿರ್ಧಾರ



ಮೈಸೂರು,ನ.14(ಎಸ್‌ಬಿಡಿ)– ಕುರುಬರ ಸಂಘದ ವತಿಯಿಂದ ನ.30ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸುವ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸಿ, ರೂಪುರೇಷೆ ಬಗ್ಗೆ ಚರ್ಚಿಸಲಾಯಿತು. ಮೈಸೂರಿನ ಹೊಸ ಬಂಡಿಕೇರಿಯ ಕನಕ ಭವನದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಟಿ.ಸುಬ್ರಹ್ಮಣ್ಯ ಮಾತನಾಡಿ, ಸಂಘದ ನಗರ, ಜಿಲ್ಲೆ ಹಾಗೂ ತಾಲೂಕು ಘಟಕಗಳ ಸಹಯೋಗದಲ್ಲಿ ನ.30ರಂದು ಕಲಾಮಂದಿರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದ್ದು, ಕಾಗಿನೆಲೆ ಗುರುಪೀಠದ ಶ್ರೀ ನಿರಂಜನಾ ನಂದಪುರಿ ಸ್ವಾಮೀಜಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಸಮಾಜದ ಹಲವು ಮುಖಂಡರು ಭಾಗವಹಿಸಲಿದ್ದಾರೆ ಎಂದರು. ಪ್ರತಿ ವರ್ಷದಂತೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಪುರಸ್ಕರಿಸಲಾಗುವುದು. ವಿದ್ಯಾರ್ಥಿಗಳು, ಪೋಷಕರು ಮಾತ್ರವಲ್ಲದೆ ಸಮಾಜದ ಜನ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಸಂಘದ ನಿರ್ದೇಶಕರು, ಎಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಸಂಬಂಧಿಸಿದ ಜವಾಬ್ದಾರಿಗಳನ್ನು ವಹಿಸಿಕೊಂಡರು. ಇದೇ ವೇಳೆ ಕೆಲವರು ಸ್ವ-ಇಚ್ಛೆಯಿಂದ ಧನಸಹಾಯವನ್ನೂ ಮಾಡಿದರು.

ಒಂದನೇ ಪುಟದಿಂದ

ಹೊರ ಹಾಕಿ ಅರ್ಹರಿಗೆ ಆಶ್ರಯ ನೀಡಿ

ಎರಡು ತಿಂಗಳೊಳಗಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು. ಉಳಿದ ಮನೆ ನಿರ್ಮಿಸಲು ಭೂಸ್ವಾಧೀನಪಡಿಸಿಕೊಂಡು ಮುಂದಿನ ಪ್ರಕ್ರಿಯೆ ನಡೆಸಲಾಗುವುದು ಎಂದು ಮಾಹಿತಿ ನೀಡಿದ ಅಧಿಕಾರಿಗಳಿಗೆ ಜಾಗ ಗುರುತಿಸಿದರೆ ಜಿಲ್ಲಾಧಿಕಾರಿಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಂದ ಮಂಜೂರಾತಿ ಕೊಡಿಸುತ್ತೇನೆ ಎಂದು ಪ್ರತಾಪ್ ಸಿಂಹ ಇದೇ ಸಂದರ್ಭದಲ್ಲಿ ತಿಳಿಸಿದರು.

ನ.30 ರೊಳಗೆ ರಿಂಗ್ ರಸ್ತೆಗೆ ದೀಪ: 42 ಕಿ.ಮೀ. ರಿಂಗ್ ರಸ್ತೆ ಪೈಕಿ ಸುಮಾರು 30 ಕಿ.ಮೀ.ವರೆಗೆ ಯುಜಿ ಕೇಬಲ್ ಅಳವಡಿಸಲಾಗಿದೆ. ಉಳಿದ ಜಾಗದ ಕಾಮಗಾರಿಯೂ ಪ್ರಗತಿಯಲ್ಲಿದ್ದು ನವೆಂಬರ್ 30ರೊಳಗಾಗಿ ಎಲ್‌ಇಡಿ ಬಲ್ಬ್ ಹಾಕಿ ರಿಂಗ್ ರಸ್ತೆಯಲ್ಲಿ ಎಲ್ಲಾ ಬೀದಿ ದೀಪಗಳು ಉರಿಯುವಂತೆ ಮಾಡುತ್ತೇವೆ ಎಂದು ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡೆಂಗ್ ಇಂಜಿನಿಯರ್ ಮಹೇಶ್, ದಿಶಾ ಸಮಿತಿ ಅಧ್ಯಕ್ಷರಾದ ಸಂಸದರಿಗೆ ಸಮಜಾಯಿಷಿ ನೀಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಸಾಲ: ಬೀದಿ ಬದಿ ತಳ್ಳುವ ಗಾಡಿಗಳಲ್ಲಿ ಸಣ್ಣ ಪುಟ್ಟ ವ್ಯಾಪಾರಿಗಳು ಬಡ್ಡಿ ಸಾಲಕ್ಕೆ ಕೈವೊಡ್ಡಿ ಸಂಕಷ್ಟಕ್ಕೆ ಸಿಲುಕಬಾರದೆಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರವು ಪ್ರಧಾನಮಂತ್ರಿಗಳ ಸ್ವ ನಿಧಿ ಯೋಜನೆಯಡಿ 10 ಸಾವಿರ, 20 ಸಾವಿರ ರೂ.ಗಳವರೆಗೆ ಬ್ಯಾಂಕಿನಿಂದ ಸಬ್ಸಿಡಿ ರೂಪದ ಸಾಲ ನೀಡುತ್ತಿದ್ದು, ಪಾಲಿಕೆ ಅಧಿಕಾರಿಗಳು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅರ್ಹ ಫಲಾನುಭವಿಗಳಿಗೆ ಸಾಲಸೌಲಭ್ಯ ಕೊಡಿಸಬೇಕೆಂದು ಪ್ರತಾಪ್ ಸಿಂಹ ಸಲಹೆ ನೀಡಿದರು. ಮೈಸೂರಲ್ಲಿ ಈ ಯೋಜನೆಯಡಿ ಸಾಲ ಸೌಲಭ್ಯಕ್ಕಾಗಿ 15,430 ಅರ್ಜಿಗಳು ಬಂದಿದ್ದು, 9030 ಮಂದಿಗೆ ಮಂಜೂರಾಗಿವೆ. 8601 ಸಣ್ಣ ವ್ಯಾಪಾರಿಗಳಿಗೆ ವಿತರಿಸಲಾಗಿದೆ. ಸಣ್ಣ ಪುಟ್ಟ ಕಾರಣಗಳಿಗಾಗಿ ಬ್ಯಾಂಕ್‌ನವರು ಅರ್ಜಿಯನ್ನು ತಿರಸ್ಕರಿಸುತ್ತಿರುವುದು ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕಾರಣವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪಿಎಂಜೆವೈ ಆರೋಗ್ಯ ಕಾರ್ಡ್ ನೀಡಿ: ಪ್ರಧಾನ ಮಂತ್ರಿಗಳ ಜನಾರೋಗ್ಯ ಯೋಜನೆ (ಪಿಎಂಜೆವೈ)ಯಡಿ ಜಿಲ್ಲೆಯ ಎಲ್ಲಾ ಫಲಾನುಭವಿಗಳಿಗೆ ಆರೋಗ್ಯ ಕಾರ್ಡ್ ವಿತರಿಸಿ ಚಿಕಿತ್ಸೆ ಪಡೆಯಲು ಸಮರೋಪಾದಿಯಲ್ಲಿ ಪ್ರಯತ್ನಿಸಬೇಕು ಎಂದು ಡಿಹೆಚ್‌ಓ ಡಾ.ಪ್ರಸಾದ್ ಅವರಿಗೆ ಪ್ರತಾಪ್ ಸಿಂಹ ಸಲಹೆ ನೀಡಿದರು. ಚಾಮರಾಜ ಜೋಡಿ ರಸ್ತೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ದೂರಿದ್ದರೂ ಪರಿಶೀಲಿಸಿ ಕ್ರಮ ಕೈಗೊಂಡಿಲ್ಲ ಎಂದು ಶಾಸಕ ರಾಮದಾಸ್ ಕಿಡಿಕಾರಿದರು. ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದು, ಸಭೆಗೆ ಅಗತ್ಯ ಮಾಹಿತಿ ನೀಡಿದರು.

ಒಂದೊಂದು ಶಾಲೆ ದತ್ತು ಪಡೆಯಲಿ

ಸಂಕಲ್ಪದೊಂದಿಗೆ ಪ್ರಯತ್ನಿಸಿ ಪ್ರಯೋಗಾತ್ಮಕವಾಗಿ ಈ ಬಾರಿಯಿಂದಲೇ ಈ ಯೋಜನೆಯನ್ನು ಜಾರಿ ಮಾಡಬಹುದೆಂದು ಸಲಹೆ ನೀಡಿದರು. ಈ ಬಗ್ಗೆ ಸಮಗ್ರ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ 'ನಮ್ಮ ಶಾಲೆ–ನಮ್ಮ ಹೊಣೆ' ಎಂಬ ಯೋಜನೆಗೆ ಅಧಿಕೃತ ಅಧಿಸೂಚನೆ ಹೊರಡಿಸಲಾಗುವುದು. ಪಿಡಿಓಗಿಂತ ಮೇಲ್ಪಟ್ಟ ಎಲ್ಲಾ ಅಧಿಕಾರಿಗಳಿಗೂ ಒಂದೊಂದು ಶಾಲೆಯ ಜವಾಬ್ದಾರಿ ನೀಡಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಹೆಚ್ಚಿಸಲು ಪ್ರಯತ್ನಿಸೋಣ ಎಂದು ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ಜಿಲ್ಲೆಯಲ್ಲಿ 50ಕ್ಕಿಂತ ಕಡಿಮೆ ಮಕ್ಕಳಿರುವ 48 ಪ್ರಾಥಮಿಕ ಶಾಲೆಗಳಿವೆ. ಅವುಗಳನ್ನು ಸಮೀಪದ ಶಾಲೆಗಳಿಗೆ ಟ್ಯಾಗ್ ಮಾಡಲು ಯೋಜನೆ ರೂಪಿಸಲಾಗುವುದು ಎಂದು ಸಾರ್ವಜನಿಕ ಶಿಕ್ಷಣ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದರು.

ಬಿಪಿಎಲ್ ಕಾರ್ಡ್ ಮಾಡಿಸಿ: ಕಡಿಮೆ ಆದಾಯವಿರುವ ಕಡುಬಡವರಿಗೆ ಇನ್ನೂ ಬಿಪಿಎಲ್ ಪಡಿತರ ಕಾರ್ಡ್ ಸಿಕ್ಕಿಲ್ಲ. ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿಸುತ್ತಿರುವವರು ಹಾಗೂ ಆಸ್ತಿವಂತರು ಬಿಪಿಎಲ್ ಕಾರ್ಡುಗಳನ್ನು ಹೊಂದಿ ಅನುಕೂಲ ಪಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅನರ್ಹರಿಗೆ ನೀಡಿರುವ ಬಿಪಿಎಲ್ ಕಾರ್ಡ್ ಅನ್ನು ರದ್ದುಪಡಿಸಿ ಅರ್ಹ ಫಲಾನುಭವಿಗಳಿಗೆ ನೀಡಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಫ್ಲೆಕ್ಸ್ ಹಾಕಲು ಬಿಡಬೇಡಿ: ಸ್ವಚ್ಛ ನಗರಿ ಮೈಸೂರು ನಗರದಾದ್ಯಂತ ಎಲ್ಲಾ ಪಕ್ಷದವರ, ರಾಜಕೀಯ ಮುಖಂಡರ ಹುಟ್ಟುಹಬ್ಬ, ಶ್ರದ್ಧಾಂಜಲಿ ಹಾಗೂ ಕಾರ್ಯಕ್ರಮಗಳ ಫ್ಲೆಕ್ಸ್‌ಗಳನ್ನು ಹಾಕಲಾಗುತ್ತಿದೆ. ಅವರು ಯಾರೇ ಆಗಲೀ, ಎಷ್ಟೇ ಪ್ರಭಾವಶಾಲಿಯಾಗಿರಲೀ, ದಂಡ ಹಾಕಿ, ಕ್ರಿಮಿನಲ್ ಕೇಸ್ ಹಾಕುತ್ತೇವೆ ಎಂದು ತಿಳುವಳಿಕೆ ನೀಡಿ ಎಂದು ಪ್ರತಾಪ್ ಸಿಂಹ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಿದರು.

100 ಎಂಎಲ್‌ಡಿ ನೀರು ಎಲ್ಲಿಗೆ ಹೋಗುತ್ತಿದೆ?: ಮೈಸೂರು ನಗರಕ್ಕೆ ವಿವಿಧ ಮೂಲಗಳಿಂದ ಒಟ್ಟು 303 ಎಂಎಲ್‌ಡಿ ನೀರು ಬರುತ್ತಿದೆ. ನಮಗೆ ಅಗತ್ಯವಿರುವುದು ಕೇವಲ 200 ಎಂಎಲ್‌ಡಿ ಮಾತ್ರ. ಹಾಗಾದರೆ ಉಳಿದ 100 ಎಂಎಲ್‌ಡಿ ನೀರು ಎಲ್ಲಿಗೆ ಹೋಗುತ್ತಿದೆ ಎಂದು ಪ್ರಶ್ನಿಸಿದ ಸಂಸದರು, ಅನಧಿಕೃತ ಸಂಪರ್ಕಕ್ಕೆ ಮೀಟರ್ ಅಳವಡಿಸಿ ನೀರು ಪೋಲಾಗುವುದನ್ನು ತಡೆಯುವ ಜೊತೆಗೆ ಎಲ್ಲಾ ಬಡಾವಣೆಗಳಿಗೂ ಸಮನಾಗಿ ಕುಡಿಯುವ ನೀರು ಸರಬರಾಜಾಗುವಂತೆ ವಿತರಣಾ ಜಾಲವನ್ನು ಬಲಪಡಿಸಿ ಎಂದು ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುವರ್ಣ ಅವರಿಗೆ ಸೂಚನೆ ನೀಡಿದರು.

ಕಡತಗಳಿಗೆ ಸಹಿ ಹಾಕಿಕೊಂಡು ಕೂತರೆ ಮಾತ್ರ ಉತ್ತಮ ಕುಲಪತಿ

● ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ವಿಷಾದ ● ಇಂದು ನಿವೃತ್ತರಾಗಲಿರುವ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್ ಕುಮಾರ್ ಅವರಿಗೆ ಅಭಿನಂದನೆ ● ಯಾರಿಗೂ ತೊಂದರೆ ಕೊಡದೇ ಪ್ರೊ.ಹೇಮಂತ್ ಕುಮಾರ್ ಉತ್ತಮ ಕಾರ್ಯ ಮಾಡಿದ್ದಾರೆ

ಮೈಸೂರು, ನ.14(ಎಸ್‌ಬಿಡಿ)– ಕ್ರಿಯಾಶೀಲವಾಗಿ ಕೆಲಸ ಮಾಡದೆ, ಕೇವಲ ಕಡತಗಳಿಗೆ ಸಹಿ ಹಾಕಿಕೊಂಡು ಸುಮ್ಮನೆ ಕುಳಿತಿದ್ದರೆ ಅಂತಹವರನ್ನು ಉತ್ತಮ ಕುಲಪತಿ ಎನ್ನುವಂತಹ ದುಃಸ್ಥಿತಿ ಇದೆ ಎಂದು ಕರ್ನಾಟಕ ರಾಜ್ಯ ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷರಾದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧಿಕಾರಾವಧಿ ನಾಳೆ(ನ.15) ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ವಿವಿಯ ಕ್ರಾಫರ್ಡ್ ಭವನದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಪ್ರೊ.ಕೆ.ಎಸ್.ರಂಗಪ್ಪ, ಕುಲಪತಿಯಾಗಿ ಕೆಲಸ ಮಾಡುವುದು ತುಂಬಾ ಕಷ್ಟ. ಕ್ರಿಯಾಶೀಲವಾಗಿ, ವೈಜ್ಞಾನಿಕವಾಗಿ, ಅಭಿವೃದ್ಧಿ ನಿಟ್ಟಿನಲ್ಲಿ ಕೆಲಸ ಮಾಡದೆ ಕೇವಲ ಕಡತಗಳಿಗೆ ಸಹಿ ಹಾಕಿಕೊಂಡು ಕುಳಿತಿರುವವರನ್ನು ಉತ್ತಮ ಕುಲಪತಿ ಎನ್ನುವವರು ಹೆಚ್ಚಿದ್ದಾರೆ ಎಂದರು.

ಪ್ರೊ.ಜಿ.ಹೇಮಂತ್‌ಕುಮಾರ್ ಅವರೊಂದಿಗೆ 30 ವರ್ಷಗಳಿಂದ ಬಾಂಧವ್ಯವಿದೆ. ನಾನು ಪ್ರೊಫೆಸರ್ ಆಗಿದ್ದಾಗಿನಿಂದಲೂ ಒಡನಾಟವಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿಯಾದ ಸಂದರ್ಭದಲ್ಲಿ ಇವರು ನಿಕಟವರ್ತಿಯಾಗಿ ಕೆಲಸ ಮಾಡಿದ್ದ ಸಹೋದರ. ಹೇಮಂತ್ ಕುಮಾರ್ ಸಮರ್ಥರಾಗಿದ್ದ ಕಾರಣದಿಂದಲೇ ಅವರು ಕುಲಪತಿಯಾಗಬೇಕೆಂದು ನಾನೂ ಬೆಂಬಲಿಸಿದ್ದೆ. ಅಷ್ಟು ಮಾತ್ರಕ್ಕೆ ಕೆಲವರು ಇಲ್ಲಸಲ್ಲದ್ದನ್ನು ಮಾತನಾಡುತ್ತಾರೆ. ರಂಗಪ್ಪ ಎಸ್(ಹೌದು) ಎಂದರೆ ಮಾತ್ರ ಹೇಮಂತ್ ಕುಮಾರ್ ಕೆಲಸ ಮಾಡುತ್ತಾರೆ. ರಂಗಪ್ಪ ಹೇಳಿದಂತೆ ನಡೆದುಕೊಳ್ಳುತ್ತಾರೆ ಎನ್ನುತ್ತಾರೆ. ಏನಾದರೂ ಶೈಕ್ಷಣಿಕ ಕಾರ್ಯವಾಗಬೇಕಿದ್ದರೆ ಕರೆ ಮಾಡಿ ಮನವಿ ಮಾಡಿರುವುದನ್ನು ಬಿಟ್ಟರೆ ನಾನು ಒಮ್ಮೆಯೂ ಹೇಮಂತ್ ಕುಮಾರ್ ಆಡಳಿತದಲ್ಲಿ ಮೂಗು ತೂರಿಸಿಲ್ಲ. ಸುಳ್ಳು ಮಾತನಾಡುವ ಕೆಟ್ಟ ಹೃದಯಗಳು ಎಲ್ಲರ ಕಾಲದಲ್ಲೂ ಇದ್ದೇ ಇರುತ್ತವೆ ಎಂದು ಹೇಳಿದರು.



ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅವರನ್ನು ವಿವಿಯ ಕ್ರಾಫರ್ಡ್ ಭವನದಲ್ಲಿ ಸೋಮವಾರ ಆತ್ಮೀಯವಾಗಿ ಅಭಿನಂದಿಸಲಾಯಿತು. ಸುತ್ತೂರು ಶ್ರೀಗಳು, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್.ನಾಗಾಭರಣ, ಶಿಕ್ಷಣ ತಜ್ಞರಾದ ಪ್ರೊ.ಎಸ್.ಎನ್.ಹೆಗ್ಡೆ, ಪ್ರೊ.ಎನ್.ಎಸ್.ರಾಮೇಗೌಡ, ಪ್ರೊ.ಎಸ್.ಆರ್.ನಿರಂಜನ ಮತ್ತಿತರರು ಉಪಸ್ಥಿತರಿದ್ದರು.

ಹೊಟ್ಟೆಕಿಚ್ಚು ಇರಬಾರದು: ಪ್ರೊ.ಹೇಮಂತ್ ಕುಮಾರ್ ಮಹಾನ್ ದೈವಭಕ್ತ, ದೇಶದ ಎಲ್ಲಾ ದೇವಾಲಯಗಳಿಗೂ ಹೋಗಿ ಬಂದಿದ್ದಾರೆ. ದೇಶದಲ್ಲೇ ಪ್ರತಿಷ್ಠಿತ ಮೈಸೂರು ವಿವಿಯ ಘನತೆಯನ್ನು ಹೆಚ್ಚಿಸುವಂತೆ, ಯಾರಿಗೂ ತೊಂದರೆಯಾಗದಂತೆ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಿಂದಿನವರು ಏನು ಮಾಡಿದ್ದರು ಎನ್ನುವುದಕ್ಕಿಂತ ತಾನು ಮಾಡಬೇಕಾದ್ದನ್ನು ಸಮರ್ಥವಾಗಿ ಪೂರೈಸಿದ್ದಾರೆ. ಹೊಟ್ಟೆಕಿಚ್ಚಿನ ವ್ಯಕ್ತಿಗಳು, ಯಾರದೋ ವಿರುದ್ಧ ಪ್ರತೀಕಾರಕ್ಕಾಗಿ ಕುಲಪತಿಗಳಾದರೆ ಅಂತಹ ವಿಶ್ವವಿದ್ಯಾಲಯಗಳು ಉಳಿಯುವುದು ಕಷ್ಟ. ತಮ್ಮದೇ ಆದ ಗುರಿಯನ್ನಿಟ್ಟುಕೊಂಡು ಕೆಲಸ ಮಾಡಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದಿಂದ ವಿದ್ಯಾರ್ಥಿಗಳು ವಿಮುಖವಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾಲಯ ಸಮರ್ಥವಾಗಿ ಮುನ್ನಡೆಯುತ್ತಿದೆ. ನಾನು 10 ದೇಶಗಳಲ್ಲಿ ಶಿಕ್ಷಣ ಪಡೆದಿದ್ದೇನೆ. ಆದರೆ ಭಾರತೀಯರಷ್ಟು ಬುದ್ಧಿಮತ್ತೆಯುಳ್ಳ ಸುಸಂಸ್ಕೃತರು ಎಲ್ಲಿಯೂ ಇಲ್ಲ. ಇದನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ವಿವಿಗಳ ಮೇಲಿದೆ ಎಂದು ಸಲಹೆ ನೀಡಿದರು.

ಹೇಮಂತ್ ಅಭಿನಂದನಾರ್ಹರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ನಟ, ನಿರ್ದೇಶಕ ಟಿ.ಎಸ್.ನಾಗಾಭರಣ ಅಭಿನಂದನಾ ನುಡಿಗಳನ್ನಾಡಿ, ಅವಕಾಶಗಳು ಹಲವರಿಗೆ ಸಿಗಬಹುದು ಆದರೆ ಕೆಲವರು ಮಾತ್ರ ಸಾಧನೆ ಮಾಡಲು ಸಾಧ್ಯ. ಅನಿರೀಕ್ಷಿತವಾಗಿ ಪ್ರೊ.ಹೇಮಂತ್ ಕುಮಾರ್ ಅವರನ್ನು ಭೇಟಿಯಾದಾಗ ಇವರ ನಗುಮುಖ, ಆತ್ಮೀಯತೆ ಕಂಡು ಎಷ್ಟೋ ವರ್ಷದ ಸ್ನೇಹಿತರಿರಬಹುದು ಅನ್ನಿಸಿತು. ಮೈಸೂರಿನಲ್ಲಿ ಹುಟ್ಟಿ ಬೆಳೆದವರಿಗೆ ಇಲ್ಲಿನ ವೈಶಿಷ್ಟ್ಯತೆಯ ಬಗ್ಗೆ ಗರ್ವ ಇರುತ್ತದೆ. ಇದನ್ನು ಉಳಿಸಿಕೊಂಡು ತಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಂಡವರಲ್ಲಿ ಪ್ರೊ.ಹೇಮಂತ್ ಕುಮಾರ್ ಅಗ್ರಸ್ಥಾನದಲ್ಲಿದ್ದಾರೆ. ಉತ್ತಮ ಆಡಳಿತ, ಶೈಕ್ಷಣಿಕ ವ್ಯವಸ್ಥೆಯ ಸುಧಾರಣೆ ನಿಟ್ಟಿನಲ್ಲಿ ಪ್ರೊ.ಹೇಮಂತ್ ಕುಮಾರ್ ಅಭಿನಂದನಾರ್ಹರು. ವಿಶ್ವವಿದ್ಯಾನಿಲಯದ ಕೆಲಸಗಳನ್ನು ಸರ್ಕಾರ ಮಟ್ಟದಲ್ಲಿ ತಾವೇ ಅಲೆದಾಡಿ ಮಾಡಿಸಿದ್ದಾರೆ. ಕೊರೊನಾ ಕಾಲಘಟ್ಟದಲ್ಲೂ ಅದ್ಭುತವಾಗಿ ಕೆಲಸ ನಿರ್ವಹಿಸಿದ್ದಾರೆ. ಪ್ರೊ.ಹೇಮಂತ್ ಕುಮಾರ್ ಅಭಿನಂದನೆ ನೆಪದಲ್ಲಿ ನಾನು ಆರಾಧ್ಯ ದೈವವಾಗಿ ಸ್ವೀಕರಿಸಿರುವ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಪಕ್ಕದಲ್ಲಿ ಕುಳಿತುಕೊಳ್ಳುವ ಅವಕಾಶ ಸಿಕ್ಕಿರುವುದು ನನ್ನ ಸಂತಸವನ್ನು ಇಮ್ಮಡಿಗೊಳಿಸಿದೆ ಎಂದು ತಿಳಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀಗಳು, ಪ್ರೊ.ಜಿ.ಹೇಮಂತ್ ಕುಮಾರ್ ಕುರಿತಾದ ಎರಡು ಅಭಿನಂದನಾ ಗ್ರಂಥಗಳನ್ನು ಬಿಡುಗಡೆ ಮಾಡಿದರು. ಇದೇ ವೇಳೆ ಪ್ರೊ.ಹೇಮಂತ್ ಕುಮಾರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಹಿರಿಯ ಶಿಕ್ಷಣ ತಜ್ಞರಾದ ಪ್ರೊ.ಎಸ್.ಎನ್.ಹೆಗ್ಡೆ, ಪ್ರೊ.ಎನ್.ಎಸ್.ರಾಮೇಗೌಡ, ಪ್ರೊ.ಎಸ್.ಆರ್.ನಿರಂಜನ, ಪ್ರೊ.ಸಿ.ನಾಗಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮಕ್ಕಳ ದಿನಾಚರಣೆ ಪ್ರಯುಕ್ತ ಶಾಲಾ ಮಕ್ಕಳಿಗೆ ಮೈಸೂರು ಮೃಗಾಲಯಕ್ಕೆ ಮಧ್ಯಾಹ್ನ 12ರವರೆಗೆ ಹಾಗೂ ದಸರಾ ವಸ್ತು ಪ್ರದರ್ಶನಕ್ಕೆ ಸಂಜೆ 4 ಗಂಟೆವರೆಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ವಸ್ತು ಪ್ರದರ್ಶನ ವೀಕ್ಷಣೆಗೆ ಬಂದಿದ್ದ ಮಕ್ಕಳಿಗೆ ಐಸ್‌ಕ್ರೀಂ ನೀಡಿ, ಮಕ್ಕಳ ದಿನದ ಶುಭಾಶಯ ತಿಳಿಸಿದರು.

ಮಕ್ಕಳ ದಿನಾಚರಣೆ ಅಂಗವಾಗಿ 'ಮುದ್ದು ಕಂದ' ಫೋಟೋ ಸ್ಪರ್ಧೆ

ಮೈಸೂರು, ನ.11(ಆರ್‌ಕೆಬಿ)– ಮಕ್ಕಳ ದಿನಾಚರಣೆ ಪ್ರಯುಕ್ತ ಮೈಸೂರಿನ ಜೀವಧಾರ ಚಾರಿಟೆಬಲ್ ಟ್ರಸ್ಟ್ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಮುದ್ದು ಕಂದ' ಫೋಟೋ ಸ್ಪರ್ಧೆ ಏರ್ಪಡಿಸಲಾಗಿದೆ. ಭಾರತದ ಯಾವುದೇ ಪ್ರಾಂತ್ಯದ ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕ ಉಡುಪನ್ನು ಧರಿಸಿ, ಆ ಪ್ರಾಂತ್ಯದ ಸಂಸ್ಕೃತಿ, ಪದ್ಧತಿಯನ್ನು ಎತ್ತಿ ಹಿಡಿಯುವ ಮಕ್ಕಳ ಸುಂದರ ಫೋಟೋಗಳನ್ನು ಕಳುಹಿಸಬಹುದು.

ಮೈಸೂರು ನಗರ ಮತ್ತು ಜಿಲ್ಲೆಯ ಸುತ್ತಮುತ್ತಲಿನ 10 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಸ್ಪರ್ಧೆಗೆ ಅವಕಾಶವಿದ್ದು, ಹೆಚ್ಚಿನ ಮಾಹಿತಿಗೆ ಮೊ.9880752727, 9844613407 ಸಂಪರ್ಕಿಸಬಹುದು.

ರೈತರಿಗೆ ಅಗತ್ಯವಿರುವ ಗಿಡಗಳ ಪೂರೈಕೆ ನರ್ಸರಿಗಳದ್ದಾಗಿದೆ

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಸುವೇದ ಸಲಹೆ



ಮೈಸೂರು, ನ.14(ಎಂಕೆ)– ಗುಣಮಟ್ಟದ ಬಹುವಾರ್ಷಿಕ ಬೆಳೆಗಳನ್ನು ನೀಡುವ ತಾಯಿ ಗಿಡಗಳನ್ನು ನರ್ಸರಿ ಮಾಡುವಂತೆ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಸುವೇದ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಮೈಸೂರಿನ ನಾಗನಹಳ್ಳಿಯಲ್ಲಿರುವ ಸಾವಯವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹಾಗೂ ವಿಸ್ತರಣಾ ಶಿಕ್ಷಣ ಘಟಕದ ಸಹಯೋಗದೊಂದಿಗೆ ಆಯೋಜಿಸಿದ್ದ 'ಗ್ರಾಮೀಣ ಯುವಕರಿಗೆ ನರ್ಸರಿ ಚಟುವಟಿಕೆ, ತಾಂತ್ರಿಕತೆ ಮತ್ತು ನಿರ್ವಹಣಾ ಕೌಶಲ್ಯ ತರಬೇತಿ ಕಾರ್ಯಾಗಾರ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಅವಶ್ಯಕತೆ ಇರುವ ಗುಣಮಟ್ಟದ ಗಿಡಗಳನ್ನು ಪೂರೈಸುವ ಜವಾಬ್ದಾರಿ ನರ್ಸರಿ ಮಾಡುವವರದ್ದಾಗಿ. ಈ ನಿಟ್ಟಿನಲ್ಲಿ ತೆಂಗು, ಮಾವು ಸೇರಿದಂತೆ ಇನ್ನಿತರೆ ತಾಯಿ ಗಿಡಗಳಿಗೆ ಹೆಚ್ಚಿನ ಆದ್ಯತೆ ನೀಡಿ ಎಂದು ತಿಳಿಸಿದರು.

ಜಮೀನಿನಲ್ಲಿ 100 ಗಿಡಗಳನ್ನು ಹಾಕಿದರೆ ಕಡೆಗೆ ಅವುಗಳಲ್ಲಿ ಉಳಿಯುವುದು 20–30 ಗಿಡಗಳಷ್ಟೇ. ಆದ್ದರಿಂದ ಗಿಡಗಳನ್ನು ಸರಿಯಾದ ರೀತಿಯಲ್ಲಿ ರಕ್ಷಣೆ ಮಾಡಬೇಕು. ಅದಕ್ಕಾಗಿ ಮೊದಲು ನರ್ಸರಿ ವಿಧಾನಗಳನ್ನು ತಿಳಿದುಕೊಳ್ಳಬೇಕು. ನರ್ಸರಿ ಕುರಿತು ಸಾಮಾನ್ಯ ಜ್ಞಾನವಿದ್ದರೂ ಉತ್ತಮ ಗಿಡಗಳನ್ನು ಬೆಳೆಸಿ, ರೈತರಿಗೆ ನೀಡಲು ಅನುಕೂಲವಾಗುತ್ತದೆ. ಗಿಡಗಳನ್ನು ಖರೀದಿ ಮಾಡಿದ ರೈತರಿಗೂ ಪ್ರಯೋಜನವಾಗುತ್ತದೆ ಎಂದು ಹೇಳಿದರು.

ವಿಸ್ತರಣಾ ಶಿಕ್ಷಣ ಘಟಕದ ಪ್ರಾಧ್ಯಾಪಕ (ಬೇಸಾಯಶಾಸ್ತ್ರ) ಡಾ.ಸಿ.ರಾಮಚಂದ್ರ ಮಾತನಾಡಿ, ನರ್ಸರಿ ಮಾಡುವ ಉದ್ದೇಶವುಳ್ಳವರಿಗಾಗಿ ವರ್ಷಕ್ಕೊಮ್ಮೆ ನರ್ಸರಿ ಕುರಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದುವರೆಗೂ ಸಾಕಷ್ಟು ಮಂದಿ ಈ ಪ್ರಾಯೋಗಿಕ ತರಬೇತಿ ಪಡೆದು ನರ್ಸರಿ ಮಾಡಿ ಯಶಸ್ಸು ಪಡೆದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಲಂಕಾರಿಕ ಹಾಗೂ ಹಣ್ಣಿನ ಗಿಡಗಳಿಗೆ ಅತೀ ಹೆಚ್ಚಿನ ಬೇಡಿಕೆ ಇದೆ. ಗುಣಮಟ್ಟದ ಗಿಡಗಳನ್ನು ರೈತರಿಗೆ ಕೊಡುವ ಉದ್ದೇಶ ತರಬೇತಿಯದ್ದಾಗಿದೆ ಎಂದು ತಿಳಿಸಿದರು.

ಸಸ್ಯ ಸಂರಕ್ಷಣೆ ಪ್ರಾಧ್ಯಾಪಕ ಡಾ.ಸಿ. ಗೋವಿಂದರಾಜು, ಸಹಾಯಕ ಪ್ರಾಧ್ಯಾಪಕರಾದ(ಮಣ್ಣು ವಿಭಾಗ) ಹೆಚ್.ಆರ್. ಉಮೇಶ್, ಹೈನುಗಾರಿಕೆ ವಿಭಾಗದ ಡಾ.ಎ. ನಾಗಮಣಿ ಮತ್ತಿತರರು ಉಪಸ್ಥಿತರಿದ್ದರು.

ವರದಕ್ಷಿಣೆ ಕಿರುಕುಳ ನೀಡಿ ಗೃಹಿಣಿ ಹತ್ಯೆ ಆರೋಪ: ಪತಿ, ಆತನ ಅಕ್ಕನ ವಿರುದ್ಧ ಕೇಸ್

ಮೈಸೂರು, ನ.14– ವರದಕ್ಷಿಣೆ ಕಿರುಕುಳ ನೀಡಿ ಪತ್ನಿಯನ್ನು ಕೊಲೆ ಮಾಡಿದ ಆರೋಪದ ಮೇರೆಗೆ ಪತಿ ಹಾಗೂ ಆತನ ಅಕ್ಕನ ವಿರುದ್ಧ ಮೈಸೂರಿನ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉದಯಗಿರಿ ನಿವಾಸಿ ತರನುಂ ಖಾನಂ (22) ಹತ್ಯೆಗೀಡಾದವಳಾಗಿದ್ದು, ಆಕೆಯ ಪತಿ ಸೈಯದ್ ಉಮರ್ ಮತ್ತು ಆತನ ಅಕ್ಕ ಶ್ರೀಮತಿ ಅಮೀನಾಬಾನು ಆರೋಪಕ್ಕೆ ಗುರಿಯಾಗಿರುವವರು.

ವಿವರ: ತರನುಂಖಾನಂನನ್ನು 2019ರ ಜು.21ರಂದು ಸೈಯದ್ ಉಮರ್‌ಗೆ ಮದುವೆ ಮಾಡಿಕೊಡಲಾಗಿತ್ತು. ಈ ವೇಳೆ ವರನ ಕಡೆಯವರು ಏಳು ಲಕ್ಷ ರೂ. ನಗದು ಹಾಗೂ ಚಿನ್ನಾಭರಣ ವರದಕ್ಷಿಣೆಯಾಗಿ ನೀಡಬೇಕೆಂದು ಕೇಳಿದ್ದು, ವಧುವಿನ ಕಡೆಯವರು 6.50 ಲಕ್ಷ ರೂ. ಹಾಗೂ ಶಕ್ತಿಯಾನುಸಾರ ಚಿನ್ನಾಭರಣ ಕೊಡುವುದಾಗಿ ಮಾತುಕತೆ ನಡೆಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮದುವೆ ವೇಳೆಯಲ್ಲಿ ವಧುವಿನ ಕಡೆಯವರು 5 ಲಕ್ಷ ರೂ. ನಗದು ಹಾಗೂ ಚಿನ್ನಾಭರಣ ಮಾತ್ರ ನೀಡಿದ್ದು, ಈ ಹಿನ್ನೆಲೆಯಲ್ಲಿ ತರನುಂಖಾನಂಗೆ ಪತಿ ಮತ್ತು ಆತನ ಅಕ್ಕ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು. ಅಲ್ಲದೆ, ಜಿಮ್ ಟ್ರೈನರ್ ಆಗಿರುವ ಸೈಯದ್ ಉಮರ್ ಹೊಸದಾಗಿ ಜಿಮ್ ಪ್ರಾರಂಭ ಮಾಡಿರುವುದರಿಂದ ಅದರ ನಿರ್ವಹಣೆಗಾಗಿ ತವರು ಮನೆಯಿಂದ ಹಣ ತರುವಂತೆ ಪತ್ನಿಯನ್ನು ಪೀಡಿಸಿ, ಹಲ್ಲೆ ನಡೆಸಿದ್ದ ಈ ಹಿನ್ನೆಲೆಯಲ್ಲಿ ತರನುಂಖಾನಂ 3 ತಿಂಗಳ ಹಿಂದೆ ತವರು ಮನೆ ಸೇರಿದ್ದಳು. ಕಳೆದ ತಿಂಗಳು ಆಕೆಯ ಮನೆಯವರು ಮಧ್ಯಸ್ಥಿಕೆದಾರರೊಂದಿಗೆ ತೆರಳಿ ಪಂಚಾಯಿತಿ ನಡೆಸಿ, ಆಕೆಯನ್ನು ಗಂಡನ ಮನೆಯಲ್ಲಿ ಬಿಟ್ಟು ಬಂದಿದ್ದರು. ಈ ನಡುವೆ ಸೈಯದ್ ಉಮರ್ ನ.10ರಂದು ರಾತ್ರಿ ಪತ್ನಿಯನ್ನು ಕೊಲೆ ಮಾಡಿದ್ದಾನೆ. ಈ ಕೊಲೆಗೆ ಆತನ ಅಕ್ಕ ಅಮಿನಾಬಾನು ಕೂಡ ಕಾರಣರಾಗಿದ್ದಾರೆ ಎಂದು ನ.11ರಂದು ನೀಡಿದ ದೂರಿನಲ್ಲಿ ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು, ನ.14– ಕೆಇಬಿ ಇಂಜಿನಿಯರ್ ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ರಮಾಬಾಯಿನಗರ ರಸ್ತೆಯಲ್ಲಿರುವ ಮುನಿಸ್ವಾಮಿನಗರದಿಂದ ವರದಿಯಾಗಿದೆ. ಕೆಇಬಿ ಇಂಜಿನಿಯರ್ ಟಿ.ಪಿ. ಶಶಿಕುಮಾರ (30) ಅವರು ಅಣ್ಣನ ಅನಾರೋಗ್ಯದ ಕಾರಣ ನ.7ರಂದು ತನ್ನ ತಾಯಿಯೊಂದಿಗೆ ಬೆಂಗಳೂರಿಗೆ ತೆರಳಿದ್ದು, ನ.13ರಂದು ಬೆಳಗ್ಗೆ ಅವರ ಎದುರು ಮನೆಯ ಮಹದೇವ ಎಂಬುವರು ಕರೆ ಮಾಡಿ ಬಾಗಿಲು ತೆರೆದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಹಿಂದಿರುಗಿದ ಶಶಿಕುಮಾರ್ ಪರಿಶೀಲಿಸಿದಾಗ ಖದೀಮರು ಮನೆ ಬೀಗ ಹಾಗೂ ಕಬೋರ್ಡ್‌ನ ಬೀಗ ಮುರಿದು 35 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾರು ಹರಿದು ಮಗು ಸಾವು

ಬೆಟ್ಟದಪುರ, ನ.14– ಕಾರು ಹರಿದು ರಸ್ತೆಯಲ್ಲಿ ಆಡವಾಡುತ್ತಿದ್ದ ಮಗು ಸಾವನ್ನಪ್ಪಿದ ಘಟನೆ ಪಿರಿಯಾಪಟ್ಟಣ ತಾಲೂಕು ಹಲಗನಹಳ್ಳಿ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ಮುತಾಹಿರ್‌ಪಾಷ ಎಂಬುವರ ಐದು ವರ್ಷದ ಪುತ್ರಿ ಹರ್ಮೈನ್‌ಸಹೇರ್ ಅಪಘಾತದಲ್ಲಿ ಮೃತಪಟ್ಟವಳಾಗಿದ್ದು, ಈಕೆ ನವೆಂಬರ್ 13ರಂದು ಮಧ್ಯಾಹ್ನ 12.10ರ ಸುಮಾರಿನಲ್ಲಿ ಅಜ್ಜಿ ಮನೆಯ ಮುಂದಿನ ರಸ್ತೆಯಲ್ಲಿ ಆಟವಾಡುತ್ತಿದ್ದಾಗ ಯತೀಶ್ಯಾಂ ಎಂಬಾತ ಚಾಲನೆ ಮಾಡಿಕೊಂಡು ಬಂದ ಟಾಟಾ ನ್ಯಾನೋ (ಕೆಎ53, ಝಡ್‌3589) ಕಾರು ಬಾಲಕಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಬಾಲಕಿಯನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ ಮೃತಪಟ್ಟಿದ್ದಾಳೆ. ಈ ಸಂಬಂಧ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನ ಸಂಪಾದನೆಯಿಂದ ಸಕಲವೂ ಸಿದ್ಧಿ

● ಸುತ್ತೂರು ಶ್ರೀಗಳ ಹಿತನುಡಿ ● ಕನಕದಾಸರ ಜಯಂತಿ, ಪ್ರತಿಭಾ ಪುರಸ್ಕಾರ

ಮೈಸೂರು, ನ.14(ಎಂಕೆ)– ಸದಾ ಸತ್ವವಂತರ ಸಂಘ, ಗಳಿಸಿದಷ್ಟು ಶ್ರೀಮಂತವಾಗುವ ಜ್ಞಾನ ಸಂಪಾದನೆ ಮೊದಲ ಆದ್ಯತೆಯಾಗಿರಬೇಕು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಕನಕದಾಸರ 535ನೇ ಜಯಂತ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜ್ಞಾನಕ್ಕೆ ಮಿತಿ ಎಂಬುದಿಲ್ಲ. ಗಳಿಸಿದಷ್ಟು ಶ್ರೀಮಂತವಾಗುತ್ತದೆ. ಅಲ್ಲದೆ ಬೇರೆಯವರು ಕಳ್ಳತನ ಮಾಡುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಜ್ಞಾನ ಸಂಪಾದನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಜ್ಞಾನ ಪಡೆಯುವ ಮಾರ್ಗದತ್ತ ಸಾಗಿದಾಗ ಪ್ರಶಸ್ತಿಗಳು ತಾನಾಗಿಯೇ ಹುಡುಕಿಕೊಂಡು ಬರುತ್ತವೆ. ವಿದ್ಯಾರ್ಥಿಗಳು ಪ್ರೋತ್ಸಾಹ ಪಡೆದು ತಮ್ಮ ತಂದೆ–ತಾಯಿಗೆ ಹಾಗೂ ವಿದ್ಯೆ ಕಲಿಸಿದ ಗುರುವಿನ ಕೃತಜ್ಞನಾಗಿರುವುದಲ್ಲದೆ ದೇಶದ ಸಂಸ್ಕೃತಿಯನ್ನು ಕಾಪಾಡುವ ಸುಸಂಸ್ಕೃತರಾಗಿ ಬಾಳಬೇಕು ಎಂದು ತಿಳಿಸಿದರು.



ಶ್ರೀ ಕಾಗಿನೆಲೆ ಕನಕ ಗುರುಪೀಠ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಮಾತನಾಡಿ, ಪೋಷಕರು ಬಹಳ ಕಷ್ಟಪಟ್ಟು ಓದಿಸುತ್ತಾರೆ. ಅವರ ಪರಿಶ್ರಮಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಿದರೆ ಪ್ರತಿಫಲ ದೊರೆತಂತೆ. ಮುಂದಿನ ದಿನಗಳಲ್ಲಿ ಎಲ್ಲರಿಗೂ ಕೆಲಸ ಸಿಗುತ್ತದೆ ಎಂಬುದು ಕಷ್ಟ, ಆದರೆ ಪ್ರಾಮಾಣಿಕ ಪ್ರಯತ್ನ ಮಾಡಿದರೆ ತಾಯಿ ಶಾರದೆ ಕೈ ಬಿಡುವುದಿಲ್ಲ ಎಂದರು.

ವಿದ್ಯೆ–ಬುದ್ಧಿಯಿಂದಷ್ಟೇ ನಾಡಿನ ಜನ ಅಭಿವೃದ್ಧಿ ಹೊಂದಲು ಸಾಧ್ಯ. ದೇಶಕ್ಕೆ ಸೇವೆ ಮಾಡಬೇಕು ಎನ್ನುವವರು ಮೊದಲು ವಿದ್ಯಾಭ್ಯಾಸ ಮಾಡಬೇಕು. ವಿಷಯ ಜ್ಞಾನವನ್ನು ಅರಿತುಕೊಳ್ಳಬೇಕು. ವಚನಗಳನ್ನು ಅಭ್ಯಾಸ ಮಾಡುವ ಮೂಲಕ ಮಹಾತ್ಮರ ಆಶೀರ್ವಾದ ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದರು.

ಮನೆಯಲ್ಲೂ ಧ್ಯಾನ ಮಾಡಿ: ಶಾಲೆಗಳಲ್ಲಿ ಧ್ಯಾನ ಮಾಡುವುದಕ್ಕಾಗಿ ಆದ್ಯತೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಶಾಲೆಯಲ್ಲೇ ಧ್ಯಾನ ಮಾಡಬೇಕು ಎಂಬುದಿಲ್ಲ. ಮನೆಯಲ್ಲೂ ಧ್ಯಾನ ಮಾಡಬಹುದು. ಧ್ಯಾನದಿಂದ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂದು ತಿಳಿಸಿಕೊಟ್ಟರು.

ಸಮಾನತೆ ಸಾರುವ ಪ್ರಯತ್ನ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಬುದ್ಧ, ಬಸವ, ಕನಕದಾಸರು, ಅಂಬೇಡ್ಕರ್ ಸೇರಿದಂತೆ ಹಲವು ಮಹಾ ಪುರುಷರು ತಮ್ಮ ವೈಜ್ಞಾನಿಕ ಚಿಂತನೆಯ ಮೂಲಕ ಸಮಾನತೆಯ ಪರಿಕಲ್ಪನೆಯನ್ನು ತಿಳಿಸಿಕೊಟ್ಟಿದ್ದಾರೆ. ಅದರಂತೆ ಜಾತಿ–ಜಾತಿ ನಡುವಿನ ಅಸಮಾನತೆಯನ್ನು ತೊಡೆದು ಹಾಕುವ ಹಾಗೂ ಸಮಾನತೆ ಸಾರುವ ನಿಟ್ಟಿನಲ್ಲಿ ಪ್ರತಿವರ್ಷ ಕನಕದಾಸರ ಜಯಂತಿಯಂದು ಹಲವು ಮಹಾತ್ಮರ ಭಾವಚಿತ್ರಗಳನ್ನು ಮೆರವಣಿಗೆ ಮಾಡಲಾಗುತ್ತಿದೆ. ಮಹಾತ್ಮರ ವಿಚಾರಗಳನ್ನು ಇಟ್ಟುಕೊಂಡು ನಮ್ಮನ್ನು ನಾವೇ ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಅದರಂತೆ ಸಮಾಜದ ಪ್ರಮುಖ ವ್ಯಕ್ತಿಗಳಾಗಿ ಬೆಳೆಯಬೇಕು ಎಂದರು.

ಅಭಿನಂದನೆ ಹಾಗೂ ಪ್ರತಿಭಾ ಪುರಸ್ಕಾರ: ಇದೇ ವೇಳೆ ಹರಿದಾಸ ಸಾಹಿತ್ಯೋತ್ಸವ ಸಮಿತಿ ಕಾರ್ಯದರ್ಶಿ ಎಸ್.ರವಿಕುಮಾರ್ ದಂಪತಿ ಹಾಗೂ ವಕೀಲ ರವಿಕುಮಾರ್ ಅವರನ್ನು ಅಭಿನಂದಿಸಲಾಯಿತು. ಹಾಗೆಯೇ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ್ದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹಿಸಲಾಯಿತು.

ಕುರುಬರ ಸಂಘದ ರಾಜ್ಯಾಧ್ಯಕ್ಷ ಟಿ.ಸುಬ್ರಹ್ಮಣ್ಯ, ನಗರ ಪಾಲಿಕೆ ಉಪ ಮೇಯರ್ ರೂಪ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಸದಸ್ಯ ಜೆ.ಗೋಪಿ, ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ಬ್ಯಾಂಕ್ ಪುಟ್ಟಸ್ವಾಮಿ, ಶಂಕರ್, ಬಸವರಾಜು, ನಾಡನಹಳ್ಳಿ ರವಿ ಮತ್ತಿತರರಿದ್ದರು.

ಒಂದನೇ ಪುಟದಿಂದ

ಕಣಕ್ಕಿಳಿಯಲು ನಿರಾಸಕ್ತಿ!

ಕಾರಣ ಕಚೇರಿ ಸಿಬ್ಬಂದಿಯೇ ಕೆಲವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಅರ್ಜಿ ಸಲ್ಲಿಸುವಂತೆ ಜ್ಞಾಪಿಸುತ್ತಿದ್ದಾರೆ. ನಿರೀಕ್ಷಿತ ಪ್ರಮಾಣದ ಅರ್ಜಿಗಳು ಬಾರದ ಕಾರಣ ಗಡುವಿನ ದಿನಾಂಕವನ್ನು ನಾಳೆ ಸಂಜೆ ವಿಸ್ತರಿಸಲು ಅಧ್ಯಕ್ಷರು ತೀರ್ಮಾನಿಸಿದ್ದಾರೆ.

ಇದುವರೆಗೂ ಬಂದಿರುವ ಅರ್ಜಿಗಳಲ್ಲಿ ಬಹುತೇಕ ಹಾಲಿ ಶಾಸಕರು, ಮತ್ತೆ ಸ್ಪರ್ಧಿಸಲು ಅವಕಾಶ ಕೋರಿದ್ದಾರೆ. ಅದರಲ್ಲೂ ಕೆಲವು ಪ್ರಭಾವಿಗಳಂತೂ ತಮಗೊಂದು, ತಮ್ಮ ಮಗ ಇಲ್ಲವೇ ಮಗಳಿಗೆ ಮತ್ತೊಂದು ಕ್ಷೇತ್ರದಲ್ಲಿ ಅವಕಾಶ ನೀಡಿ ಎಂದು ಅರ್ಜಿ ಸಲ್ಲಿಸಿದ್ದಾರೆ. ಕಾಂಗ್ರೆಸ್‌ನ ಹಿರಿಯ ಮುತ್ಸದ್ದಿ ಶಾಮನೂರು ಶಿವಶಂಕರಪ್ಪ (92) ಇಳಿವಯಸ್ಸಿನಲ್ಲೂ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಲು ಮತ್ತೆ ಅರ್ಜಿ ಸಲ್ಲಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕನಕಪುರದಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ್ದರೆ, ರಾಷ್ಟ್ರೀಯ ರಾಜಕಾರಣದಲ್ಲಿರುವ ಕೆಲವು ನಾಯಕರು ರಾಜ್ಯ ರಾಜಕಾರಣಕ್ಕೆ ಬರುವ ಆಸಕ್ತಿ ಹೊಂದಿದ್ದಾರೆ.

ಲೋಕಸಭೆಯನ್ನು ಏಳು ಬಾರಿ ಪ್ರತಿನಿಧಿಸಿ, ಕೇಂದ್ರದಲ್ಲಿ ಸಚಿವರಾಗಿದ್ದ ಕೆ.ಎಚ್. ಮುನಿಯಪ್ಪ, ದೇವನಹಳ್ಳಿ ಇಲ್ಲವೆ ಬಂಗಾರಪೇಟೆಯಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ್ದಾರೆ. ಇದೇ ರೀತಿ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಮೈಸೂರು ಜಿಲ್ಲೆಯ ನಂಜನಗೂಡಿನಿಂದ ಟಿಕೆಟ್ ಕೇಳಿದ್ದಾರೆ. ಆಶ್ಚರ್ಯವೆಂದರೆ ಇದೇ ಕ್ಷೇತ್ರದಿಂದ ತಮಗೆ ಟಿಕೆಟ್ ನೀಡಬೇಕೆಂದು ಹಿರಿಯ ನಾಯಕ ಹಾಗೂ ಮಾಜಿ ಸಚಿವ ಡಾ. ಮಹದೇವಪ್ಪ ಅರ್ಜಿ ಗುಜರಾಯಿಸಿದ್ದಾರೆ. ಅಷ್ಟೇ ಅಲ್ಲ ತಮ್ಮ ಪುತ್ರ ಸುನೀಲ್ ಬೋಸ್‌ಗೆ ಟಿ. ನರಸೀಪುರದಿಂದ ಟಿಕೆಟ್ ಕೇಳಿದ್ದಾರೆ. ದಿವಂಗತ ಮಂಚನಹಳ್ಳಿ ಮಹದೇವ ಅವರ ಪುತ್ರಿ, ಎಐಸಿಸಿ ವಕ್ತಾರೆ ಐಶ್ವರ್ಯ ಮಹದೇವ್, ಕೆ.ಆರ್. ನಗರದಿಂದ ಸ್ಪರ್ಧಿಸಲು ಬಯಸಿದ್ದರೆ, ಮಾಜಿ ಸಚಿವ ಹಾಗೂ ಹಾಲಿ ಶಾಸಕ ಶಿವಾನಂದ ಪಾಟೀಲ್ ಈ ಬಾರಿ ತಾವು ವಿಜಯಪುರದಿಂದ ಸ್ಪರ್ಧಿಸಲು ಟಿಕೆಟ್ ಕೇಳಿದ್ದಾರೆ. ತಾವು ಇದುವರೆಗೂ ಪ್ರತಿನಿಧಿಸುತ್ತಿದ್ದ ಬಸವನಬಾಗೇವಾಡಿಯಲ್ಲಿ ಪುತ್ರಿ ಸಂಯುಕ್ತ ಪಾಟೀಲ್‌ಗೆ ಅವಕಾಶ ಮಾಡಿಕೊಡಿ ಎಂದು ಅರ್ಜಿ ಹಾಕಿದ್ದಾರೆ.

ಚಿತ್ರನಟಿ ಭಾವನಾ ಯಶವಂತಪುರದಿಂದ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿನಿಧಿಸುತ್ತಿರುವ ಬಾದಾಮಿಯಲ್ಲಿ ಮಾಜಿ ಸಚಿವ ಚಿಮ್ಮನಕಟ್ಟಿ ಹಾಗೂ ಅವರ ಪುತ್ರ ಭೀಮಸೇನ್ ಟಿಕೆಟ್ ಬಯಸಿದ್ದಾರೆ. ಬಂದಿರುವ ಅರ್ಜಿಗಳಲ್ಲಿ ಪ್ರಭಾವಿಗಳು ತಮಗೂ ಟಿಕೆಟ್ ಬಯಸಿ, ತಮ್ಮ ಕುಟುಂಬದವರಿಗೂ ಅವಕಾಶ ಮಾಡಿಕೊಡುವಂತೆ ಪಕ್ಷವನ್ನು ವಿನಂತಿಸಿದ್ದಾರೆ. ಬ್ಯಾಂಕ್‌ಗಳಿಗೆ ಸತತ ರಜೆ ಬಂದಿದ್ದರಿಂದ ಆಕಾಂಕ್ಷಿಗಳು ನಿಗದಿತ ಹಣದ ಡಿಡಿ ಪಡೆದು ಅರ್ಜಿ ಸಲ್ಲಿಸಲು ಸಾಧ್ಯವಾಗದ ಕಾರಣ ಸಮಯವನ್ನು ವಿಸ್ತರಿಸುತ್ತಿರುವುದಾಗಿ ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಮೊದಲ ನಿಗದಿಯಂತೆ ನಾಳೆ ಸಂಜೆ 5 ಗಂಟೆಗೆ ಅವಧಿ ಕೊನೆಗೊಳ್ಳಲಿದೆ. ಆ ವೇಳೆಗೆ ಎಷ್ಟು ಅರ್ಜಿಗಳು ಬರುತ್ತವೆ ಎಂದು ಕಾದುನೋಡಬೇಕು.

ನನ್ನ ಸ್ಪರ್ಧೆ ನಿರ್ಧರಿಸುವುದು 'ಹೈಕಮಾಂಡ್'

ಹೆಚ್.ಎನ್.ವ್ಯಾಲಿ ಎಂಬ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಕೋಲಾರ ಹಾಗೂ ಚಿಕ್ಕ ಬಳ್ಳಾಪುರದಲ್ಲಿ ಸೀವೇಜ್ ಪ್ಲಾಂಟ್ ನಿರ್ಮಿಸಿ, ಶುದ್ಧೀಕರಿಸಿದ ಚರಂಡಿ ನೀರನ್ನು ಕೆರೆಗಳಿಗೆ ತುಂಬಿಸಲಾಯಿತು. ಅಂತರ್ಜಲ ಅಭಿವೃದ್ಧಿ ಮಾಡುವ ಏಕೈಕ ಉದ್ದೇಶ ದಿಂದ ಈ ಯೋಜನೆ ಜಾರಿಗೊಳಿಸಲಾಗಿತ್ತು. ಇದುವರೆಗೆ ಯಾವ ಸರ್ಕಾರವೂ ಇಂತಹ ಯೋಜನೆಯನ್ನು ಜಾರಿಗೊಳಿಸಿರಲಿಲ್ಲ. ಆದರೆ ನಮ್ಮ ಸರ್ಕಾರದ ಅವಧಿಯಲ್ಲಿ ಕೈಗೊಂಡ ಯೋಜನೆಗಳಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಅಂತರ್ಜಲ ಉತ್ತಮವಾಗಿದೆ, 50 ರಿಂದ 60 ಅಡಿಗಳಲ್ಲೇ ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿದೆ. ಈ ವಿಷಯ ತಿಳಿದು ನನಗೆ ವೈಯಕ್ತಿಕವಾಗಿ ಖುಷಿಯಾಯಿತು ಎಂದರು.

ಹೈಕಮಾಂಡ್ ನಿರ್ಧಾರಕ್ಕೆ ಬದ್ಧ: ಮುಂಬರುವ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂದು ಇನ್ನೂ ನಿರ್ಧಾರ ಮಾಡಿಲ್ಲ. ಸಾಕಷ್ಟು ಕ್ಷೇತ್ರಗಳಿಂದ ಆಹ್ವಾನ ಬರುತ್ತಿವೆ. ಜನ ಪ್ರೀತಿಯಿಂದ ನಮ್ಮ ಕ್ಷೇತ್ರಕ್ಕೆ ಬನ್ನಿ ಎಂದು ಕರೆಯುತ್ತಿದ್ದಾರೆ. ಆದರೆ, ನಾನು ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬುದನ್ನು ನಿರ್ಧರಿಸಲು ಹೈಕಮಾಂಡ್‌ಗೆ ಬಿಟ್ಟಿದ್ದೇನೆ. ಹೈಕಮಾಂಡ್ ಸೂಚಿಸಿದ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ ಎಂದು ತಿಳಿಸಿದರು.

ನಿಜವಾದ ಜನ ನಾಯಕನ ಲಕ್ಷಣ: ರಾಜ್ಯದ 224 ಕ್ಷೇತ್ರಗಳಲ್ಲಿ ಯಾವ ಕ್ಷೇತ್ರದಲ್ಲಾದರೂ ನಿಲ್ಲುತ್ತೇನೆ ಎನ್ನುವುದು ನಿಜವಾದ ಜನನಾಯಕನ ಲಕ್ಷಣ ಎಂದು ಹೇಳುವ ಮೂಲಕ ಕ್ಷೇತ್ರ ಹುಡುಕಾಟದ ಬಗ್ಗೆ ಟೀಕಿಸುತ್ತಿರುವ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು. ಪ್ರಜಾಪ್ರಭುತ್ವದಲ್ಲಿ ಯಾರು, ಎಲ್ಲಿ ಬೇಕಾದರೂ ಸ್ಪರ್ಧಿಸುವ ಅವಕಾಶ ಇದೆ. ಅಂತೆಯೇ, ನಾನು ಜನ ಬಯಸಿದ ಕಡೆ ಸ್ಪರ್ಧೆ ಮಾಡುತ್ತೇನೆ. ಕೋಲಾರದವರು ಬಯಸಿದರೆ ಕೋಲಾರ, ವರುಣಾ ಕ್ಷೇತ್ರದ ಜನ ಬಯಸಿದರೆ ವರುಣಾದಲ್ಲಿ ಸ್ಪರ್ಧಿಸುತ್ತೇನೆ. ಟೀಕಿಸುತ್ತಿರುವ ಬಿಜೆಪಿಗರು ತಮ್ಮ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುವ ಧೈರ್ಯ ಮಾಡುತ್ತಾರಾ ಎಂದು ಪ್ರಶ್ನಿಸಿದರಲ್ಲದೆ, ಎಲ್ಲಿ ಬೇಕಾದರೂ ಚುನಾವಣೆಗೆ ನಿಲ್ಲುವವನು ಮಾತ್ರ 'ನಾಯಕ' ಎನ್ನುವುದನ್ನು ಬಿಜೆಪಿ ಮುಖಂಡರು ಮನವರಿಕೆ ಮಾಡಿಕೊಳ್ಳಬೇಕು ಎಂದು ಸೂಚ್ಯವಾಗಿ ಟೀಕಾಕಾರರಿಗೆ ಮಾರ್ಮಿಕವಾಗಿ ಉತ್ತರಿಸಿದರು.

ಕುಮಾರಸ್ವಾಮಿ ಎಲ್ಲಿದ್ದರು?: ಸಿದ್ದರಾಮಯ್ಯ ಅವರಿಗೆ ಎರಡು ಸಲ ರಾಜಕೀಯವಾಗಿ ಪುನರ್ಜನ್ಮ ಕೊಟ್ಟೆ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನಾನು 8 ಚುನಾವಣೆ ಗೆಲ್ಲುವಾಗ ಕುಮಾರಸ್ವಾಮಿ ಎಲ್ಲಿದ್ದರು? ಕುಮಾರಸ್ವಾಮಿ ರಾಜಕೀಯಕ್ಕೆ ಬಂದಿದ್ದು ಯಾವಾಗ? 1996ರಲ್ಲಿ ಅವರು ರಾಜಕೀಯಕ್ಕೆ ಬಂದರು. ನಾನು ಅಲ್ಲಿಯವರೆಗೆ ಚುನಾವಣೆ ಗೆದ್ದಿರಲಿಲ್ವೇ? ನಾನು ಪ್ರಚಾರಕ್ಕೆ ಹೋಗದೇ ಇದ್ದರಿಂದ ಸಿದ್ದರಾಮಯ್ಯ ಗೆದ್ದರು ಎಂಬ ಅವರ ಮಾತಿನಲ್ಲಿ ಅರ್ಥವಿಲ್ಲ. ಇದು ಬಾಲಿಶ ಹೇಳಿಕೆ. ನನಗೆ ಮತ ಹಾಕಿ ಗೆಲ್ಲಿಸಿದ ಮತದಾರರಿಗೆ ಮಾಡಿದ ಅವಮಾನ ಎಂದು ಕಿಡಿಕಾರಿದರು.

ಪ್ರಜಾಪ್ರಭುತ್ವ ವಿರೋಧಿ ನಡವಳಿಕೆ: ಶಾಸಕ ಪ್ರಿಯಾಂಕ ಖರ್ಗೆ ಅವರಿಗೆ ಬೆದರಿಕೆ ಹಾಕಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಸಾಹಿತಿಗಳು, ಚಿಂತಕರು, ಪತ್ರಕರ್ತರು, ಪ್ರತಿಪಕ್ಷದವರಿಗೆ ಬೆದರಿಕೆ ಹಾಕುವುದು ಒಳ್ಳೆಯ ಬೆಳವಣಿಗೆಯಲ್ಲ. ಬಿಜೆಪಿಯವರು ಮೊದಲಿನಿಂದಲೂ ಇಂಥವುಗಳನ್ನು ಪೋಷಿಸಿಕೊಂಡು ಬರುತ್ತಿದ್ದಾರೆ. ಕೇಂದ್ರ ಸರ್ಕಾರವೇ ಇದರ ಪರವಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ ಇವರೆಲ್ಲ ಇದರ ಭಾಗವಾಗಿದ್ದಾರೆ. ಇದು ಸರ್ವಾಧಿಕಾರಿ ಧೋರಣೆ ಪ್ರಯತ್ನ. ಸಂವಿಧಾನದ 19ನೇ ವಿಧಿಯಡಿ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಆದರೆ, ಭಯ ಹುಟ್ಟಿಸುವ ಮೂಲಕ ಬಿಜೆಪಿಯವರು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಮಾಡುತ್ತಿದ್ದಾರೆ. ಸೇಡಿನ ರಾಜಕಾರಣದ ಮೂಲಕ ಸಂವಿಧಾನದ ಎಲ್ಲಾ ಹಕ್ಕು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇದೇನಾ ಇವರ ಅಜೆಂಡಾ: ಸರ್ಕಾರಿ ಶಾಲಾ ಕಟ್ಟಡಗಳಿಗೆ ಕೇಸರಿ ಬಣ್ಣ ಬಳಿಯುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಬಣ್ಣ ಬಳಿಯಲು ಖರ್ಚು ಮಾಡುತ್ತಿರುವುದು ಜನರ ದುಡ್ಡು, ಬಿಜೆಪಿಯದ್ದಲ್ಲ. ಜನರು ಶಾಲೆಯನ್ನೂ ಕೇಸರೀಕರಣ ಮಾಡುವಂತೆ ಹೇಳಿದ್ದಾರೆಯೇ? ಇಷ್ಟ ಬಂದಂತೆ ಅಧಿಕಾರ ಮಾಡಬಾರದು. ಅದು ಜನ ಮತ್ತು ಸಂವಿಧಾನ ವಿರೋಧಿ. ಇವರು ಈ ರೀತಿ ಮಾಡುತ್ತೀವಿ ಅಂತ ಅಧಿಕಾರಕ್ಕೆ ಬಂದಿದ್ದರಾ? ಹಿಂಬಾಗಿಲ ಮೂಲಕ ಅಧಿಕಾರಕ್ಕೆ ಬಂದವರು ಬಿಜೆಪಿಯವರು ಎಂದು ಹರಿಹಾಯ್ದರು.

ನಿರ್ಮಾಣ ತೆರವಿಗೆ ಪಾಲಿಕೆ ಸಿದ್ಧತೆ

ವಿಳಂಬವಾಗಿತ್ತು. ಇದೀಗ ಪಕ್ಕದ ಮನೆಯವರಿಗೆ ಅಧಿಕೃತವಾಗಿ 24 ಗಂಟೆಗಳ ನೋಟಿಸ್ ನೀಡಲಾಗಿದೆ. ಪಾಲಿಕೆ ಸಿಬ್ಬಂದಿ ಮೊದಲ ಹಂತವಾಗಿ ಸೋಮವಾರ ಮಾದಪ್ಪ ಅವರ ಮನೆಯ ಅನಧಿಕೃತ ಭಾಗ ಗುರುತು ಮಾಡಲಾಗಿದೆ. ನಾಳೆ ಅಥವಾ ಅದರ ಮರುದಿನ ಗುರುತು ಹಾಕಿರುವ ಪ್ರಕಾರ ತೆರವು ಮಾಡಲಾಗುವುದು ಎಂದರು. ತೆರವಿಗೆ ಅಗತ್ಯವಿರುವ ಯಂತ್ರೋಪಕರಣಗಳು ಮತ್ತು ಇತರ ಉಪಕರಣಗಳು ಸೇರಿದಂತೆ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಅವರು ಹೇಳಿದರು.

ನೆರೆಮನೆಯ ಮಾದಪ್ಪ ಎಂಬುವರು ಮನೆ ನಿರ್ಮಿಸುವ ವೇಳೆ ಸೆಟ್‌ಬ್ಯಾಕ್ ಬಿಡದೇ, ನಿರ್ಮಾಣ ಮಾಡಿ ನಿಯಮ ಉಲ್ಲಂಘಿಸಿದ್ದಾರೆ ಎಂದು ಪಕ್ಕದ ಮನೆಯ ಆರ್.ಎನ್.ಕುಲಕರ್ಣಿ ಪಾಲಿಕೆಗೆ ದೂರು ನೀಡಿದ್ದರು. ಪ್ರಯೋಜನವಾಗದ ಹಿನ್ನೆಲೆಯಲ್ಲಿ ಅವರು ಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ಸೂಚನೆಯಂತೆ ನ.2ರಂದು ಪಾಲಿಕೆಯು ಅಕ್ರಮ ಭಾಗ ತೆರವುಗೊಳಿಸುವಂತೆ ನೋಟೀಸ್ ನೀಡಿತ್ತು. ಇದರಿಂದ ಆಕ್ರೋಶಗೊಂಡಿದ್ದ ಮಾದಪ್ಪನ ಪುತ್ರ ಮನು ಹಾಗೂ ಆತನ ಸ್ನೇಹಿತ ವರುಣ್‌ಗೌಡ ಸೇರಿ ನ.4ರಂದು ಕುಲಕರ್ಣಿ ಅವರನ್ನು ಕಾರು ಡಿಕ್ಕಿ ಹೊಡಿಸಿ, ಅವರ ಹತ್ಯೆ ಮಾಡಿದ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಬಿ.ರಮೇಶ್ ನೂತನ ಪೊಲೀಸ್ ಆಯುಕ್ತ

ನಿಯೋಜಿಸಿ ಸರ್ಕಾರ ಇಂದು ಸಂಜೆ ಆದೇಶ ಹೊರಡಿಸಿದೆ. ಇವರು ಬುಧವಾರ ಅಧಿಕಾರ ವಹಿಸಿಕೊಳ್ಳುವರು ಎಂದು ತಿಳಿದುಬಂದಿದೆ. 2020ರ ಫೆಬ್ರವರಿ 1ರಂದು ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿದ್ದ 2006ನೇ ತಂಡದ ಐಪಿಎಸ್ ಅಧಿಕಾರಿ ಡಾ. ಚಂದ್ರಗುಪ್ತ, ಕೋವಿಡ್-19 ಸಂಕಷ್ಟ ಪರಿಸ್ಥಿತಿಯಲ್ಲಿ ಲಾಕ್‌ಡೌನ್, ವೀಕೆಂಡ್ ನಿರ್ಬಂಧಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಲ್ಲದೇ, ರಾಷ್ಟ್ರಪತಿ, ಪ್ರಧಾನಮಂತ್ರಿಗಳೂ ಸೇರಿದಂತೆ ಗಣ್ಯರ ಮೈಸೂರು ಭೇಟಿ, ದಸರಾ ಮಹೋತ್ಸವ, ಎಂಎಲ್‌ಸಿ ಚುನಾವಣೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು.

ಅಪರಾಧ ನಿಯಂತ್ರಣ ಮತ್ತು ಪತ್ತೆ ಕಾರ್ಯ, ಸುಗಮ ಸಂಚಾರದ ಜಾಗೃತಿ ಮತ್ತು ಜಾರಿ ಮೂಲಕ ಮೈಸೂರಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವುದಲ್ಲದೇ, ಅಪಘಾತಗಳ ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡಿದ್ದ ಡಾ. ಚಂದ್ರಗುಪ್ತ, ಜನಪ್ರತಿನಿಧಿಗಳು, ಅಧೀನಾಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮರ್ಥವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ಮೈಸೂರು ನಗರದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಿದ್ದರು. ಕೆಂಪಯ್ಯ, ಸಿ. ಚಂದ್ರಶೇಖರ್ ಬಿಟ್ಟರೆ ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಅಧಿಕ ಸಮಯ ಕಾರ್ಯನಿರ್ವಹಿಸಿದ ಹೆಗ್ಗಳಿಕೆಗೆ ಡಾ. ಚಂದ್ರಗುಪ್ತ ಪಾತ್ರರಾಗಿದ್ದಾರೆ.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹಕ್ಕೆ ಚಾಲನೆ

ನಾಲ್ವಡಿ, ಡಾ.ಎಸ್.ಆರ್.ರಂಗನಾಥನ್ ಪುತ್ಥಳಿ ಅನಾವರಣ



ಮೈಸೂರು, ನ.14(ಆರ್‌ಕೆಬಿ)- ಮೈಸೂರಿನ ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್ ನಗರ ಕೇಂದ್ರ ಗ್ರಂಥಾಲಯದಲ್ಲಿ ಸೋಮವಾರ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಗ್ರಂಥಾಲಯದ ನೆಲ ಅಂತಸ್ತಿನಲ್ಲಿ ಮೈಸೂರಿನಲ್ಲಿ ಗ್ರಂಥಾಲಯ ಸ್ಥಾಪನೆಗೆ ಕಾರಣರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಮೇಲಂತಸ್ತಿನಲ್ಲಿ ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಅವರ ಪುತ್ಥಳಿಯನ್ನು ಸಹ ಶಾಸಕರು ಅನಾವರಣಗೊಳಿಸಿದರು. ಇದೇ ವೇಳೆ ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರ ವ್ಯಾಪ್ತಿಯ ವಿವಿಧ ಶಾಖಾ ಗ್ರಂಥಾಲಯಗಳ ಟೋಪೋಗ್ರಫಿಯನ್ನು ಅನಾವರಣಗೊಳಿಸಲಾಯಿತು.

ನಗರ ಮತ್ತು ಜಿಲ್ಲಾ ಗ್ರಂಥಾಲಯಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಉಪಮೇಯರ್ ಡಾ.ಡಿ.ರೂಪಾ, ಕಾರ್ಪೊರೇಟರ್ ಸತೀಶ್, ನಗರ ಕೇಂದ್ರ ಗ್ರಂಥಾಲಯ ಪ್ರಾಧಿಕಾರದ ಸದಸ್ಯೆ ಶಾಂತಕುಮಾರಿ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ರಮೇಶ್ ನರಸಯ್ಯ, ನಗರ, ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಬಿ.ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ನ.20ರವರೆಗೆ ನಡೆಯುವ ಗ್ರಂಥಾಲಯ ಸಪ್ತಾಹದ ಸಂದರ್ಭದಲ್ಲಿ ವಿವಿಧ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಚಿತ್ರಕಲೆ ಮತ್ತು ಭಿತ್ತಿಚಿತ್ರ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ವಿಜೇತರ ವಿವರ: 1ರಿಂದ 5ನೇ ತರಗತಿ ವಿಭಾಗ: ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನ ಸಿ.ಈಶಾನ್ (ಪ್ರಥಮ), ಕೇಂದ್ರೀಯ ವಿದ್ಯಾಲಯದ ಸಾನ್ವಿರಾಜ್ (ದ್ವಿತೀಯ), ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆರ್.ಸ್ಫೂರ್ತಿ (ತೃತೀಯ).

4ರಿಂದ 6ನೇ ತರಗತಿ ವಿಭಾಗ: ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಂಕೇತ್ (ಪ್ರಥಮ), ಸೆಂಟ್ ಜೋಸೆಫ್ ಶಾಲೆಯ ಪಿ.ಮಯೂರ್ (ದ್ವಿತೀಯ), ಸೇಂಟ್ ಜೋಸೆಫ್ ಸೆಂಟರ್ ಶಾಲೆಯ ಲೈಬ ಹುರೇನ್ (ತೃತೀಯ).

7ರಿಂದ 10ನೇ ತರಗತಿ ವಿಭಾಗ: ಉದ್ಬೂರು ಸರ್ಕಾರಿ ಪ್ರೌಢಶಾಲೆಯ ಮಮತಾ (ಪ್ರಥಮ), ಗುಡ್ ಶೆಫರ್ಡ್ ಕಾನ್ವೆಂಟ್‌ನ ಆರ್.ಸಿದ್ದರಾಜು (ದ್ವಿತೀಯ), ಬಂಟುವಾಲ್ ಮಾಧವಶೆಣೈ ಪ್ರೌಢಶಾಲೆಯ ಎಂ.ಆರ್.ಭೂಮಿಕಾ (ತೃತೀಯ).

ಮಾಸ್ಟರ್ ಮತ್ತು ಕಾಲೇಜು ವಿಭಾಗ: ವಿಜಯ ವಿಠಲ ಪಿ.ಯು.ಕಾಲೇಜಿನ ನೇಹಾ ಜಯದೇವ್ (ಪ್ರಥಮ), ಜೆಎಸ್‌ಎಸ್ ಡೆಂಟಲ್ ಕಾಲೇಜಿನ ಕುಲ್‌ಸುಮ್ ಫಾತಿಮಾ (ದ್ವಿತೀಯ), ಮಹಾರಾಣಿ ಕಲಾ ಕಾಲೇಜಿನ ಜಿ.ಶರಣ್ಯ (ತೃತೀಯ) ಬಹುಮಾನಗಳನ್ನು ಪಡೆದಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿವಿಧ ಹುದ್ದೆಗಳಿಗೆ ನೇಮಕಗೊಂಡವರು: ಮೈಸೂರಿನ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಶಾಖೆ ಹಾಗೂ ವಿವಿಧ ಶಾಖಾ ಗ್ರಂಥಾಲಯಗಳ ಉಪಯೋಗ ಪಡೆದುಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿವಿಧ ಇಲಾಖೆಗಳಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ.

ಶಿಕ್ಷಣ ಇಲಾಖೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಆರ್.ಯೋಗಲಕ್ಷ್ಮಿ, ಮನೋಜ್‌ಕುಮಾರ್, ಕೊಲೇಜಿಯೇಟ್ ಎಜುಕೇಷನ್ ಡಿಪಾರ್ಟ್‌ಮೆಂಟ್ (2017ರ ಬ್ಯಾಚ್), ಸಹಾಯಕ ಪ್ರಾಧ್ಯಾಪಕರಾಗಿ ನೇಮಕ, ಕೆ.ವಿ.ಸತೀಶ್, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ (2013ರ ಬ್ಯಾಚ್), ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ನೇಮಕ, ಎಂ.ಜಿ.ಮುರಳಿ, ಕಾಲೇಜು ಶಿಕ್ಷಣ ಇಲಾಖೆ ಉಡುಪಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕ, ಜೆ.ರಾಹುಲ್, ಕಂದಾಯ ಇಲಾಖೆಯ ಪ್ರಥಮ ದರ್ಜೆ ಸಹಾಯಕರಾಗಿ ನೇಮಕ, ಆರ್.ಸಿದ್ಧರಾಜು, ಪುತ್ತೂರಿನಲ್ಲಿ ನ್ಯಾಯಾಂಗ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕ, ಕೆ.ಎಂ.ಉಮಾಮಹೇಶ್ವರಿ, ತಾಂತ್ರಿಕ ಶಿಕ್ಷಣ ಇಲಾಖೆಯ ಕಚೇರಿ ಅಧೀಕ್ಷಕರಾಗಿ ನೇಮಕ.

ವಿದ್ಯಾರ್ಥಿಗಳಿಗೆ ಗಿಡಗಳ ಬಗ್ಗೆ ಕನಿಷ್ಠ ಪರಿಕಲ್ಪನೆಯೂ ಇಲ್ಲ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ವಿಷಾದ



ಮೈಸೂರು, ನ.14(ಎಸ್‌ಪಿಎನ್)- ನಗರದಲ್ಲಿನ ಇಂದಿನ ವಿದ್ಯಾರ್ಥಿಗಳಿಗೆ ಉದ್ಯಾನವನ ಏತಕ್ಕಾಗಿ ನಿರ್ಮಿಸಲಾಗುತ್ತಿದೆ. ಇಲ್ಲಿ ಯಾವ ಗಿಡಗಳನ್ನು ಹಾಕುತ್ತಾರೆ ಎಂಬ ಪರಿಕಲ್ಪನೆಯೇ ಇಲ್ಲ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಸುಮಾ ಸೋಪಾನ ಉದ್ಯಾನವನದಲ್ಲಿ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಮಕ್ಕಳ ದಿನಾಚರಣೆ ಮತ್ತು ಲಕ್ಷವೃಕ್ಷ ಆಂದೋಲನ ಶೀರ್ಷಿಕೆಯಡಿ ಪರಿಸರ ಜಾಗೃತಿ ಕುರಿತು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಕೊರೊನಾ ಸಂದರ್ಭದಲ್ಲಿ ಆಕ್ಸಿಜನ್ ಕೊರತೆಯಿಂದಾಗಿ ಸಾವಿರಾರು ಜನ ಪ್ರಾಣಬಿಟ್ಟಿದ್ದಾರೆ. ಶುದ್ಧಗಾಳಿ ಬೇಕೆಂದರೆ, ತಮ್ಮತಮ್ಮ ಮಹಡಿಯ ಮೇಲೆ ಓಡಾಡಿದರೆ, ಶುದ್ಧಗಾಳಿ ಸಿಗುತ್ತದೆ ಎಂಬ ತಪ್ಪು ಕಲ್ಪನೆ ಅನೇಕರಲ್ಲಿದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಗಿಡ-ಮರ, ನೆಲ-ಜಲ, ನಿಸರ್ಗ ಕುರಿತು ಪ್ರೀತಿ ಬೆಳೆಸಿಕೊಳ್ಳಬೇಕು. ಇದಕ್ಕೆ ಪೂರಕವಾಗಿ ಪೋಷಕರು ಸಹಕರಿಸುವಂತೆ ಮನವಿ ಮಾಡಿದರು.

ಉದ್ಯಾನವನದಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸುವುದರಿಂದ ಉದ್ಯಾನವನದಲ್ಲಿ ಅಲಂಕಾರಿಕ ಗಿಡಗಳು, ಜಿಮ್ ಪರಿಕರಗಳು, ಮಕ್ಕಳ ಆಟ ಸಾಮಗ್ರಿಗಳು ಚಿತ್ರಗಳನ್ನು ಬಿಡಿಸುತ್ತಾರೆ. ಇದರಿಂದ ಉದ್ಯಾನವನ ಬಳಕೆ ಬಗ್ಗೆ ಅರಿವು ಮೂಡುತ್ತದೆ ಎಂದರು.

ಈ ಸ್ಪರ್ಧೆಯಲ್ಲಿ ಕೆ.ಅಭಿಂಜನ (ಪ್ರ) 3 ಸಾವಿರ ನಗದು ಬಹುಮಾನ, ಶ್ರೀ ಸ್ಕಂದ ಆರ್.ಆಚಾರ್ಯ(ದ್ವಿ) 2 ಸಾವಿರ ನಗದು ಬಹುಮಾನ ಹಾಗೂ ಅಭಿ (ತೃ) ಸಾವಿರ ರೂ. ನಗದು ಬಹುಮಾನ ಹಾಗೂ ಇನ್ನುಳಿದ 51 ಮಂದಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಆರ್.ರವೀಂದ್ರ, ಸಿ.ಎಸ್.ವಿಸ್ಮಯಿ, ಪಿ.ಪ್ರಜ್ವಲ್ ಜೋಸೆಫ್, ಕೆ.ಎಸ್.ಜೀವನ್‌ಗೌಡ, ಎಂ.ಪೃಥ್ವಿ ಡಿ.ನೂತನ್, ರೇವತಿ, ಎಸ್.ಭಾವನ, ಎನ್.ಯಷಿಕಾ, ನವ್ಯಶ್ರೀ, ಚರಣ್, ಬಿ.ರಂಜಿತ್, ಜೆ.ನಿಕೇಶ್, ಎಂ.ಯೋಗೇಶ್ವರಿ, ಕೆ. ಅಭಿಜ್ಞಾ, ತೇಜಸ್ವಿ ಎಂ.ಕುಮಾರ್, ಎಸ್.ಕೆ.ಪೂರ್ವಿ, ಎಸ್. ಉತ್ಸವ್, ಎಸ್.ಕೀರ್ತನಾ, ಎಂ.ತಾನ್ವ ವಿಚೇತನ್, ಎಂ.ಜೆ.ಲಕ್ಷ್ಮೀಕಾಂತ, ಎನ್. ಈಶಾನ್ವಿ, ಪಿ.ಸಂಜನಾ, ಎಂ.ನಿಶಾಂತ್, ಜಿ.ನಿಶಾಂತ, ಜಿ.ವರ್ಷಿನಿ, ಕೆ.ಮನು, ಜಿ. ಚಂದನ ಗೌಡ, ಎಸ್.ವಿ. ಶಿವರಾಜ್, ಸಿ. ಆರ್ಯನ್, ಎಸ್.ಲಕ್ಷ್ಮೀ, ಎಂ.ಗೌತಮ್, ಕೆ.ಮನೋಜ್, ಎಸ್.ಎಸ್.ಸೂರಜ್ ಶ್ರೀನಿವಾಸ್, ಎಲ್.ಲೋಹಿತಾಶ್ವ ಎಸ್. ವರ್ಷಿತಾ, ಕೆ.ಕುಶಾಲ್, ಸಿ.ಎನ್. ಭಾನು ಪ್ರಿಯಾ, ಡಿ.ಜೆ.ಸೃಜನ್, ಇಂಪನ, ಎನ್.ಕೆ ಅರ್ಚನಾ, ಪಿ.ನಿತ್ಯಶ್ರೀ, ಎಸ್.ಪ್ರಿಯಾಂಕ, ಎನ್.ಜೆ.ಶ್ರೀಜಾ, ಸಿ.ಯಶವಂತ್, ಎ.ಧನವಿತ್, ಎಸ್.ಯಶವಂತ್,ಎನ್.ಮಾನಸ, ಆರ್.ಹಿತೇಶ್, ಮೊಹಮ್ಮದ್, ಜಿ.ಹರ್ಷವರ್ಧನ ಸೇರಿ 51 ಮಂದಿಗೆ ಪ್ರಮಾಣ ಪತ್ರ ವಿತರಿಸಿದರು.

ಈ ವೇಳೆ ಉದ್ಯಮಿ ಯು.ಎಸ್.ಶೇಖರ್, ಮಾಜಿ ಮೇಯರ್ ಭೈರಪ್ಪ, ನಗರ ಪಾಲಿಕೆ ಸದಸ್ಯ ಎಂ.ಸಿ.ರಮೇಶ್, ಕಲಾವಿದ ಎಂ.ಕೆ.ಮತ್ತಪ್ಪ, ಹೆಚ್.ವಿ.ರಾಜೀವ್ ಸ್ನೇಹ ಬಳಗದ ಶೇಷಣ್ಣ, ಕೆ.ಮುರುಳಿ, ಟಿ.ಕುಮಾರಸ್ವಾಮಿ, ಆಟೋ ಕುಮಾರ್, ಅನಂತನಾಗ್, ನಾಗೇಶ್, ದೇವೇಂದ್ರ, ಕುಮಾರ್ ಆರ್. ಹುಡ್ಕೋ, ಅಶೋಕ್, ಶಂಕರ್, ಲಾಡ್ರಿ ಮಂಜು, ಲಯನ್ ಲೋಕೇಶ್ ಹಾಗೂ ಪೂರ್ಣಪ್ರಜ್ಞಾ ಶಿಕ್ಷಕರಿದ್ದರು.

ಉದ್ಯಾನವನ ಬೇಲಿ ಕುಸಿತ



ಮೈಸೂರು, ನ.14(ಎಸ್‌ಪಿಎನ್)- ಧಾರಾಕಾರ ಮಳೆಗೆ ಸುಮಾ ಸೋಪಾನ ಉದ್ಯಾನವನದ ಕಬ್ಬಿಣದ ರಕ್ಷಣಾ ಬೇಲಿ ಕುಸಿದು ಹಲವು ದಿನಗಳೇ ಕಳೆದರೂ ಈ ಭಾಗದ ಜನಪ್ರತಿನಿಧಿಗಳು, ಪಾಲಿಕೆ ಅಧಿಕಾರಿಗಳು ಸರಿಪಡಿಸದೇ, ತಿಳಿದು ತಿಳಿಯದಂತೆ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ.

ಕಬ್ಬಿಣದ ಗ್ರಿಲ್ ಸಮೇತ ಬಿದ್ದಿರುವ ಉದ್ಯಾನವನ ರಕ್ಷಣಾ ಬೇಲಿಯನ್ನು 40-50 ಇಟ್ಟಿಗೆಯಿಂದ 3 ಸಣ್ಣದಾದ ದಿಂಡುಕಟ್ಟಿ ಸರಿಪಡಿಸಬಹುದು. ಆದರೂ ಈ ಭಾಗದ ನಗರ ಪಾಲಿಕೆ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳು ಮತ್ತಷ್ಟು ಬೀಳಲಿ. ಬಿದ್ದರೆ, ಅದರಲ್ಲೂ ಹೆಚ್ಚಿನ ಕಮಿಷನ್ ಸಿಗುತ್ತೆ ಅಂತ ಕಾಯುತ್ತಿರಬಹುದು ಎಂದು ವಾಯುವಿಹಾರಿ ಗಿರೀಶ್ 'ಮೈಸೂರು ಮಿತ್ರ'ನ ಬಳಿ ದೂರಿದ್ದಾರೆ.

ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಗೆ ಶರತ್ ಕಮಲ್ ಅಚಂತ್ ಆಯ್ಕೆ, 25 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ

ನವದೆಹಲಿ, ನ.14- ಕ್ರೀಡಾ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಗಾಗಿ ಭಾರತ ಸರ್ಕಾರ ನೀಡುವ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಗೆ ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಅಚಂತ್ ಆಯ್ಕೆಯಾಗಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವೆಂಬರ್ 30ರಂದು ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ನೀಡಲಿದ್ದಾರೆ. ಕ್ರೀಡೆಯಲ್ಲಿನ ಅತ್ಯುತ್ತಮ ಸಾಧನೆಗಾಗಿ 25 ಕ್ರೀಡಾ ಪಟುಗಳು ಅರ್ಜುನ ಪ್ರಶಸ್ತಿಗಳನ್ನು ಸ್ವೀಕರಿಸಲಿದ್ದಾರೆ ಎಂದು ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ತಿಳಿಸಿದೆ. ಚೆಸ್ ಆಟಗಾರ ಆರ್ ಪ್ರಜ್ಞಾನಂದ. ಒಡಿಶಾ ಹಾಕಿ ತಾರೆ ದೀಪ್ ಗ್ರೇಸ್ ಎಕ್ಕಾ ಶಟ್ಲರ್‌ಗಳಾದ ಲಕ್ಷ್ಯ ಸೇನ್, ಎಚ್‌ಎಸ್ ಪ್ರಣಯ್, ಮಹಿಳಾ ಬಾಕ್ಸರ್ ನಿಖತ್ ಜರೀನ್, ಅಥ್ಲೀಟ್‌ಗಳಾದ ಎಲ್ದೋಸ್ ಪಾಲ್, ಅವಿನಾಶ್ ಸೇಬಲ್ ಸೇರಿದಂತೆ ಒಟ್ಟು 25 ಕ್ರೀಡಾಪಟುಗಳು ಈ ವರ್ಷ ಅರ್ಜುನ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಆದರೆ ಈ ಬಾರಿ ಯಾವುದೇ ಕ್ರಿಕೆಟಿಗರು ಅರ್ಜುನ ಪ್ರಶಸ್ತಿಗೆ ಆಯ್ಕೆಯಾಗಿಲ್ಲ.

ವರುಣಾ ನಾಲೆಯಲ್ಲಿ ಅಪರಿಚಿತ ಶವ ಪತ್ತೆ

ಮೈಸೂರು, ನ. 14- ಮೈಸೂರು ತಾಲೂಕು ರಾಯನಕೆರೆ ಗ್ರಾಮದ ಬಳಿ ವರುಣಾ ನಾಲೆಯಲ್ಲಿ ಅಪರಿಚಿತ ವ್ಯಕ್ತಿಯ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಸುಮಾರು 35ರಿಂದ 40 ವರ್ಷ ವಯಸ್ಸಿನ ವ್ಯಕ್ತಿಯ ಬಲಗೈನಲ್ಲಿ 'ಮದಕರಿ ರಾಚಯ್ಯ' ಎಡಗೈನಲ್ಲಿ 'ಮಂಚಮ್ಮ', ಎದೆಯ ಮೇಲೆ 'ಜಯಲಕ್ಷ್ಮಿ' ಎಂದು ಹಚ್ಚೆ ಹಾಕಲಾಗಿದೆ. ಈತನ ವಾರಸುದಾರರು ಮೈಸೂರು ದಕ್ಷಿಣ ಠಾಣೆ ದೂರವಾಣಿ ಸಂಖ್ಯೆ 0821-2444955 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 08212444800ನ್ನು ಅಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಶುಲ್ಕ ಮರುಪಾವತಿ, ವಿದ್ಯಾಸಿರಿ ಯೋಜನೆಯಡಿ ಅರ್ಜಿ ಆಹ್ವಾನ

ಮೈಸೂರು, ನ.14- ಟಿ.ನರಸೀಪುರ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1, ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2022-23ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಡಿ.31 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ https://ssp.postmatric.karnataka.gov.in ಈ ವೆಬ್‌ಸೈಟ್ ವಿಳಾಸದಲ್ಲಿ ಅರ್ಜಿ ಸಲ್ಲಿಸಬಹುದು. ಸಹಾಯವಾಣಿ ಸಂಖ್ಯೆ:8050770005, ಇ-ಮೇಲ್ bcwdhelpine@gmail.comನ್ನು ಸಂಪರ್ಕಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd. karnataka.gov.in ಈ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಇ-ಮೇಲ್ postmatrichelp@karnataka.gov.in ದೂರವಾಣಿ ಸಂಖ್ಯೆ: 080-35254757 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಟಿ.ನರಸೀಪುರ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹವಾಮಾನ ಬದಲಾವಣೆಗೆ ನೀತಿ-ನಿಯಮ ಅನುಷ್ಠಾನ ಅಗತ್ಯ

ಆಶಾ ಕಿಸಾನ್ ಸ್ವರಾಜ್ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಶ್ರೀಧರ್ ರಾಧಾಕೃಷ್ಣ

ಮೈಸೂರು, ನ.14(ಜಿಎ)- ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನಗಳಾದ ಡ್ರೋನ್ ಇತ್ಯಾದಿಗಳನ್ನು ತಲೆ ಮೇಲೆ ಇಟ್ಟುಕೊಳ್ಳಿ, ರೈತರಿಗೆ ಅನುಕೂಲವಾಗುವಂತಹ ಹಾಗೂ ಹವಾಮಾನದ ಬದಲಾವಣೆಗೆ ಬೇಕಿರುವ ನೀತಿ ನಿಯಮಗಳನ್ನು ಅನುಷ್ಠಾನಗೊಳಿಸುವ ಬದ್ಧತೆಯನ್ನು ಸರ್ಕಾರಗಳು ತೋರಬೇಕಿದೆ ಎಂದು ಆಶಾ ಕಿಸಾನ್ ಸ್ವರಾಜ್ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಶ್ರೀಧರ್ ರಾಧಾಕೃಷ್ಣ ಹೇಳಿದರು.



ನಗರದ ಕರಾಮುವಿ ಘಟಿಕೋತ್ಸವ ಭವನದಲ್ಲಿ ನಡೆದ 5ನೇ ರಾಷ್ಟ್ರಮಟ್ಟದ ಕಿಸಾನ್ ಸ್ವರಾಜ್ ಸಮ್ಮೇಳನ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹವಾಮಾನ ಬದಲಾವಣೆ ಕುರಿತು ನಡೆಯುತ್ತಿರುವ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳು ಕೇವಲ ಕಾಫಿ ತಿಂಡಿ ಸೇವನೆಗೆ ಮಾತ್ರ ಸೀಮಿತಗೊಳ್ಳುತ್ತಿವೆಯೇ ಹೊರತು ಸಮ್ಮೇಳನದಲ್ಲಿ ತೆಗೆದುಕೊಳ್ಳುವ ನಿರ್ಣಯಗಳ ಪರಿಣಾಮಕಾರಿ ಅನುಷ್ಠಾನವಾಗುತ್ತಿಲ್ಲ ಎಂದು ಆಶಾ ಕಿಶಾನ್ ಸ್ವರಾಜ್ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಶ್ರೀಧರ್ ರಾಧಾಕೃಷ್ಣ ಅಸಮಾಧಾನ ವ್ಯಕ್ತಪಡಿಸಿದರು.

ಜಾಗತಿಕ ತಾಪಮಾನ, ಹವಾಮಾನ ಬದಲಾವಣೆ, ಅಕಾಲಿಕ ಮಳೆ ಹೀಗೆ ಅನೇಕ ವಿಷಯ ಕುರಿತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳು ಕಾಲ ಕಾಲಕ್ಕೆ ಜರುಗುತ್ತಿವೆ. ಅದರಂತೆ ಈ ವರ್ಷ ಈಜಿಪ್ಟ್‌ನಲ್ಲಿ ಕಾಪ್27 ಸಭೆ ನಡೆಯುತ್ತಿದೆ. ಆದರೆ, ಸಭೆಯಲ್ಲಿ ಚರ್ಚೆಯಾಗುವ ಗಂಭೀರ ಸ್ವರೂಪದ ಸಮಸ್ಯೆಗಳ ವಿರುದ್ಧ ತೆಗೆದುಕೊಳ್ಳುವ ನಿರ್ಣಯಗಳನ್ನು ಯಾವ ದೇಶದ ಸರ್ಕಾರಗಳೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸದೆ ಕಾರ್ಪೋರೇಟ್ ಸಂಸ್ಥೆಗಳ ಹಿತಾಸಕ್ತಿಗೆ ಅನುಗುಣವಾಗಿ ನಡೆದುಕೊಳ್ಳುವಂತಿದೆ ಎಂದು ಆರೋಪಿಸಿದರು.

ನಮ್ಮ ಜೀವನ ಶೈಲಿಯಿಂದಾಗಿ ಪರಿಸರದಲ್ಲಿ ಸಾಕಷ್ಟು ಏರುಪೇರು ಉಂಟಾಗಿ ಈಗಾಗಲೇ ಪ್ರವಾಹ, ಅಕಾಲಿಕ ಮಳೆ, ತಾಪಮಾನದಂತ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಒಂದು ವೇಳೆ ಇಂತಹ ಸಮಸ್ಯೆಗಳನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ನಮ್ಮ ಮುಂದಿನ ತಲೆಮಾರಿಗೆ ಶುದ್ಧ ಗಾಳಿ, ನೀರು, ಮಣ್ಣು ಸಿಗದೆ ಸಾವಿನ ದವಡೆಗೆ ಸಿಲುಕಿ ನರಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಿಹಾರ ಸಂಸದ ಅನಿಲ್ ಹೆಗ್ಗಡೆ ಮಾತನಾಡಿ, ತೊಂಭತ್ತರ ದಶಕದ ಹಿಂದೆಯೇ ಕರ್ನಾಟಕದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಬಂಡವಾಳಶಾಹಿ ಪರವಾದಂತಹ ಗ್ಯಾಟ್ ಒಪ್ಪಂದಗಳ ವಿರುದ್ಧ ಚಳವಳಿ ರೂಪಿಸಲಾಗಿತ್ತು. ಸಾವಯುವ ಬೆಳೆಗಳಿಗೆ ವಿರುದ್ಧವಾದಂತಹ ಜಿಎಂ ಬೀಜಗಳ ಉತ್ಪಾದನೆಯನ್ನು ಪ್ರೋತ್ಸಾಹಿಸುವಂತಹ ಯಾವುದೇ ನಿರ್ಣಯಗಳ ಬಗ್ಗೆ ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಆದರೆ, ಇಂದಿನ ರೈತ ಚಳವಳಿಗಳಲ್ಲಿ ಇಂತಹ ಸೂಕ್ಷ್ಮ ವಿಷಯ ಬಗ್ಗೆ ಸಮರ್ಪಕ ಹೋರಾಟ ನಡೆಸುತ್ತಿಲ್ಲ ಎಂದು ಹೇಳಿದರು.

ಗುಜರಾತಿನ ಕಾಂಡ್ಲಾದಲ್ಲಿ ಕಾರ್ಗಿಲ್ ಟ್ರೇಡ್ ಕಂಪನಿಗೆ ಸುಮಾರು ಹದಿನೈದು ಸಾವಿರ ಎಕರೆ ಕೃಷಿ ಭೂಮಿಯನ್ನು ಅತ್ಯಂತ ಕಡಿಮೆ ದರದಲ್ಲಿ ನೀಡಲು ನಿರ್ಧರಿಸಿದಾಗ ಅನೇಕ ರೈತ ಸಂಘಟನೆಗಳ ಹೋರಾಟ ನಡೆಸಿದ ಪರಿಣಾಮ ಸಾವಿರಾರು ಎಕರೆ ಕೃಷಿ ಭೂಮಿ ಉಳಿದುಕೊಂಡಿತ್ತು. ನಮ್ಮ ದೇಶದ ಬಾಸುಮತಿ ಅಕ್ಕಿಯ ಪೇಟೆಂಟನ್ನು ಅಮೇರಿಕಾ ಪಡೆದುಕೊಂಡಿದ್ದು ಇಂದಿಗೂ ಅದನ್ನು ಹಿಂಪಡೆಯಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಸಂಘಟಕರಾದ ಉಷಾ ಸೂಲಪಾಣಿ, ಕಾರ್ತಿಕ್ ಗುಣಶೇಖರ್, ರಾಷ್ಟ್ರೀಯ ಸಂಚಾಲಕ ಕಪಿಲ್ ಶಾ, ಕೆಎಸ್‌ಒಯು ಕುಲಸಚಿವ ಖಾದರ್ ಪಾಷಾ ಉಪಸ್ಥಿತರಿದ್ದರು.

ಘೋಷಣೆಗಳ ಮಂಡನೆ

ತಂತ್ರಜ್ಞಾನ, ಕೃಷಿ ಉತ್ಪಾದನೆ ಹೆಚ್ಚಳದ ನೆಪದಲ್ಲಿ ಸಾಂಪ್ರದಾಯಿಕ ಕೃಷಿ ಹಾಗೂ ಕೃಷಿಕರನ್ನು ಕಾರ್ಪೋರೇಟ್ ಕಂಪನಿಗಳ ಪಾಲು ಮಾಡುವುದನ್ನು ವಿರೋಧಿಸಿ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ರೈತರು ಘೋಷಣೆ ಮೊಳಗಿಸಿದರು.

5ನೇ ರಾಷ್ಟ್ರಮಟ್ಟದ ಕಿಸಾನ್ ಸ್ವರಾಜ್ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ದೇಶದ ವಿವಿಧೆಡೆಯಿಂದ ಬಂದಿದ್ದ ಸಾವಿರಕ್ಕೂ ಹೆಚ್ಚು ರೈತರು ದನಿಗೂಡಿಸಿದರು. ಈ ವೇಳೆ ರೈತ ಮಹಿಳೆಯರ ಹಕ್ಕುಗಳ ಹೋರಾಟಗಾರ್ತಿ ಆಶ್ಲೇಶಾ ಖಾದ್ರೆ ಹಾಗೂ ಸಂಜೀವ್ ಕುಲಕರ್ಣಿ ಘೋಷಣೆಗಳನ್ನು ಮಂಡಿಸಿದರು.

ರೈತರ ಭೂಮಿ, ಬೀಜ, ಮಾರುಕಟ್ಟೆ ಅಸ್ಥಿರಗೊಳಿಸಲು ಕಾರ್ಪೋರೇಟ್ ಕಂಪನಿಗಳು ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರುತ್ತಿದ್ದು, ಅದರ ವಿರುದ್ಧ ಸಂಘಟಿತರಾಗಿ ಹೋರಾಡಬೇಕು. ಎಲ್ಲರನ್ನೂ ಒಳಗೊಳ್ಳುವ ಪರಿಸರಾತ್ಮಕ ಕೃಷಿ ಪದ್ಧತಿಯನ್ನೇ ಅನುಸರಿಸಬೇಕು. ಅದನ್ನು ಬೆಂಬಲಿಸುವ ತಂತ್ರಜ್ಞಾನಗಳನ್ನು ಮಾತ್ರ ಒಪ್ಪಬೇಕು. ರೈತರ ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಸಾರ್ವಭೌಮತೆ ಹೆಚ್ಚಿಸಬೇಕು. ನೀತಿ ಜಾರಿಗೆ ಮುನ್ನ ರೈತರ ಒಪ್ಪಿಗೆ ಪಡೆಯಬೇಕು. ರೈತ ಮಹಿಳೆಯರಿಗೆ ಭೂಮಿ ಹಕ್ಕು ವಿಷಯದಲ್ಲಿ ಕಾನೂನಾತ್ಮಕ ಬೆಂಬಲ ನೀಡಬೇಕು.

ನಿಜವಾದ ಕೃಷಿಕರು ಹಾಗೂ ಕೃಷಿ ಕೂಲಿ ಕಾರ್ಮಿಕರಿಗೆ ಭೂಮಿ ಸಿಗಬೇಕು. ಅನ್ಯ ಉದ್ದೇಶಕ್ಕೆ ಮಾರಾಟ ತಪ್ಪಿಸಬೇಕು. ಕನಿಷ್ಠ ಬೆಂಬಲ ಬೆಲೆ, ಯೋಗ್ಯ ಪರಿಹಾರ, ವಿಮೆ ನೀಡಬೇಕು. ರೈತರ ಆತ್ಮಹತ್ಯೆ ತಡೆಯಬೇಕು. ಬೀಜಗಳ ಹಕ್ಕುಸ್ವಾಮ್ಯ ಕಂಪನಿಗಳ ಪಾಲಾಗಬಾರದು. ಕೃಷಿ ವೈವಿಧ್ಯ ಉಳಿಸಿಕೊಳ್ಳಬೇಕು. ಸುರಕ್ಷಿತ, ವೈವಿಧ್ಯಮಯ, ಸಮಗ್ರ ಆಹಾರವು ಪ್ರತಿಯೊಬ್ಬ ನಾಗರಿಕರಿಗೂ ಸಿಗಬೇಕು. ಏನನ್ನು ತಿನ್ನಬೇಕು, ತಿನ್ನಬಾರದೆಂದು ನಿರ್ಧರಿಸುವುದೂ ಸಂವಿಧಾನಕ್ಕೆ ವಿರುದ್ಧ. ಜೀವ ವೈವಿಧ್ಯವನ್ನು ಉಳಿಸಿಕೊಳ್ಳಲು ಕುಲಾಂತರಿ ಸಾಸಿವೆ ಸೇರಿದಂತೆ ಯಾವುದೇ ಹೈಬ್ರೀಡ್ ತಳಿಗೆ ಅವಕಾಶ ನೀಡಬಾರದು. ಸ್ಥಳೀಯ ಸುಸ್ಥಿರ ಕೃಷಿ ಪ್ರೋತ್ಸಾಹಿಸಬೇಕು. ನಗರ ಹಾಗೂ ಗ್ರಾಮೀಣರ ನಡುವೆ ಸಂಬಂಧ ಬಲಪಡಿಸಬೇಕು ಎಂದು ಘೋಷಣೆಗಳನ್ನು ಮಂಡಿಸಿದರು.

ಹಿಂದುಳಿದವರ ಏಳಿಗೆಗಾಗಿ ಹೋರಾಡಿದ ಸಂತ ಕನಕದಾಸರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣನೆ



ಪಿರಿಯಾಪಟ್ಟಣ, ನ.14– ಸಮಾಜ ಸುಧಾರಕರಾಗಿ, ದಾಸನಾಗಿ, ಹುಟ್ಟು ಹೋರಾಟಗಾರರಾಗಿ ತಮ್ಮ ವಚನ ಸಾಹಿತ್ಯದ ಮೂಲಕ ಹಿಂದುಳಿದ ವರ್ಗಗಳ ಏಳಿಗೆಗಾಗಿ ಹೋರಾಡಿದ ಸಂತ ಕನಕದಾಸರು ಎಂದು ಸಿದ್ದರಾಮಯ್ಯ ಬಣ್ಣಿಸಿದರು.

ತಾಲೂಕಿನ ಕೆಳಗನಹಳ್ಳಿ ದೊಡ್ಡಕೊಪ್ಪಲು ಗ್ರಾಮದಲ್ಲಿ ನಿರ್ಮಿಸಿರುವ ಶ್ರೀಕನಕದಾಸರ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಅವರು, ತಿಮ್ಮಪ್ಪ ಎಂಬ ಹೆಸರಿನಲ್ಲಿ ಜನಿಸಿದ ಕನಕದಾಸರು ಪಾಳೇಗಾರ ವಂಶದವರಾಗಿದ್ದರಿಂದ ತಿಮ್ಮಪ್ಪನಾಯಕನಾದರು. ನಂತರ ದಾಸ ಪಂಥಕ್ಕೇ ಸೇರಿ ದಾಸರಾದರು. ಅವರು ಭೂಮಿ ಉಳುವಾಗ ಚಿನ್ನ, ವಜ್ರ, ವೈಡೂರ್ಯ ಸಿಕ್ಕಿದ್ದರಿಂದ ಕನಕದಾಸರಾದರು. 15ನೇ ಶತಮಾನದಲ್ಲಿ ನಡೆದ ಯುದ್ಧದಲ್ಲಿ ಆದ ಸಾವು ನೋವು ಕಂಡು ಜೀವನದಲ್ಲಿ ಜಿಗುಪ್ಸೆಗೊಂಡ ಅವರು ಎಲ್ಲಾ ವ್ಯಾಮೋಹಗಳನ್ನು ತ್ಯಾಗ ಮಾಡಿ ಸಿಕ್ಕಿದ ಧನಕನಕಗಳನ್ನು ಬಡಜನರಿಗೆ ಹಂಚಿ ನಿಜವಾದ ಶ್ರೇಷ್ಠ ಸಂತನಾದರು ಎಂದರು.

ನಾನು ಎಂಬ ಅಹಂ ಹೋದರೆ ಮಾತ್ರ ನಾವು ದೇವರ ಸನ್ನಿಧಿಗೆ ಹೋಗಲು ಸಾಧ್ಯ ಎಂಬ ಸತ್ಯವನ್ನು ಸಮಾಜಕ್ಕೆ ಬಿಟ್ಟು ಹೋದ ಕನಕದಾಸರ ಶ್ರೇಷ್ಠ ಚಿಂತನೆ, ತತ್ವಾದರ್ಶಗಳನ್ನು ಅನುಸರಿಸುವ ಮೂಲಕ ಅವರ ಮಾರ್ಗದಲ್ಲಿ ನಾವು ಹೋದಾಗ ಮಾತ್ರ ಇಂತಹ ಪ್ರತಿಮೆಗಳ ಅನಾವರಣ, ಜಯಂತಿಗಳಿಗೆ ನಿಜವಾದ ಅರ್ಥ ಸಿಕ್ಕಂತಾಗುತ್ತದೆ ಎಂದರು.

ನಾನು ಮುಖ್ಯಮಂತ್ರಿಯಾದಾಗ ವಿಧಾನಸೌಧದ ಮುಂದೆ ಕನಕದಾಸರ ಪ್ರತಿಮೆ ನಿರ್ಮಾಣ ಮಾಡಿದೆ. ಈಗ ಹೋಗಿಬಂದು ಅಟ್ಟಿಕ್ಕಿದವನಿಗಿಂತ ಬಟ್ಟಿಕ್ಕಿದೋಳು ಮೇಲು ಎಂಬ ಹಳ್ಳಿ ಗಾದೆಮಾತಿನಂತೆ ಪ್ರಧಾನಿ ಗಿರಾಕಿ ಮೋದಿ ಹೋಗಿ ಬಂದು ಕನಕದಾಸರ ಪ್ರತಿಮೆಗೆ ಹಾರ ಹಾಕಿ ಸಮಾಜದ ಮತಗಳನ್ನು ಪಡೆಯುವ ತಂತ್ರಗಾರಿಕೆ ಮಾಡುತ್ತಿದ್ದಾರೆ. ಇವರ ತಂತ್ರಗಾರಿಕೆಗೆ ಮಾರುಹೋಗಬೇಡಿ ಎಂದು ಎಚ್ಚರಿಸಿದರು.

ಎಸ್ಸಿ, ಎಸ್ಟಿ ಮೀಸಲಾತಿಗೆ ನನ್ನ ಅವಧಿಯಲ್ಲಿ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿದ್ದು, ಈ ಆಯೋಗದ ವರದಿಯನ್ನು ಎರಡೂವರೆ ವರ್ಷಗಳ ಕಾಲ ತಡೆದಿದ್ದ ಬಿಜೆಪಿ ಸರ್ಕಾರ ನಮ್ಮ ಒತ್ತಾಯ ಹಾಗೂ ವಾಲ್ಮೀಕಿ ಸಮಾಜದ ಸ್ವಾಮೀಜಿಯವರ 257 ದಿನಗಳ ಸತ್ಯಾಗ್ರಹದಿಂದ ಎಚ್ಚೆತ್ತು ಇದೀಗ ಜಾರಿಗೊಳಿಸಿ ಹಿಂದುಳಿದವರ ಪರ ನಾವಿದ್ದೇವೆ ಎಂದು ಪ್ರಚಾರ ಪಡೆಯುತ್ತಾ ಜಾತಿ ರಾಜಕಾರಣ ಮಾಡುತ್ತಿದೆ. ದಲಿತರು, ಅಲ್ಪಸಂಖ್ಯಾತರು ಉದ್ಧಾರವಾಗಬೇಕಾದರೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ನಿಮ್ಮ ಪ್ರೀತಿ, ಗೌರವ ಜೈಕಾರಗಳು ಮತಗಳಾಗಿ ಪರಿವರ್ತನೆಯಾದಾಗ ಮಾತ್ರ ಈ ನಿಮ್ಮ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲು ಸಾಧ್ಯ. ಆದ್ದರಿಂದ ಕಾಂಗ್ರೆಸ್ ಬೆಂಬಲಿಸುವ ಮೂಲಕ ನನ್ನನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಮಾಜದ ಜಾಗೃತಿಗಾಗಿ ಮನುಷ್ಯನ ಹುಟ್ಟಿನ ಬಗ್ಗೆ ಪ್ರಪಂಚಕ್ಕೆ ಸಂದೇಶ ಸಾರಿದ ಮಹಾನ್ ಸಂತ ಕನಕದಾಸರು. ಸಿದ್ದರಾಮಯ್ಯ ಅವರು ಸಂವಿಧಾನ ಪಾಲಿಸುವ ವಿಧೇಯಕ ವಿದ್ಯಾರ್ಥಿಯಾಗಿ ರಾಜ್ಯ ಕಂಡ ಶ್ರೇಷ್ಠ ರಾಜಕಾರಣಿ ಎಂದರು.

ಮಾಜಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು. ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಎಚ್.ಡಿ.ಗಣೇಶ್, ಸ್ವಾಮಿ, ಹರಳಯ್ಯ ಮಠದ ಗುರುರುದ್ರಪ್ಪ, ನಿಕಿತ್‌ರಾಜ್ ಮೌರ್ಯ, ಮುಖಂಡರಾದ ಜೆ.ಜೆ.ಆನಂದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಹೇಮಾವತಿ, ಶಿವಕುಮಾರ್, ಎಸ್.ಟಿ.ರಾಜಶೇಖರ್ ಸೇರಿದಂತೆ ಸಾವಿರಾರು ಮಂದಿ ಇದ್ದರು.

6 ನನ್ನ ಅಧಿಕಾರವಧಿಯಲ್ಲಿ 4 ಕೋಟಿ ಬಡ ಕುಟುಂಬಗಳಿಗೆ ಉಚಿತವಾಗಿ 7 ಕೆಜಿ ಅಕ್ಕಿ ನೀಡುವ ಮೂಲಕ ಅನ್ನಭಾಗ್ಯ ಯೋಜನೆ ಜಾರಿಗೆ ತಂದೆ. ಅಲ್ಲದೇ ನಾನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮೊದಲ ದಿನವೇ ನನ್ನ ಚುನಾವಣಾ ಪ್ರಣಾಳಿಕೆಯಂತೆ 165 ಯೋಜನೆಗಳಲ್ಲಿ 155ರಷ್ಟು ಯೋಜನೆಗಳನ್ನು ಜಾರಿಗೆ ತಂದೆ. ಆದರೆ ಬಿಜೆಪಿಯವರು 600 ಪ್ರಣಾಳಿಕೆಯನ್ನು ತಮ್ಮ ಪ್ರಚಾರದಲ್ಲಿ ಪ್ರಚುರಪಡಿಸಿ ಕೇವಲ 30 ರಷ್ಟನ್ನು ಜಾರಿಗೆ ತರಲಿಲ್ಲ. ಇದು ಮೋಸದ ಬಿಜೆಪಿ ಸರ್ಕಾರ.

– ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ.



ಪಿರಿಯಾಪಟ್ಟಣ ತಾಲೂಕಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ತೆರಳುವ ಮಾರ್ಗಮಧ್ಯೆ ಹುಣಸೂರಿನ ಕಲ್ಕುಣಿಕೆ ಸರ್ಕಲ್ ಬಳಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಬೆಂಬಲಿಗರು ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷ ದೇವರಾಜ್, ಬ್ಲಾಕ್ ಅಧ್ಯಕ್ಷರಾದ ರಮೇಶ್, ದೇವರಾಜ್, ನಾರಾಯಣ್, ಮುಖಂಡರಾದ ಸೋಮಶೇಖರ್, ಬಿ.ಎನ್ ಜಯರಾಮ್, ಶಿವರಾಜೇಗೌಡ, ಆನಂದ್, ಹೆಚ್.ಎಸ್.ಕುಮಾರ್, ರಾಘು ಸೇರಿದಂತೆ ನಗರಸಭಾ ಸದಸ್ಯರು ಹಾಗೂ ಸಾವಿರಾರು ಮಂದಿ ಅಭಿಮಾನಿಗಳು ಇದ್ದರು.

ಶಾಲಾ ಕೊಠಡಿ ಕಾಮಗಾರಿಗೆ ಭೂಮಿ ಪೂಜೆ



ನಂಜನಗೂಡು, ನ.14– ವಿಧಾನಸಭಾ ಕ್ಷೇತ್ರದ 30 ಗ್ರಾಮಗಳಲ್ಲಿ ಶಾಲಾ ಕೊಠಡಿ ನಿರ್ಮಾಣಕ್ಕೆ ಸರ್ಕಾರ 4.5 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಗ್ರಾಮೀಣ ಶಾಲೆಗಳ ಅಭಿವೃದ್ಧಿಗಾಗಿ ಹೆಚ್ಚಿನ ಅಸ್ಥೆ ವಹಿಸುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರ ಕಾರ್ಯ ಮೆಚ್ಚುವಂತಹದ್ದು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ದೇವಿರಮ್ಮನಹಳ್ಳಿ ಬಡಾವಣೆಯಲ್ಲಿ ಸೋಮವಾರ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನಡೆಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕೊಠಡಿಗಳ ಕೊರತೆ ಇದ್ದು, ಬೇಡಿಕೆಗೆ ಅನುಗುಣವಾಗಿ ಕ್ಷೇತ್ರದ 30 ಗ್ರಾಮಗಳ ಪ್ರಾಥಮಿಕ ಶಾಲೆಗಳಲ್ಲಿ ತಲಾ 15 ಲಕ್ಷ ವೆಚ್ಚದಲ್ಲಿ ಶಾಲಾ ಕೊಠಡಿ ನಿರ್ಮಿಸಲಾಗುತ್ತಿದೆ. ನಗರದ ಜೂನಿಯರ್ ಕಾಲೇಜು ದುರಸ್ತಿಗಾಗಿ 50 ಲಕ್ಷ ಅನುದಾನ ನೀಡಲಾಗಿದೆ. ನಮ್ಮ ಸರ್ಕಾರದ ಮೂರೂವರೆ ವರ್ಷದ ಅವಧಿಯಲ್ಲಿ 20 ಕೋಟಿಗೂ ಹೆಚ್ಚು ಅನುದಾನ ಪಡೆದು ಶಿಥಿಲ ಶಾಲಾ ಕಟ್ಟಡಗಳ ದುರಸ್ತಿ ಸೇರಿದಂತೆ ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದರು. ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಮಹೇಶ್, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಮುಖಂಡರಾದ ಕೆಂಪಣ್ಣ, ಚಿಕ್ಕರಂಗನಾಯ್ಕ, ಬಿ.ಎಸ್.ಮಹದೇವಪ್ಪ, ಶಿವಣ್ಣ, ಲೋಕೇಶ್, ಗಿರೀಶ್, ಬಿಇಓ ರಾಜು ಉಪಸ್ಥಿತರಿದ್ದರು.

ಹೆಗ್ಗೂರು ಶಾಲೆಯಲ್ಲಿ 3 ಕೊಠಡಿ ನಿರ್ಮಾಣಕ್ಕೆ ಭೂಮಿ ಪೂಜೆ



ತಿ.ನರಸೀಪುರ, ನ.14– ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಶಾಲೆಗಳಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಹೆಗ್ಗೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿವೇಕಾ ಯೋಜನೆ ಅಡಿ 45 ಲಕ್ಷ ರೂ. ವೆಚ್ಚದಲ್ಲಿ 3 ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ ಶಾಲೆಗಳಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕಲ್ಪಿಸಿಕೊಡುವ ಮೂಲಕ ನೂತನ ಕೊಠಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಇಓ ಬಿ.ಮರಿಸ್ವಾಮಿ, ಮಾಜಿ ಜಿಪಂ ಸದಸ್ಯ ಜೈಪಾಲ್ ಭರಣಿ, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಗ್ರಾಪಂ ಅಧ್ಯಕ್ಷ ಪುಟ್ಟರತ್ನ, ಪಿಎಸಿಎಸ್ ಅಧ್ಯಕ್ಷ ಶಿವಕುಮಾರ್, ಮುಖಂಡರಾದ ಶಿವಣ್ಣ ಹೊನ್ನೇಗೌಡ, ಮರೀಗೌಡ, ಬಸವೇಗೌಡ, ಸಿದ್ದರಾಜು, ಪ್ರದೀಪ್ ಗೌಡ, ಪ್ರಾಥಮಿಕ, ಮುಕುಂದ, ಗೋಪಾಲ್, ಸತೀಶ್, ರಘು, ಜಿಪಂ ತಾಂತ್ರಿಕ ಉಪ ವಿಭಾಗದ ಜೆಇ ರಾಜುನಾಯಕ್, ಆಪ್ತ ಸಹಾಯಕ ನಾಗರಾಜು, ಶಿಕ್ಷಣ ಸಂಯೋಜಕ ಪರಮೇಶ್, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಸಿಆರ್‌ಪಿ ಮಂಜುನಾಥ್ ಇತರರಿದ್ದರು.

ಚಿಕ್ಕವಡ್ಡರಗುಡಿ ಪಿಎಸಿಎಸ್‌ಗೆ ನಾಗಮ್ಮ ಅಧ್ಯಕ್ಷೆ



ಭೇರ್ಯ, ನ.14– ಚಿಕ್ಕವಡ್ಡರಗುಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ನಾಗಮ್ಮ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ಕಾಮಾಕ್ಷಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಾಗಮ್ಮ ಹಾಗೂ ನಿಂಗಜೋಗಿ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ನಾಗಮ್ಮ 9 ಮತ ಪಡೆದು ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ನಿಂಗಜೋಗಿ 4 ಮತ ಪಡೆದು ಪರಾಭವಗೊಂಡರು ಎಂದು ಚುನಾವಣಾಧಿಕಾರಿ ಸಹಕಾರ ಇಲಾಖೆ ಅಭಿವೃದ್ಧಿ ಅಧಿಕಾರಿ ಎಸ್.ರವಿ ಪ್ರಕಟಿಸಿದರು. ನೂತನ ಅಧ್ಯಕ್ಷೆ ನಾಗಮ್ಮ ಮಾತನಾಡಿ, ಸಾಲ ಮರುಪಾವತಿಸಿರುವ 250 ಸದಸ್ಯರ ಸಾಲ ನವೀಕರಣ ಮಾಡಲು ಹಾಗೂ 70 ಹೊಸ ಸದಸ್ಯರಿಗೆ ಸಾಲ ಕೊಡಲು ಕೂಡಲೇ ಆಡಳಿತ ಮಂಡಳಿ ಸಭೆ ಕರೆದು ತೀರ್ಮಾನಿಸಲಾಗುವುದು. ಪಹಣಿ ಹೊಂದಿರುವ ರೈತರಿಗೆ ಸಕಾಲದಲ್ಲಿ 3 ಲಕ್ಷದೊಳಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಒದಗಿಸಲಾಗುವುದು ಎಂದರು.

ಉಪಾಧ್ಯಕ್ಷ ಮಹದೇವನಾಯಕ, ನಿರ್ದೇಶಕರಾದ ಕಾಮಾಕ್ಷಮ್ಮ, ಪದ್ಮಮ್ಮ, ನಾರಾಯಣ, ರಂಗೇಗೌಡ, ಜಿ.ಆರ್. ಕೃಷ್ಣೇಗೌಡ, ಸಿ.ವೀರಭದ್ರಸ್ವಾಮಿ, ಕೆಂಪೇ ಗೌಡ, ಜಿ.ಜೆ.ಮಹದೇವ, ಸಿ.ರಮೇಶ್ ಬಾಬು ಭಾಗವಹಿಸಿದ್ದರು. ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ರಾಜೇಗೌಡ, ತಾಪಂ ಮಾಜಿ ಸದಸ್ಯೆ ಭಾರತಿ, ಮಂಜುನಾಥ್, ಜಿಸಿ. ಸತೀಶ್, ಮುಖಂಡರಾದ ಲಕ್ಕೇಗೌಡ, ರಾಮಚಂದ್ರ, ಲಕ್ಷ್ಮಣ, ಜಿ.ಎಸ್.ಕೆಂಪು, ಗೋವಿಂದೇಗೌಡ , ರಂಗಣ್ಣ, ಜಿ.ಬಿ.ಮಂಜುನಾಥ್, ನಾಗೇಂದ್ರ ರವಿ, ಶಿವಣ್ಣ ಜಿ.ಆರ್.ನಾಗರಾಜ್, ಜಿ.ಕೆ.ನಾಗೇಗೌಡ, ದೇವೇಂದ್ರ, ಕಿಟ್ಟಿ, ರಾಮು, ಮಂಜು ಇತರರಿದ್ದರು.

ಚುಂಚನಕಟ್ಟೆಯಲ್ಲಿ ವೈಭವದ ಕಾವೇರಿ ಜಲಪಾತೋತ್ಸವ



ಚುಂಚನಕಟ್ಟೆ, ನ.14– ಜನ ಸಾಗರದ ಮಧ್ಯೆ ಸಂಗೀತ ಗಾನ... ಸರಿಗಮಪ ಹಾಡು ಹಕ್ಕಿಗಳ ಕಲರವ... ಜಲಪಾತೋತ್ಸವಕ್ಕೆ ಮೆರಗು ನೀಡಿದ ದೀಪಾಲಂಕಾರ... ಕಲಾ ತಂಡಗಳಿಂದ ತುಂಬಿಹೋಗಿದ್ದ ಆವರಣ. ಇದು ಚುಂಚನಕಟ್ಟೆಯಲ್ಲಿ ಭಾನುವಾರ ನಡೆದ ಕಾವೇರಿ ಜಲಪಾತೋತ್ಸವದಲ್ಲಿ ಕಂಡು ಬಂದ ದೃಶ್ಯ.

ಪ್ರವಾಸೋದ್ಯಮ ಇಲಾಖೆ ಮತ್ತು ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಇತಿಹಾಸ ಪ್ರಸಿದ್ಧ ಕೋದಂಡ ರಾಮ ದೇವಾಲಯದ ಹಿಂಭಾಗದ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಲಿಗ್ರಾಮ ತಾಲೂಕಿನ ಶ್ರೀವಿದ್ಯಾ, ಸಾರಾ, ಆದಿಚುಂಚನಗಿರಿ ಸೇರಿದಂತೆ ವಿವಿಧ ಶಾಲಾ ಮಕ್ಕಳಿಂದ ನಡೆದ ಜಾನಪದ, ಸಿನಿಮಾ, ನಾಟಕ ಸೇರಿದಂತೆ ವಿವಿಧ ಕಲಾ ಪ್ರಕಾರ, ನೃತ್ಯ ವೈಭವ ಜಲಪಾತೋತ್ಸವಕ್ಕೆ ಮೆರಗು ನೀಡಿತು.

ಸಾಧುಕೋಕಿಲ ನೇತೃತ್ವದಲ್ಲಿ ನಡೆದ ರಸಮಂಜರಿಯಲ್ಲಿ ಸ್ವಿಜನ್ ಬ್ಯಾಂಡ್ ಕಲಾ ತಂಡದಿಂದ ಕೇರಳ ಶೈಲಿ ಫಿಜನ್ ವಾದನ ಕೇಳುಗರನ್ನು ಮಂತ್ರ ಮುಗ್ಧವಾಗಿಸಿತು. ಇದೇ ವೇಳೆ ಶಾಸಕ ಸಾ.ರಾ.ಮಹೇಶ್ ಪತ್ನಿ ಅನಿತಾ ಅವರ ಯೂಟ್ಯೂಬ್ ಚಾನಲ್ ಲಾಂಚ್ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಟ ವಸಿಷ್ಠ ಸಿಂಹ, ಕೆ.ಆರ್.ನಗರದಲ್ಲಿ ಕಳೆದ ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು. ಬಾಲ್ಯದಲ್ಲಿ 3 ವರ್ಷ ಇಲ್ಲೆ ಓಡಾಡಿಕೊಂಡಿದ್ದೆ. ಚುಂಚನಕಟ್ಟೆ ಆಗಿನ ನಮ್ಮ ಜೋಗದ ಜಲಪಾತ. ಈ ಭಾಗದ ಹಸಿರು, ಹೊಲ ಗದ್ದೆಗಳು ನಮಗೆ ಚಿರಪರಿಚಿತವಾಗಿದ್ದು, ನಾವು ನೆಲ, ಜಲ, ಭಾಷೆ ವಿಚಾರದಲ್ಲಿ ಒಂದಾಗಬೇಕಾದ ಅನಿವಾರ್ಯತೆ ಇದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಸಾಧು ಕೋಕಿಲ, ಅವರ ತಂಗಿ ಉಷಾ, ಸರಿಗಮಪ ಖ್ಯಾತಿಯ ಕಂಬದ ರಂಗಯ್ಯ, ಪೃಥ್ವಿ ಭಟ್ ಸೇರಿದಂತೆ ವಿವಿಧ ಕಲಾವಿದರು ಸಂಗೀತದ ರಸದೌತಣ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ಸಾ.ರಾ.ಮಹೇಶ್, ನಟಿ ಅದಿತಿ ಪ್ರಭುದೇವ, ತಹಸೀಲ್ದಾರ್ ಸಂತೋಷ್, ಮೋಹನ್ ಕುಮಾರ್, ಜಿಪಂ ಮಾಜಿ ಸದಸ್ಯರಾದ ನಂದೀಶ್, ಯುವ ಮುಖಂಡ ಶ್ರೀರಾಂಪುರ ಸಂತೋಷ್, ಇಓ ಸತೀಶ್, ಬಿಇಓ ಗಾಯತ್ರಿ, ಇನ್‌ಸ್ಪೆಕ್ಟರ್‌ಗಳಾದ ರಘು, ಶ್ರೀಕಾಂತ್ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಪಿಡಿಓ ಸುನೀಲ್, ದೇಗುಲದ ಸಿಇಓ ರಘು, ಗ್ರಾಪಂ ಸದಸ್ಯರಾದ ಗೋವಿಂದೇಗೌಡ, ಶಾರದಮ್ಮ, ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ ಮುಖಂಡರಾದ ಸಿ.ವಿ.ಮಂಜುನಾಥ್, ಸಿ.ಜಿ.ಬಾಬು, ಎಂ.ಆರ್.ಹರೀಶ್, ಮಧುಚಂದ್ರ, ಸಿ.ಕೆ.ಕೃಷ್ಣ, ಎಸ್.ಟಿ.ಕೀರ್ತಿ ಸೇರಿದಂತೆ ಮತ್ತಿತರರಿದ್ದರು.

ಇಂದು 69ನೇ ಅಖಿಲ ಭಾರತ ಸಹಕಾರ ಸಪ್ತಾಹ

ಬನ್ನೂರು, ನ.14– ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯ ಕುರಿತು ನ.15ರಂದು ಯಾಚೇನಹಳ್ಳಿಯಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದು ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಕಾರ ಮಾರುಕಟ್ಟೆ, ಗ್ರಾಹಕ ರೂಪಾಂತರ ಮತ್ತು ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮವನ್ನು ಶಾಸಕ ಎಂ.ಅಶ್ವಿನ್ ಕುಮಾರ್ ಉದ್ಘಾಟಿಸುವರು. ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಡಾ.ಹೆಚ್.ವಿ. ರಾಜೀವ್ ಅಧ್ಯಕ್ಷತೆ ವಹಿಸುವರು. ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಸಿ.ಬಸವೇಗೌಡ, ಬಿ.ಎನ್. ಸದಾನಂದ, ಸಿದ್ದೇಗೌಡ ಇನ್ನಿತರರು ಭಾಗವಹಿಸಲಿದ್ದಾರೆ.

ವರುಣಾದಿಂದಲೇ ಮಾಜಿ ಸಿಎಂ ಸಿದ್ದರಾಮಯ್ಯ ಸ್ಪರ್ಧಿಸಲಿ

ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥಗೌಡ ಒತ್ತಾಯ



ತಿ.ನರಸೀಪುರ ನ.14– ನಾಡಿನ ಜನ ಮತ್ತೊಮ್ಮೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಒಲವು ತೋರಿದ್ದು, ಸಿದ್ದರಾಮಯ್ಯ ಅವರನ್ನೇ ಪುನಃ ಮುಖ್ಯಮಂತ್ರಿಯನ್ನಾಗಿ ನೋಡಲು ಕಾತರರಾಗಿದ್ದಾರೆ. ಹಾಗಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಹಿರಿಯ ಕಾಂಗ್ರೆಸ್ ಮುಖಂಡ, ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ್‌ಗೌಡ ಒತ್ತಾಯಿಸಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂರಾರು ಜನಪರ ಯೋಜನೆಗಳೊಂದಿಗೆ 5 ವರ್ಷಗಳ ಕಾಲ ಸುಸ್ಥಿರ ಸರ್ಕಾರ ನೀಡಿದ ಸಿದ್ದರಾಮಯ್ಯನವರು ಮುಂದಿನ ಚುನಾವಣೆಯೇ ಅಂತಿಮವೆಂದು ಘೋಷಿಸಿದ್ದಾರೆ. ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡಲು ಜಿಲ್ಲೆಯ ಜನರಿಗೆ ಅವಕಾಶ ನೀಡಬೇಕು. ಪಕ್ಷದ ಪ್ರಾಬಲ್ಯ ಮತ್ತು ಜನರ ಪ್ರೀತಿಗೆ ಪ್ರಾಶಸ್ತ್ಯವಿರುವ ವರುಣಾ ವಿಧಾನಸಭಾ ಕ್ಷೇತ್ರದಿಂದಲೇ ಸ್ಪರ್ಧಿಸಿ ಚುನಾಯಿತರಾಗಿ, ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡಿದರು.

ಹಿತ ಶತ್ರುಗಳೇ ಅಪಾಯಕಾರಿ: ಎಲ್ಲೆಡೆ ಕಾಂಗ್ರೆಸ್ ಪರ ಅಲೆ ಇರುವುದರಿಂದ ಸಿದ್ದರಾಮಯ್ಯ ಅವರಿಗೆ ಎದುರಾಳಿಗಳಿಗಿಂತಲೂ, ಹಿತ ಶತ್ರುಗಳೇ ಅಪಾಯಕಾರಿ. ಹೀಗಾಗಿ ಅಂತಿಮ ಚುನಾವಣಾ ಸ್ಪರ್ಧೆ ಸೂಕ್ಷ್ಮತೆ ಅರಿತು ಎಚ್ಚರಿಕೆ ವಹಿಸಬೇಕಿದೆ. ರಾಜ್ಯದ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲ್ಲುವ ಅವಕಾಶವಿದ್ದರೂ, ಎಲ್ಲಾ ವಿಧದಲ್ಲೂ ಅವರಿಗೆ ತವರು ಜಿಲ್ಲೆಯ ವರುಣಾ ವಿಧಾನಸಭಾ ಕ್ಷೇತ್ರವೇ ಸುರಕ್ಷಿತ. ಇಲ್ಲೇ ಸ್ಪರ್ಧಿಸಿ, ಶಾಸಕರಾಗಿ ಮುಖ್ಯಮಂತ್ರಿ ಆಗಬೇಕೆಂಬುದು ಕ್ಷೇತ್ರದ ಮತದಾರರು ಹಾಗೂ ಪಕ್ಷದ ಕಾರ್ಯಕರ್ತರ ಬಯಕೆ. ಹೀಗಾಗಿ ಸಿದ್ದರಾಮಯ್ಯನವರು ವರುಣಾದಿಂದಲೇ ಸ್ಪರ್ಧಿಸುವ ಘೋಷಣೆ ಮಾಡಬೇಕೆಂದು ಆಗ್ರಹಿಸಿದರು.

ಬಿಜೆಪಿ ಸರ್ಕಾರದ ಸಚಿವರೊಬ್ಬರು ರಸ್ತೆ ಬದಿ ವ್ಯಾಪಾರ ಮಾಡುವ ಬಡವನ ಬಳಿಯೂ ಲಂಚಕ್ಕೆ ಕೈ ಚಾಚುತ್ತಾರೆ. ಅಭಿವೃದ್ಧಿ ಕಾಮಗಾರಿಯಲ್ಲಿ ಶೇ.40ರಷ್ಟು ಕಮಿಷನ್ ಸೇರಿದಂತೆ ವ್ಯಾಪಕ ಭ್ರಷ್ಟಾಚಾರ, ಆಡಳಿತ ವೈಫಲ್ಯದಿಂದಾಗಿ ಕೇಂದ್ರ ಹಾಗೂ ರಾಜ್ಯದ ಆಡಳಿತ ರೂಢ ಬಿಜೆಪಿ ಸರ್ಕಾರಗಳು ಜನರ ವಿಶ್ವಾಸ ಕಳೆದುಕೊಂಡಿದ್ದು, ಕಾಂಗ್ರೆಸ್ ಪಕ್ಷಕ್ಕೆ ಎಲ್ಲಾ ವರ್ಗದ ಜನರ ಬೆಂಬಲ ವ್ಯಕ್ತವಾಗುತ್ತಿದೆ. ವರುಣಾದಲ್ಲಿ ಸ್ಪರ್ಧಿಸಲು ಬಿಜೆಪಿಯಿಂದ ಹತ್ತಾರು ಮಂದಿ ಆಕಾಂಕ್ಷಿಗಳಾಗಿದ್ದರೂ, ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಹಿನ್ನಡೆಯಾಗುವುದಿಲ್ಲ. ಸರ್ಕಾರವಿಲ್ಲದಿದ್ದರೂ, ಯತೀಂದ್ರ ಸಿದ್ದರಾಮಯ್ಯ ಅವರು ಶಾಸಕರಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಲಭ್ಯವಾದ ಅನುದಾನದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ಕೊಟ್ಟು ಉತ್ತಮವಾಗಿ ಕೆಲಸ ಮಾಡಿದ್ದಾರೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಏ.ಜೆ.ವೆಂಕಟೇಶ್ ಮಾತನಾಡಿ, ಕ್ಷೇತ್ರ ಮರು ವಿಂಗಡಣೆಯಾದ ಪ್ರಥಮ ಚುನಾವಣೆಯಲ್ಲಿ ವರುಣಾ ಕ್ಷೇತ್ರದ ಜನರು ಸಿದ್ದರಾಮಯ್ಯ ಅವರನ್ನು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸಿ ವಿಪಕ್ಷ ನಾಯಕರನ್ನಾಗಿ ಮಾಡಿದರು. 2ನೇ ಚುನಾವಣೆಯಲ್ಲಿ ಗೆಲ್ಲಿಸಿ ಸಿಎಂ ಮಾಡಿದರು. ನಂತರ ಬಿಜೆಪಿ ಅಲೆ ನಡುವೆಯೂ ಯತೀಂದ್ರ ಅವರನ್ನು ಕ್ಷೇತ್ರದ ಜನರು ಗೆಲ್ಲಿಸಿದ್ದಾರೆ. ಚುನಾವಣೆಯಲ್ಲಿ ವಿಪಕ್ಷಗಳ ಷಡ್ಯಂತರ ನಡೆಯಲು ಇಲ್ಲಿನ ಜನರು ಅವಕಾಶ ನೀಡಲ್ಲ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ನೋಡಲು ಮತದಾರರ ಅಪೇಕ್ಷೆಯೂ ಆಗಿರುವುದರಿಂದ ಅಂತಿಮ ಚುನಾವಣೆಗೆ ವರುಣಾ ಕ್ಷೇತ್ರವೇ ಆಯ್ಕೆ ಆಗಿರಲಿ ಎಂದು ನಮ್ಮೆಲ್ಲರ ಬಹುದೊಡ್ಡ ಬಯಕೆ ಎಂದರು.

ಗೋಷ್ಠಿಯಲ್ಲಿ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಮಾಜಿ ಉಪಾಧ್ಯಕ್ಷ ತಿರುಮಕೂಡಲು ಪುಟ್ಟು, ಗರ್ಗೇಶ್ವರಿ ಗ್ರಾಪಂ ಸದಸ್ಯ ಮಸ್ರೂರ್ ಅಹಮದ್, ಹಾಲಿ ಸದಸ್ಯ ಯಡದೊರೆ ಸಿದ್ದರಾಜು, ಮುಖಂಡರಾದ ಲಕ್ಷ್ಮಣ ಹಾಗೂ ಬಿಳಿಗೆರೆಹುಂಡಿ ಬಸವರಾಜು ಉಪಸ್ಥಿತರಿದ್ದರು.

ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಚಾಲನೆ



ಹುಣಸೂರು, ನ.14– ತಾಲೂಕಿನ ಸಿಬಿಟಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ 57 ಲಕ್ಷ ರೂ. ವೆಚ್ಚದ 4 ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ 18 ಶಾಲೆಗಳಿಗೆ 21 ಕೊಠಡಿಗಳು ಮಂಜೂರಾಗಿವೆ. 1964ರಲ್ಲಿ ಮಾಜಿ ಮುಖ್ಯಮಂತ್ರಿ ದಿ. ಡಿ.ದೇವರಾಜ ಅರಸು ಅವರು ಶಾಲೆಯಲ್ಲಿ 4 ಕೊಠಡಿಗಳನ್ನು ನಿರ್ಮಿಸಿದ್ದರು. ಇಂದು ನನ್ನ ಅಧಿಕಾರವಧಿಯಲ್ಲಿ ಇದೇ ಶಾಲೆಗೆ 4 ಕಟ್ಟಡ ನಿರ್ಮಿಸುತ್ತಿರುವುದು ಸಂತಸವಾಗಿದೆ. ಅಂದು ಅರಸು ಹಾಕಿಕೊಟ್ಟ ಮಾರ್ಗದರ್ಶನ ಹಾಗೂ ಅವರ ಆಶಯದಂತೆ ನಾನು ಕೂಡ ಈ ಗ್ರಾಮಕ್ಕೆ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸುತ್ತಿದ್ದೇನೆ ಎಂದರು.

ಶಾಲೆಗೆ ಹೈಟೆಕ್ ಶೌಚಾಲಯ: ಸಿಬಿಟಿ ಕಾಲೋನಿ ಶಾಲೆಗೆ ಶಿಕ್ಷಣ ಇಲಾಖೆಯಿಂದ 4.46 ಲಕ್ಷ ರೂ. ಹಾಗೂ ನರೇಗಾ ಯೋಜನೆಯಡಿ 74 ಸಾವಿರ ರೂ. ಸೇರಿದಂತೆ ಒಟ್ಟು 5.20 ಲಕ್ಷದಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಲಾಗುವುದು ಎಂದರು.

ಶಾಲಾ ಮಕ್ಕಳೊಂದಿಗೆ ಮಕ್ಕಳ ದಿನಾಚರಣೆ: ಮಾಜಿ ಪ್ರಧಾನಿ ದಿ.ಜವಾಹರ ಲಾಲ್ ನೆಹರು ಅವರ ಜನ್ಮ ದಿನಾಚರಣೆ ಅಂಗವಾಗಿ ಶಾಸಕ ಹೆಚ್.ಪಿ. ಮಂಜುನಾಥ್ ಅವರು ಶಾಲಾ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಮಕ್ಕಳ ದಿನಾಚರಣೆ ಆಚರಿಸಿದರು. ಬಳಿಕ ಮಾಜಿ ಪ್ರಧಾನಿ ಜವಾಹರ್ ಲಾಲ್ ನೆಹರು ಮತ್ತು ಮಾಜಿ ರಾಷ್ಟ್ರಪತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಇಬ್ಬರು ಮಹಾನ್ ನಾಯಕರು. ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಮಾರ್ಗದರ್ಶನದಂತೆ ಭವ್ಯ ಭಾರತದ ಪ್ರಜೆಗಳಾದ ನೀವು ಸತ್ಪ್ರಜೆಗಳಾಗಿ ಹೊರಹೊಮ್ಮಬೇಕೆಂದು ಶಾಸಕರು ಕರೆ ನೀಡಿದರು.

ನಾಮಫಲಕ ಅಳವಡಿಸಿ: 2019–2020ನೇ ಸಾಲಿನ ನಬಾರ್ಡ್ ಸಹಯೋಗದಲ್ಲಿ ಆರ್‌ಐಡಿಎಫ್ 25ರ ಯೋಜನೆಯಡಿ ತಾಲೂಕಿನಲ್ಲಿ 93 ಕಟ್ಟಡಗಳು ನಿರ್ಮಾಣಗೊಂಡಿದ್ದು, ಸರ್ಕಾರದ ನಿಯಮದಂತೆ ಶಿಷ್ಟಾಚಾರ ಪಾಲಿಸಿ ಕಟ್ಟಡಗಳಿಗೆ ನಾಮಫಲಕ ಅಳವಡಿಸಲು ಬಿಇಓ ಎಸ್. ರೇವಣ್ಣ ಅವರಿಗೆ ಶಾಸಕರು ಸೂಚಿಸಿದರು.

ಕಾರ್ಯಕ್ರಮದಲ್ಲಿ ಬಿಇಓ ಎಸ್. ರೇವಣ್ಣ, ಬಿಆರ್‌ಸಿ ಸಂತೋಷ್ ಕುಮಾರ್, ಗ್ರಾಪಂ ಉಪಾಧ್ಯಕ್ಷ ವೆಂಕಟೇಶ್, ಎಸ್‌ಡಿಎಂಸಿ ಅಧ್ಯಕ್ಷ ಮಾದೇಶ, ಮುಖಂಡರಾದ ಶಿವಲಿಂಗು, ಕುಪ್ಪುಸ್ವಾಮಿ, ವೆಳ್ಳಂಗಿರಿ, ನಾಗರಾಜ್, ಪಳನಿಸ್ವಾಮಿ, ದೊರೆಸ್ವಾಮಿ, ವೇಲು ಸ್ವಾಮಿ, ಆರ್ಮುಗಂ ಸೇರಿದಂತೆ ಇತರರಿದ್ದರು.

ಸಿದ್ದರಾಮಯ್ಯ ಸೋಲಿಸಲು ಬಿಜೆಪಿ ಜತೆ ಮೈತ್ರಿ ಇಲ್ಲ

ಅವರನ್ನು ಸ್ವಪಕ್ಷದವರೇ ಸೋಲಿಸುತ್ತಾರೆ ಬಿಡಿ : ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ



ಬೆಂಗಳೂರು, ನ.14– ಮುಂಬರುವ ಚುನಾವಣೆಗೆ ಕೋಲಾರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ– ಜೆಡಿಎಸ್ ಮೈತ್ರಿಯ ಪ್ರಶ್ನೆಯೇ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಸೋಲಿಸಲು ಜೆಡಿಎಸ್‌ಗೆ ಬಿಜೆಪಿ ಬೆಂಬಲ ಎಂದು ಕೆಲವೆಡೆ ವರದಿ ಆಗಿದೆ. ಯಾವುದೇ ಕಾರಣಕ್ಕೂ ಆ ಪಕ್ಷದ ಜತೆ ಒಪ್ಪಂದ, ಮೈತ್ರಿ ಮಾಡಿಕೊಳ್ಳಲ್ಲ. ಬಿಜೆಪಿ ಜೊತೆ ಯಾವುದೇ ಚರ್ಚೆ ಆಗಿಲ್ಲ, ಮುಂದೆಯೂ ಆಗಲ್ಲ ಎಂದರು. ಸಿದ್ದರಾಮಯ್ಯ ಅವರು ಕೋಲಾರದಲ್ಲೇ ನಿಲ್ಲಲಿ, ಬೇರೆ ಕಡೆ ನಿಲ್ಲಲಿ. ನಾವೇನು ಬಿಜೆಪಿ ಜತೆ ಸೇರಿ ಅವರ ವಿರುದ್ಧ ಕುತಂತ್ರ ಮಾಡಬೇಕಿಲ್ಲ. ಬಿಜೆಪಿಯವರಂತೆ ಸಣ್ಣ ಮಟ್ಟದಲ್ಲಿ ನಾನು ಮಾತನಾಡುವುದಿಲ್ಲ. ನಾವು ಏನೇ ಮಾಡಿದರೂ ಸೋಲಿಸುವುದು, ಗೆಲ್ಲಿಸುವುದು ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ನಮಗೆ ಕೋಲಾರದಲ್ಲಿ ಸಮಸ್ಯೆಯೇ ಇಲ್ಲ. ಪಕ್ಷದ ಅಭ್ಯರ್ಥಿ ಯಾರು ಅನ್ನುವ ನಿರ್ಣಯ ಆಗಿದೆ. ಬೇರೆ ಪಕ್ಷದ ಜತೆ ಸೇರಿ ತಂತ್ರಗಾರಿಕೆ ಮಾಡುವಂತದ್ದೇನೂ ಇಲ್ಲ ಎಂದು ಅವರು ಹೇಳಿದರು.

ಸಿದ್ದರಾಮಯ್ಯರನ್ನು ಅವರ ಪಕ್ಷದವರೇ ಸೋಲಿಸುತ್ತಾರೆ: ಸಿದ್ದರಾಮಯ್ಯ ಅವರೇ ಆಗಲಿ, ಇನ್ನೊಬ್ಬರೇ ಬರಲಿ, ನಮಗೆ ಹೆದರಿಕೆ ಇಲ್ಲ. ಕೋಲಾರದಲ್ಲಿ ನಮ್ಮಲ್ಲಿ ಸಮರ್ಥ ಅಭ್ಯರ್ಥಿಗಳು ಇದ್ದಾರೆ. ಹೀಗೆ ಹೇಳಿದ ಕೂಡಲೇ ಸಿದ್ದರಾಮಯ್ಯ ಬಗ್ಗೆ ನಾವು ಸಾಫ್ಟ್ ಅಂತ ಅಲ್ಲ. ಎಲ್ಲರ ರೀತಿ ನಾವು ವೀರಾವೇಶದಿಂದ ಮಾತನಾಡುವುದು ಪ್ರಯೋಜನ ಇಲ್ಲ. ಎಲ್ಲಿ ಏನು ಕೆಲಸ ಮಾಡಬೇಕೋ ಮಾಡುತ್ತೇವೆ. ಸಿದ್ದರಾಮಯ್ಯ ಅವರನ್ನು ನಾವು ಸೋಲಿಸಬೇಕಿಲ್ಲ, ಅವರ ಪಕ್ಷದವರೇ ಸೋಲಿಸುತ್ತಾರೆ ಎಂದು ಬಗ್ಗೆ ಹೆಚ್‌ಡಿಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

18ರಿಂದ ಪಂಚರತ್ನ ರಥಯಾತ್ರೆ: ಪಕ್ಷದ ಅಧ್ಯಕ್ಷರು ಹಾಗಾಗಿ ಸಿ.ಎಂ.ಇಬ್ರಾಹಿಂ ಅವರನ್ನು ಭೇಟಿ ಮಾಡಿದೆ. ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಪಕ್ಷದ ಸಂಘಟನೆಗೆ ನವೆಂಬರ್ 18ರಿಂದ ಪಂಚರತ್ನ ರಥಯಾತ್ರೆ ಪ್ರಾರಂಭ ಮಾಡಬೇಕು ಅಂತ ಇದ್ದೇವೆ. ಯಾವ ರೀತಿ ಮಾಡಬೇಕು ಎಂದು ಚರ್ಚೆ ಮಾಡಲು ಬಂದಿದ್ದೆ. ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯ ವಿಚಾರವಾಗಿಯೂ ಮಾತನಾಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿಗಳು ತಿಳಿಸಿದರು.

ನಾವು ಸಹ ಪ್ರತಿ ಅಭ್ಯರ್ಥಿಗಳಿಗೆ ಮುಂದಿನ ಆರು ತಿಂಗಳಿಗೆ ಯಾವ ರೀತಿ ಚುನಾವಣಾ ತಂತ್ರ ಅಳವಡಿಸಿಕೊಳ್ಳಬೇಕು. ಪ್ರತಿ ಬೂತ್ ಮಟ್ಟದಲ್ಲಿ ಯಾವ ರೀತಿ ಜವಾಬ್ದಾರಿ ನಿರ್ವಹಣೆ, ಪ್ರತಿ ಮನೆ ಮನೆಗೆ ಪಂಚರತ್ನ ಯೋಜನೆ ಮುಟ್ಟಿಸುವ ವಿಚಾರ, ಪ್ರತಿ ಅಭ್ಯರ್ಥಿ ಸೋಷಿಯಲ್ ಮೀಡಿಯಾದಲ್ಲಿ ಯಾವ ರೀತಿ ಇರಬೇಕು. ನಮ್ಮ ಪಕ್ಷ ಸೈಲೆಂಟ್ ಆಗಿ ಕೆಲಸ ಮಾಡ್ತಾ ಇದ್ದೇವೆ. ಅಧ್ಯಕ್ಷರು ನಿಲ್ಲಬೇಕು ಅಂತ ಎಂಟತ್ತು ಕ್ಷೇತ್ರದಲ್ಲಿ ಒತ್ತಡ ಇದೆ. ನಾನು, ಅವರು ಇಬ್ಬರೇ ಓಡಾಡಬೇಕಾಗಿದೆ.

ಇನ್ನೊಬ್ಬರು ಬಂದು ಇನ್ನೊಂದು ಬಣ್ಣ ಬಳಿಯುತ್ತಾರೆ: ಶಾಲೆಗಳಿಗೆ ಕೇಸರಿ ಬಣ್ಣ ಹಚ್ಚುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಹೆಚ್‌ಡಿಕೆ, ಇವರು (ಬಿಜೆಪಿ) ಕೇಸರಿ ಬಣ್ಣ ಹಚ್ಚುತ್ತಿದ್ದಾರೆ. ಮುಂದೆ ಬರುವವರು ಇನ್ನೊಂದು ಬಣ್ಣ ಹಚ್ಚುತ್ತಾರೆ. ಒಬ್ಬೊಬ್ಬರು ಒಂದೊಂದು ಬಣ್ಣ ಹಚ್ತಾರೆ. ಕಲಿಕೆಗೆ ಪ್ರಾಮುಖ್ಯತೆ ಕೊಡಬೇಕಿದೆ ಎಂದರು. ಸಂಸದ ಪ್ರತಾಪ್ ಸಿಂಹ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅವರಿಗೆ ಒಡೆಯೋದೇ ಕೆಲಸ. ಬಿಜೆಪಿಯವರಿಗೆ ಕಟ್ಟಿ ಅಭ್ಯಾಸ ಇಲ್ಲ. ಜನ ಇವರ ಹೇಳಿಕೆಗಳನ್ನು ಗಮನಿಸಬೇಕು. ಜನಕ್ಕೆ ನೆರಳು ಕೊಡೋದು ಮುಖ್ಯ, ನೆರಳು ಕೊಡೋದು ಯಾವುದಾದ್ರೇನು? ಎಂದರು.





ಮೈಸೂರಿನ ಮಂಚೇಗೌಡನಕೊಪ್ಪಲು ಶ್ರೀ ಘನನೀಲ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಮೂರನೇ ಕಾರ್ತಿಕ ಸೋಮವಾರದಂದು ಲಕ್ಷ ದೀಪೋತ್ಸವ ಮತ್ತು ವಿಶೇಷ ಪೂಜಾ ಮಹೋತ್ಸವದಲ್ಲಿ ಸಾವಿರಾರು ಜನ ಭಕ್ತಾದಿಗಳು ಪಾಲ್ಗೊಂಡಿದ್ದರು. ಚಿತ್ರದಲ್ಲಿ ಗುಡ್ಡಪ್ಪ ನಾಗರಾಜು, ಆರ್.ರವಿ (ಡೆಲ್ಲಿ), ನರಸೇಗೌಡ, ಕೃಷ್ಣ, ದೀಪು, ಮೂರ್ತಿ, ಕೆಂಪರಾಜು ಇನ್ನಿತರರನ್ನು ಕಾಣಬಹುದು.

ಯಶಸ್ವಿನಿ ಯೋಜನೆ ಜಾರಿ

ಮೈಸೂರು,ನ.14– ಮೈಸೂರಿನ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯರಿಗಾಗಿ ಯಶಸ್ವಿನಿ ವಿಮಾ ಯೋಜನೆ ಪ್ರಾರಂಭಿಸಲಾಗಿದೆ. ಯೋಜನೆಗೆ ನೋಂದಾಯಿಸಿಕೊಳ್ಳಲು ಡಿ.31 ಕೊನೆ ದಿನ. ವಿವರಗಳಿಗಾಗಿ ಸದಸ್ಯರು ಸಂಘದ ಕಾರ್ಯದರ್ಶಿಗಳ ಮೊ: 9741202595 ಸಂಪರ್ಕಿಸಿ.

ಹಸಿರು ನಮ್ಮ ಉಸಿರು

ಕಾರ್ತಿಕ ಲಕ್ಷ ದೀಪೋತ್ಸವ ಆಚರಣೆ



ಮೈಸೂರು, ನ.14(ಎಂಕೆ)– ಮೈಸೂರಿನ ವಿವೇಕಾನಂದ ನಗರದಲ್ಲಿರುವ ನಾಮದೇವ ಸಿಂಪಿ ಸಮಾಜದ ಶ್ರೀ ಪಾಂಡುರಂಗ ಶ್ರೀ ವಿಠ್ಠಲ–ರುಕ್ಮಾಯಿ ದೇವಸ್ಥಾನದಲ್ಲಿ ಸೋಮವಾರ ಕಾರ್ತಿಕ ಲಕ್ಷ ದೀಪೋತ್ಸವ ಆಚರಿಸಲಾಯಿತು.

ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಎಸ್.ಎ.ರಾಮದಾಸ್ ದೀಪ ಬೆಳಗಿಸುವ ಮೂಲಕ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಿದರು. ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಎಂ.ಜಿ.ರಮೇಶ್, ಉಪಾಧ್ಯಕ್ಷ ಎಲ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಪಿ. ರಾಜೇಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ಪಿ.ಆರ್. ಶಶಿಕಾಂತ್, ಪಿ.ಆರ್.ಗಣೇಶ್, ಎಸ್.ಆರ್.ಪ್ರಶಾಂತ್, ಅಶೋಕ್, ಎಂ.ಸಿ.ಗಿರೀಶ್ ಮತ್ತಿತರರಿದ್ದರು.

ಕಾಪಿ ಚೀಟಿ ತಂದಿದ್ದಕ್ಕೆ ನಿಂದಿಸಿದ ಶಿಕ್ಷಕಿ; ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣು

ಬೆಂಗಳೂರು, ನ.14– ಪರೀಕ್ಷೆಗೆ ಕಾಪಿ ಚೀಟಿ ತಂದ ಕಾರಣಕ್ಕೆ ಶಿಕ್ಷಕಿ ನಿಂದಿಸಿದ್ದರಿಂದ ಮನನೊಂದ ಅಮೃತಾ (16) ಎಂಬ ವಿದ್ಯಾರ್ಥಿನಿ ಬಾಣಸವಾಡಿ ಬಳಿಯ ಪಿಳ್ಳಾರೆಡ್ಡಿ ನಗರದಲ್ಲಿ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಪಿಳ್ಳಾರೆಡ್ಡಿ ನಗರದ ಅನಂತಕುಮಾರ್ ಮತ್ತು ಆಶಾ ದಂಪತಿಯ ಒಬ್ಬಳೇ ಮಗಳಾದ ಅಮೃತಾ, ದೊಡ್ಡ ಬಾಣಸವಾಡಿಯ ಮರಿಯಂ ನಿಲಯ ಆಂಗ್ಲಶಾಲೆಯಲ್ಲಿಎಸ್ಸೆಸ್ಸೆಲ್ಸಿ ಓದುತ್ತಿದ್ದಳು. ಶಾಲೆಯಲ್ಲಿ ನ.2ರಂದು ನಡೆದಿದ್ದ ಸಮಾಜ ವಿಜ್ಞಾನ ಪರೀಕ್ಷೆಗೆ ಅಮೃತಾ, ಕಾಪಿ ಚೀಟಿ ತೆಗೆದುಕೊಂಡು ಹೋಗಿದ್ದಳು. ಕಾಪಿ ಚೀಟಿ ನೋಡಿ ಉತ್ತರ ಬರೆಯುವಾಗ ಅಮೃತಾ, ಶಿಕ್ಷಕಿ ಶಾಲಿನಿ ಅವರ ಕೈಗೆ ಸಿಕ್ಕಿ ಬಿದ್ದಿದ್ದಳು ಎಂದು ರಾಮಮೂರ್ತಿನಗರ ಪೊಲೀಸರು ತಿಳಿಸಿದ್ದಾರೆ.

ಶಿಕ್ಷಕಿ ಶಾಲಿನಿ, ಕಾಪಿ ಚೀಟಿಯ ವಿಚಾರವಾಗಿ ಇತರೆ ವಿದ್ಯಾರ್ಥಿಗಳ ಸಮ್ಮುಖದಲ್ಲೇ ಅಮೃತಾಗೆ ಬೈದಿದ್ದರು. ಅಲ್ಲದೆ, ಪದೇ ಪದೆ ಕಾಪಿ ಚೀಟಿ ವಿಚಾರ ಪ್ರಸ್ತಾಪಿಸಿ ನಾಲ್ಕೈದು ದಿನಗಳಿಂದ ತರಗತಿಯಲ್ಲಿ ಅಮೃತಾಗೆ ನಿಂದಿಸುತ್ತಿದ್ದರು. ಶಾಲೆಯಲ್ಲಿ ಸಹಪಾಠಿಗಳ ಎದುರು ತನಗೆ ಆದ ಅವಮಾನದಿಂದ ಬೇಸರಗೊಂಡಿದ್ದ ಅಮೃತಾ, ಭಾನುವಾರ ಸಂಜೆ ಪೋಷಕರು ಮನೆಯಿಂದ ಹೊರಗೆ ಹೋಗಿದ್ದಾಗ ಕೊಠಡಿಯಲ್ಲಿನೇಣು ಹಾಕಿಕೊಂಡಿದ್ದಾಳೆ ಎಂದು ಪೊಲೀಸರು ಹೇಳಿದ್ದಾರೆ.

ಶವವಿಟ್ಟು ಪ್ರತಿಭಟನೆ: ಅಮೃತಾ ಪೋಷಕರು ಶಾಲೆ ಆವರಣದಲ್ಲಿ ಸೋಮವಾರ ಮಗಳ ಶವವಿಟ್ಟು ಪ್ರತಿಭಟನೆ ಮಾಡಿದರು. "ಮಗಳ ಸಾವಿಗೆ ಶಿಕ್ಷಕಿ ಶಾಲಿನಿಯೇ ಕಾರಣ. ಕ್ಲಾಸ್ ಟೀಚರ್ ಶಾಲಿನಿ ಬರುವವರೆಗೂ ಶವ ತೆಗೆದುಕೊಂಡು ಹೋಗುವುದಿಲ್ಲ" ಎಂದು ವಿದ್ಯಾರ್ಥಿನಿ ತಾಯಿ ಆಶಾ ಪಟ್ಟು ಹಿಡಿದರು. ಬಳಿಕ ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಜಯಪ್ರಕಾಶ್ ಶಾಲೆಗೆ ಭೇಟಿ ಕೊಟ್ಟು ವಿದ್ಯಾರ್ಥಿನಿಯ ಪೋಷಕರನ್ನು ಸಮಾಧಾನಪಡಿಸಿದರು.

ಪರೀಕ್ಷೆಯಲ್ಲಿ ನಕಲು ಮಾಡಿದ ಕಾರಣಕ್ಕೆ ಶಿಕ್ಷಕರು ನಿಂದಿಸಿದರೆಂದು ಮನನೊಂದು ರಾಜಧಾನಿಯಲ್ಲಿ ಕಳೆದೊಂದು ವಾರದಲ್ಲಿಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕೊರೊನಾದಿಂದ ಮಾರಾಟಕ್ಕಿಟ್ಟ ಆಸ್ಪತ್ರೆಗಳೂ ಆದಾಯ ಗಳಿಸಿದವು!

● ವಿಪಕ್ಷ ನಾಯಕ ಸಿದ್ದರಾಮಯ್ಯ ಅಚ್ಚರಿ ● ಮಲ್ಟಿಸ್ಪೆಷಲ್ ಆಸ್ಪತ್ರೆಗಳು ಜನಸ್ನೇಹಿ ಆಗಬೇಕು



ಮೈಸೂರು,ನ.14(ಎಂಟಿವೈ)–ಮುಚ್ಚುವ ಹಂತಕ್ಕೆ ತಲುಪಿದ್ದ ಹಲವು ಖಾಸಗಿ ಆಸ್ಪತ್ರೆಗಳು ಕೊರೊನಾ ಸಂದರ್ಭದಲ್ಲಿ ಆದಾಯ ಗಳಿಸಿಕೊಂಡು ಸುಧಾರಿಸಿದ್ದು, ಮಲ್ಟಿಸ್ಪೆಷಲ್ ಆಸ್ಪತ್ರೆಗಳು ಜನಸ್ನೇಹಿಯಾಗಿ ಸೇವೆ ಒದಗಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಮೈಸೂರಲ್ಲಿ ಖಾಸಗಿ ಆಸ್ಪತ್ರೆಯೊಂದನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊರೊನಾಗೂ ಮುನ್ನ ಹಲವು ಖಾಸಗಿ ಆಸ್ಪತ್ರೆಗಳು ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿದ್ದವು. ಕೆಲವರು ಆಸ್ಪತ್ರೆಗಳನ್ನು ಮಾರುವುದಕ್ಕೆ ಮುಂದಾಗಿದ್ದರು. ಆದರೆ, ಕೊರೊನಾ ಕಾಲದಲ್ಲಿ ಬಹುತೇಕ ಖಾಸಗಿ ಆಸ್ಪತ್ರೆಗಳಿಗೆ ಆದಾಯ ಗಳಿಕೆಯಲ್ಲಿ ಸುಧಾರಣೆ ಕಂಡಿವೆ ಇದರಿಂದ ಮಾರಲು ಮುಂದಾಗಿದ್ದ ಆಸ್ಪತ್ರೆಗಳನ್ನು ಮುಂದುವರೆಸುವ ಸುಸ್ಥಿತಿ ನಿರ್ಮಾಣವಾಗಿದೆ ಎಂದರು. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು ಜನಸ್ನೇಹಿಯಾಗಿರಬೇಕು. ಅನಿವಾರ್ಯ ಸಂದರ್ಭ ಬಡವರು ಹಾಗೂ ಮಧ್ಯಮ ವರ್ಗದವರು ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆಂದು ಬರುತ್ತಾರೆ. ಇಂತಹ ಸಂದರ್ಭದಲ್ಲಿ ಸುಲಿಗೆ ಮಾಡಬಾರದು. ನಷ್ಟ ಮಾಡಿಕೊಂಡು ಚಿಕಿತ್ಸೆ ನೀಡಿ ಎನ್ನುವುದಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಜನಸ್ನೇಹಿ ವಾತಾವರಣ ಸೃಷ್ಟಿಸಬೇಕು ಎಂದು ಸಲಹೆ ನೀಡಿದರು.

ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಿ: ಎಲ್ಲರೂ ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು. ಯಾವುದೇ ಕಾರಣಕ್ಕೂ ಆರೋಗ್ಯವನ್ನು ನಿರ್ಲಕ್ಷಿಸಬಾರದು. ಅನಾರೋಗ್ಯಕ್ಕೆ ತುತ್ತಾದಾಗ ಚಿಕಿತ್ಸೆ ಪಡೆಯುವುದು ಒಂದು ಭಾಗವಾದರೆ, ರೋಗ ಬರದಂತೆ ನೋಡಿಕೊಳ್ಳುವುದು ಮತ್ತೊಂದು ಭಾಗ ಹಾಗಾಗಿ ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಬೇಕು. ಎಲ್ಲರೂ ಯೋಗ, ಪ್ರಾಣಾಯಾಮ, ಧ್ಯಾನ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಜನ ಸೇವೆ ಮಾಡಲು ನಾನು ಹೆಚ್ಚು ದಿನ ಬದುಕಬೇಕೆಂಬ ಆಸೆ: ಜನರ ಸೇವೆ ಮಾಡಲು ನಾನು ಹೆಚ್ಚು ವರ್ಷ ಬದುಕಬೇಕು ಎಂಬ ಆಸೆ ಇದೆ. ಎಷ್ಟು ವರ್ಷ ಬದುಕಿರುತ್ತೇನೋ ಗೊತ್ತಿಲ್ಲ. ನನಗೆ ಹೆಚ್ಚು ದಿನ ಬದುಕಬೇಕೆಂಬ ಆಸೆಯಂತೂ ಇದೆ. ಆದರೆ, ನನಗೆ ಡಯಾಬಿಟಿಸ್ ಬಂದು 10 ವರ್ಷ ಆಯಸ್ಸು ಕುಗ್ಗಿದೆ. ಆದರೂ, 76 ವರ್ಷ ಬದುಕಿದ್ದೇನೆ. ಯುವಕನಾಗಿದ್ದಾಗ ಆರೋಗ್ಯವನ್ನು ಕಡೆಗಣಿಸಿದ್ದೆ. ಅದರ ಫಲವಾಗಿ ಡಯಾಬಿಟಿಸ್ ಬಂದಿದೆ. ಆದರೂ, ಚಿಕಿತ್ಸೆ ಪಡೆದುಕೊಂಡು ಫಿಟ್ ಆಗಿದ್ದೇನೆ.